ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 1 ಸೋಮವಾರ 2025

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23 ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695 ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 135

ಪುಟಗಳು: 12

₹4

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com,
website: www.mysurumithra.com

COMMERCIAL SHOP For Rent
MAIN ROAD
Siddharthanagar, Mysore
24/7 Water & Electricity
CCTV Surveillance
Call: 93414 14191, 98456 50370

IMMEDIATE REQUIREMENT
SYSTEM ADMINISTRATOR
Qualification: Diploma in Computer Hardware and Networking with minimum 3 years of experience.
send your CV to hr@jirsm.com
Contact:- 9343299998/9880863003

ಬೇಕಾಗಿದಾರೆ
FLIPKART AMAZON
ಕಂಪನಿಗೆ OFFICE ಕೆಲಸಕ್ಕೆ
ಯುವಕ ಯುವತಿಯರು
(18K - 45K) 7TH, 10TH,
Any Degree Pass/
Fail ಊಟ ವಸತಿ ಇರುತ್ತದೆ
7625020184/ 7204412304

ಬೇಕಾಗಿದ್ದಾರೆ
ಮೈಸೂರಿನ ಖಾಸಗಿ ಕಂಪನಿಗೆ,
Fortuner ಮತ್ತು Automatic
ಕಾರು ಓಡಿಸುವ ಡ್ರೈವರ್ಸ್‌ಗಳು ಬೇಕಾಗಿದ್ದಾರೆ.
ಸಂಬಳ: 25,000
ಮತ್ತು ಟೆಲಿಕಾಲಿಂಗ್ ಕಛೇರಿಯ ಕೆಲಸ
ಮಾಡಲು ಹುಡುಗಿಯರು ಬೇಕಾಗಿದ್ದಾರೆ.
8548089469/9164946160



DESIGNED TO MAKE EVERY SPACE BEAUTIFUL
2 BHK
HOME INTERIORS @
₹2.9 LAKHS
HOME SPACE MART
Kushalnagar • Mysuru • Bengaluru
For Site Vist :
9108923123

ಮಾನ್ಯ ಮೈಸೂರಿನ ಮಹಾ ಜನತೆಯ ಹಾಗೂ ಕೊಡಗಿನ ಬಂಧು ಮಿತ್ರರೇ
ಕೊಡವರ ಕೈಲ್‌ಪೋದ್ ಹಬ್ಬದ ಪ್ರಯುಕ್ತ ಮೈಸೂರು ಹ್ಯಾಮ್ ಶಾಪ್ ಹಾಗೂ ರೂಪೇಶ್ ಪಿಗ್ ಫಾರಂ ವತಿಯಿಂದ ಶುಭಾಶಯಗಳು
ತಾಜಾ ಹಾಗೂ ಪರಿಶುದ್ಧವಾದ ಹಂದಿ ಮಾಂಸವನ್ನು 325/– ರಿಯಾಯಿತಿ ದರದಲ್ಲಿ ದಿನಾಂಕ : 02/09/2025 ಮತ್ತು ದಿ: 03/09/2025 ರಂದು ಮಾರಾಟ ಮಾಡಲಾಗುತ್ತದೆ
ಹೋಮ್ ಡೆಲಿವರಿಗಾಗಿ ಒಂದು ದಿನ ಮುಂಚಿತವಾಗಿ ಸಂಪರ್ಕಿಸಿ
ಸ್ಥಳ: ರಿಂಗ್ ರೋಡ್, ವೈಟ್ ಅಪಾರ್ಟ್‌ಮೆಂಟ್ ಹತ್ತಿರ, ಹಿನಕಲ್, ಮೈಸೂರು ಮತ್ತು ಪುಷ್ಪಾಶ್ರಮದ ಹತ್ತಿರ ಹಳೇ ಕೆಸರೆ ರಸ್ತೆ, ರಿಂಗ್ ರೋಡ್, ಮೈಸೂರು.
1. ಶಿವಶಂಕರ್ – 8722037145
2. ರಮೇಶ – 7349457767
3. ರೂಪೇಶ್ – 8884037399
4. ಬಾಲರಾಜ್ – 6360675058
5. ರೋಷನ್ ಕಾರ್ಯಪ್ಪ – 7411002890

COMMERCIAL SITE FOR SALE
40x60 S/F
80 feet Road, Vijayanagar
4th Stage, 2nd Phase.
Contact : 99459 85333 / 96637 12345

100% TEAK WOOD
FACTORY FINISH DOORS & FRAMES
@ FACTORY DEPOT RATES
10 YEARS WARRANTY*
9901291267
9731591267

ಮಾರಾಟಕ್ಕಿದೆ
(ಟಿ.ನರಸೀಪುರ ಮುಖ್ಯ ರಸ್ತೆ)
1.20 ಗುಂಟೆ ಕಮರ್ಷಿಯಲ್ ಜಾಗ
(ಆಸ್ಪತ್ರೆ, ಸ್ಕೂಲ್, ಹೋಟೆಲ್ ಹಾಗೂ ಪೆಟ್ರೋಲ್ ಬಂಕ್‌ಗೆ ಸೂಕ್ತ ಜಾಗ).
ಮಾಲೀಕರು ಸಂಪರ್ಕಿಸಿ:
Mob: 9741624588

NEWLY LAUNCHED PROJECT IN YELWALA
"PARISARA SIRI" - MYSORE
RESIDENTIAL PLOTS
@ JUST Rs. 675/- Sqft.,
2 KMS FROM YELWALA,
1 KM FROM NH 275
NEAR HORTICULTURE UNIVERSITY
MADIKERI – MYSORE HIGHWAY
DIMENSION
"30x40" "30x50" "40x60"
Contact: 9740391228



MS GOLD & DIAMONDS
MYSURU
Celebrating 1st YEAR ANNIVERSARY

FLAT 8% MAKING CHARGE
For Gold Ornaments (Any Design)
5 Gm Above Individual Item

FLAT 30% OFF ON MAKING CHARGE
PRECIOUS & UNCUT JEWELLERY

FLAT 25% OFF ON MAKING CHARGE
18 KT LIFE STYLE JEWELLERY

FLAT 25% OFF ON DIAMOND VALUE

OFFER VALID 2025 SEPTEMBER 4 5 6 7
- Offer Applicable for Live Sale Only
- Plan ahead! Select your ornaments 4 days prior to avoid last-minute rush

Offer only BN Rd. MYSURU 9932 891 919
T&C Apply
www.msgoldanddiamonds.com



NOT GETTING YOUR STAR OF MYSORE & ಮೈಸೂರು ಮಿತ್ರ
Call: 98452-96447 / 99003-82840



ಶ್ರೀ ಪಿ.ಕೆ. ಶಿವರಾಮ್

ಪ್ರಥಮ ದರ್ಜೆ ಗುತ್ತಿಗೆದಾರರು ಮತ್ತು ಮಾಲೀಕರು, ಆರ್‌ಕೆಬಿ ಬಿಲ್ಡ್ ಪ್ರೊ.

ಜನನ: 18.12.1959 ನಿಧನ: 24.08.2025

ಉತ್ತರಕ್ರಿಯಾದಿ ಭೂಶಾಂತಿ ಕಾರ್ಯಕ್ರಮ

ಜೀವನದಲ್ಲಿ ಶಿಸ್ತು, ಸಂಸ್ಕಾರ ಮತ್ತು ಶ್ರೇಷ್ಠವಾದ ಬದುಕನ್ನು ನಡೆಸಿ, ಪ್ರೀತಿ ವಾತ್ಸಲ್ಯದ ಪ್ರತಿರೂಪಕವಾಗಿ, ಎಲ್ಲರಿಗೂ ಪ್ರೀತಿಯ ಚಿಲುಮೆಯಾಗಿ ಸದಾಕಾಲ ಎಲ್ಲರ ಒಳಿತನ್ನು ಬಯಸಿದ ನಮ್ಮ ಶ್ರೀ ಪಿ.ಕೆ.ಶಿವರಾಮ್ ಅವರು ದಿನಾಂಕ: 24.08.2025 ನೇ ಭಾನುವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಮೃತರ ಉತ್ತರಕ್ರಿಯಾದಿ ಭೂಶಾಂತಿ ಕಾರ್ಯಕ್ರಮವನ್ನು ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲ್ಲೂಕಿನ ಪುರ ಗ್ರಾಮದ ಸಮೀಪವಿರುವ ತೇಗನಹಳ್ಳಿ ಶ್ರೀಮತಿ ಸಾಕಮ್ಮ ಮತ್ತು ಶ್ರೀ ಕಾಳೇಗೌಡ ಫಾರಂನಲ್ಲಿ ದಿನಾಂಕ: 03.09.2025 ನೇ ಬುಧವಾರ ಬೆಳಗ್ಗೆ 11.30 ಗಂಟೆಗೆ ನೆರವೇರಿಸಲಾಗುವುದು

ಇಂತಿ ದುಃಖತಪ್ತರು: ಪ್ರಾತಃಸ್ಮರಣೀಯರಾದ ಶ್ರೀಮತಿ ಸಾಕಮ್ಮ ಮತ್ತು ಕಂಟ್ರಾಕ್ಟರ್ ಛೇರ್ಮನ್ ಕಾಳೇಗೌಡರ ಕುಟುಂಬ ವರ್ಗ ಮತ್ತು ಆರ್‌ಕೆಬಿ ಸಮೂಹ ಸಂಸ್ಥೆಗಳು

ನಿಮ್ಮ ದುಡಿಮೆಗೆ,
ನಿಮ್ಮ ಜಾಣ್ಮೆಗೆ,
ನಿಮ್ಮ ಪ್ರೀತಿಗೆ
ಕೃತಜ್ಞತೆಯ
ಕೊಳವಾಗಿದ್ದೇವೆ ನಾವು.

RKB BUILD PRO

ಹೋಗಿ ಬನ್ನಿ
ಮತ್ತೆ ಇದೀ ಮನೆಯಲ್ಲಿ
ಒಂದು ಜೀವವಾಗಿ ಮರಳಿ ಬನ್ನಿ.
ಇದು ನಮ್ಮ ಹೃತ್ಪೂರ್ವಕ ಶ್ರದ್ಧಾಂಜಲಿ.

ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನ ಎಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.

ಮಾನವೀಯತೆ ಮೆರೆದ ಪೊಲೀಸರು



ತಾಂತ್ರಿಕ ಸಮಸ್ಯೆಯಿಂದ ಕೆಟ್ಟುನಿಂತ ಲಾರಿಯನ್ನು ತಳ್ಳುತ್ತಿರುವ ಪೊಲೀಸ್ ಸಿಬ್ಬಂದಿ ಹಾಗೂ ಸಾರ್ವಜನಿಕರು.

ಮೈಸೂರು, ಆ.31(ವಿವಿಹೆಚ್)– ಇದೇ ಸೆ.1 ಮತ್ತು 2ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮೈಸೂರು ಪ್ರವಾಸ ಕೈಗೊಳ್ಳಲಿದ್ದು, ಈ ಹಿನ್ನೆಲೆಯಲ್ಲಿ ಶನಿವಾರ ಸಂಜೆ ರಾಷ್ಟ್ರಪತಿಗಳ ಕಾನ್ವೆ ಹೊರಡುವ ರಸ್ತೆಗಳಲ್ಲಿ ಪೂರ್ವಾಭ್ಯಾಸ ನಡೆಸಲಾಯಿತು. ಈ ವೇಳೆ ನಗರದ ಗನ್‌ಹೌಸ್ ಪಾಯಿಂಟ್ ಬಳಿ ಎಂಸ್ಯಾಂಡ್ ತುಂಬಿದ ಲಾರಿಯೊಂದು ತಾಂತ್ರಿಕ ಸಮಸ್ಯೆಯಿಂದ ಕೆಟ್ಟುನಿಂತಿತು. ಇದನ್ನು ಕಂಡ ಪೊಲೀಸರು ತಕ್ಷಣ ಕಾರ್ಯೋನ್ಮುಖರಾಗಿ ಈ ಭಾರೀ ವಾಹನವನ್ನು ಹಿಮ್ಮುಖವಾಗಿ ತಳ್ಳಿ, ಜೆಎಸ್‌ಎಸ್ ಮಹಾವಿದ್ಯಾಪೀಠದ ಬದಿಯಲ್ಲಿರುವ ರಾಮಾನುಜ ರಸ್ತೆಯಲ್ಲಿ ಪಾರ್ಕ್ ಮಾಡಿಸಿದರು. ಈ ಕಾರ್ಯದಲ್ಲಿ ದೇವರಾಜ ಟ್ರಾಫಿಕ್ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಮಮತಾ, ಪಿಎಸ್‌ಐ ಮಂಜುನಾಥ್, ಸುನೀಲ್ ಕುಮಾರ್, ಜಿ.ಎನ್.ಜಗದೀಶ್, ಎಂ.ಎಸ್. ಬಾಬು, ಸಂತೋಷ್, ಸಿದ್ದರಾಜು ಇದ್ದರು.

ದಸರಾವನ್ನು ಇಂತಹ ಧರ್ಮದವರೇ ಉದ್ಘಾಟಿಸಬೇಕೆಂಬ ನಿಯಮವಿಲ್ಲ

ಲೇಖಕಿ ಬಾನು ಮುಷ್ತಾಕ್ ಆಯ್ಕೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮರ್ಥನೆ

ಹೈದರಾಲಿ, ಟಿಪ್ಪು, ಮಿರ್ಜಾ ಇಸ್ಮಾಯಿಲ್ ದಸರಾ ಆಚರಿಸಿದ್ದರು, ಕವಿ ನಿಸಾರ್ ಅಹಮದ್ ಉದ್ಘಾಟಿಸಿದ್ದರು



ಮೈಸೂರು,ಆ.31(ಎಂಟಿವೈ)– ದಸರಾ ಮಹೋತ್ಸವ ಜಾತ್ಯಾತೀತ ಮತ್ತು ಧರ್ಮಾತೀತವಾಗಿ ಆಚರಿಸುವ ನಾಡಹಬ್ಬವಾಗಿದ್ದು, ಈ ಹಿನ್ನೆಲೆಯಲ್ಲಿ ಅಂತರರಾಷ್ಟ್ರೀಯ ಪ್ರಶಸ್ತಿ ಪಡೆದ ಬೆರಳೆಣಿಕೆಯ ಸಾಹಿತಿಗಳಲ್ಲಿ ಒಬ್ಬರಾಗಿರುವ ಸಾಹಿತಿ, ಹೋರಾಟಗಾರ್ತಿ ಬಾನು ಮುಷ್ತಾಕ್ ಅವರು ದಸರಾ ಉದ್ಘಾಟಿಸಲು ಸೂಕ್ತ ಎಂದು ದಸರಾ ಉನ್ನತ ಮಟ್ಟದ ಸಮಿತಿಯಲ್ಲಿ ಆಯ್ಕೆ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಮರ್ಥಿಸಿಕೊಂಡರು.

ವಿವಿಧ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಮೈಸೂರಿನ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮೈಸೂರು ದಸರಾ ಉದ್ಘಾಟಕರ ಆಯ್ಕೆಗೆ ಸಂಬಂಧಿಸಿದಂತೆ ಉನ್ನತ ಮಟ್ಟದ ಸಮಿತಿಯಲ್ಲಿ ನನಗೆ ಅಧಿಕಾರ ನೀಡಲಾಗಿತ್ತು. ನಾನು ಬೂಕರ್ ಪ್ರಶಸ್ತಿ ವಿಜೇತರಾದ ಬಾನು ಮುಷ್ತಾಕ್ ಅವರಿಗೆ ದಸರಾ ಉದ್ಘಾಟನೆಗೆ ಅವಕಾಶ ನೀಡಬೇಕೆಂದು ತೀರ್ಮಾನಿಸಿದೆ. ಹಿಂದೆಯೂ ಕವಿ ನಿಸಾರ್ ಅಹಮದ್ ಅವರು ದಸರಾ ಉದ್ಘಾಟಿಸಿದ್ದಾರೆ. ದಸರಾ ನಾಡ ಹಬ್ಬ, ಸಾಂಸ್ಕೃತಿಕ ಆಚರಣೆಯಾಗಿದೆ ಎಂದರು.

ನಾಡಹಬ್ಬವನ್ನು ಇಂತಹ ಧರ್ಮದವರೇ ಉದ್ಘಾಟಿಸಬೇಕೆಂಬ ನಿಯಮವಿಲ್ಲ. ನಾಡಹಬ್ಬ ಎಲ್ಲರಿಗೂ ಹಬ್ಬವೇ. ಹಿಂದೂ, ಕ್ರಿಶ್ಚಿಯನ್, ಬೌದ್ಧ, ಜೈನರೂ ನಾಡಹಬ್ಬದಲ್ಲಿ ಪಾಲ್ಗೊಳ್ಳಲಿದ್ದಾರೆ. ಮಹಾರಾಜರ ಆಡಳಿತ ಇಲ್ಲದಿರುವಾಗ ಹೈದರಾಲಿ, ಟಿಪ್ಪು ಸುಲ್ತಾನ್ ದಸರಾ ಆಚರಿಸುತ್ತಿದ್ದರು. ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಅವರು ದಸರಾ ಆಚರಿಸಿದ್ದಾರೆ. ಇದೊಂದು ಧರ್ಮಾತೀತ, ಜಾತ್ಯಾತೀತ ಹಬ್ಬ. ಕರ್ನಾಟಕದಲ್ಲಿ ಬೂಕರ್ ಪ್ರಶಸ್ತಿ ಪಡೆದ ಸಾಹಿತಿಗಳು ಬಹಳ ಕಡಿಮೆ. ಬಾನು ಮುಷ್ತಾಕ್ ಅವರನ್ನು ದಸರಾ ಉದ್ಘಾಟಕರಾಗಿ ಆಯ್ಕೆ ಮಾಡಲಾಗಿದೆ. ಈ ಬಗ್ಗೆ ಧರ್ಮಾಂಧರು ಮಾತ್ರ ವಿರೋಧಿಸುತ್ತಿದ್ದಾರೆ. ಅವರಿಗೆ ಇತಿಹಾಸ ತಿಳಿದಿಲ್ಲ, ಇತಿಹಾಸವನ್ನು ತಿಳಿದುಕೊಳ್ಳುವುದು ಒಳ್ಳೆಯದು ಎಂದು ಸಲಹೆ ನೀಡಿದರು.

ಬಾನು ಮುಷ್ತಾಕ್ ಅವರಿಗೆ ಕನ್ನಡದ ಬಗ್ಗೆ ಗೌರವವಿಲ್ಲ ಎಂಬ ಟೀಕೆ ವ್ಯಕ್ತವಾಗುತ್ತಿರುವ ಬಗ್ಗೆ ಪತ್ರಕರ್ತರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಿಎಂ ಸಿದ್ದರಾಮಯ್ಯ, ಕನ್ನಡ ತಾಯಿಯ ಬಗ್ಗೆ ಗೌರವ, ಅಭಿಮಾನ, ಪ್ರೀತಿ ಇಲ್ಲದೆ ಇದ್ದರೆ ಬಾನು ಮುಷ್ತಾಕ್ ಕನ್ನಡದಲ್ಲಿ ಬರೆದಿದ್ದಾರಾ? ಎಂದು ಪ್ರಶ್ನಿಸಿದರಲ್ಲದೆ, ಬಿಜೆಪಿಯವರು ರಾಜಕೀಯವಾಗಿ ಮಾತನಾಡುತ್ತಾರೆಯೇ ಹೊರತಾಗಿ ಜಾತ್ಯಾತೀತವಾಗಿ ಮಾತನಾಡುವುದಿಲ್ಲ. ಬಿಜೆಪಿಯವರು ಕುಂಟುನೆಪವನ್ನು ಹುಡುಕುತ್ತಿದ್ದಾರೆ ಎಂದು ಕಿಡಿಕಾರಿದರು.

ಢೋಂಗಿಗಳ ಮಾತು: ದನದ ಮಾಂಸ ತಿಂದು ಬರುತ್ತಾರೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ನೀಡಿರುವ ಹೇಳಿಕೆ ಬಗ್ಗೆ ಪ್ರತಿಕ್ರಿಯೆ ನೀಡಿ ಇದೆಲ್ಲಾ ಢೋಂಗಿಗಳು ಮಾತನಾಡುವುದು. ಅವರು ಮಾತನಾಡುವುದಕ್ಕೆಲ್ಲ ನಾವು ತಲೆಕೆಡಿಸಿಕೊಳ್ಳುವುದಿಲ್ಲ ಎಂದರು.

ದೀಪಾ ಭಾಸ್ತಿಯವರನ್ನು ಸನ್ಮಾನಿಸಲಾಗಿದೆ: 'ಎದೆಯ ಹಣತೆ' ಭಾಷಾಂತರ ಮಾಡಿದ ದೀಪಾ ಭಾಸ್ತಿಯವರಿಗೂ ಅರಮನೆಯ ಮುಂದೆ ಗೌರವ ಸಲ್ಲಿಸಬೇಕಿತ್ತು ಎಂಬ ಮಾಧ್ಯಮಗಳ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿ, ಸರ್ಕಾರ ಈಗಾಗಲೇ ದೀಪಾ ಭಾಸ್ತಿ ಹಾಗೂ ಬಾನು ಮುಷ್ತಾಕ್ ಅವರಿಗೆ ತಲಾ ಹತ್ತು ಲಕ್ಷ ರೂಗಳನ್ನು ನೀಡಿ ಇಬ್ಬರನ್ನು ಸನ್ಮಾನಿಸಿ, ಗೌರವಿಸಿದೆ ಎಂದರು.

ಧರ್ಮಯಾತ್ರೆ: ಬಿಜೆಪಿಯವರು ಧರ್ಮಸ್ಥಳಕ್ಕೆ ಧರ್ಮಯಾತ್ರೆ ಕೈಗೊಳ್ಳುತ್ತಿರುವ ಬಗ್ಗೆ ಮಾತನಾಡಿ, ಬಿಜೆಪಿ ಎಲ್ಲದರಲ್ಲಿಯೂ ರಾಜಕೀಯ ಮಾಡುತ್ತಾರೆ. ಯಾತ್ರೆ ಹೋದರೆ ಹೋಗಲಿ. ಎಸ್‌ಐಟಿ ರಚನೆಯನ್ನು ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರೇ ಸ್ವಾಗತಿಸಿದ್ದಾರೆ. ಸತ್ಯ ಹೊರಬರಬೇಕೆಂಬ ಕಾರಣದಿಂದ ಎಸ್‌ಐಟಿ ರಚಿಸಲಾಗಿದೆ. ಇಲ್ಲದಿದ್ದರೆ ಧರ್ಮಸ್ಥಳದ ಬಗ್ಗೆ ಯಾವಾಗಲೂ ಅನುಮಾನದ ತೂಗುಗತ್ತಿ ಇರುತ್ತಿತ್ತು. ಈ ಸಂದೇಹವನ್ನು ಹೋಗಲಾಡಿಸಲು ಎಸ್‌ಐಟಿ ರಚನೆ ಮಾಡಲಾಗಿದೆ. ಫಿರ್ಯಾದುದಾರ ನ್ಯಾಯಾಲಯದ ಮುಂದೆ ಹೋಗಿ 164 ಹೇಳಿಕೆಯನ್ನು ನೀಡಿದ್ದಾರೆ. ಅನೇಕ ಸಂಘ–ಸಂಸ್ಥೆಗಳು ಎಸ್‌ಐಟಿ ರಚಿಸಬೇಕೆಂದು ಒತ್ತಾಯ ಮಾಡಿದ್ದವು. ಬಿಜೆಪಿಯವರು ಎಸ್‌ಐಟಿ ರಚನೆಯನ್ನು ಸ್ವಾಗತಿಸಿದ್ದರು. ಈಗ ಮಾತ್ರ ರಾಜಕೀಯ ಮಾಡುತ್ತಿದ್ದಾರೆ. ಅವರಿಗೆ ಧರ್ಮ ಗೊತ್ತಿಲ್ಲ ಎಂದರು. ಈ ಸಂದರ್ಭದಲ್ಲಿ ಸಚಿವರಾದ ಕೆ.ವೆಂಕಟೇಶ್, ಜಮೀರ್ ಅಹ್ಮದ್ ಖಾನ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ.ವಿಜಯ್‌ಕುಮಾರ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಾಜ್ಯ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಧರ್ಮಸ್ಥಳ ಪ್ರಕರಣಕ್ಕೆ ಬೇರೆ ತನಿಖೆ ಅಗತ್ಯವಿಲ್ಲ

"ಧರ್ಮಸ್ಥಳದ ಪ್ರಕರಣವನ್ನು ಉನ್ನತ ಮಟ್ಟದ ತನಿಖೆಗೆ ಒಪ್ಪಿಸಬೇಕೆಂದು ಬಿಜೆಪಿ ಒತ್ತಾಯಿಸುತ್ತಿರುವುದರಲ್ಲಿ ಅರ್ಥವಿಲ್ಲ. ಈ ಹಿಂದೆ ಬಿಜೆಪಿ ಅಧಿಕಾರದಲ್ಲಿದ್ದಾಗ ಒಂದೇ ಒಂದು ಪ್ರಕರಣವನ್ನು ಸಿಬಿಐಗೆ ವಹಿಸಲಿಲ್ಲ. ಈಗ ರಾಜಕೀಯಕ್ಕಾಗಿ ಸಿಬಿಐ ತನಿಖೆಗೆ ಒತ್ತಾಯಿಸುತ್ತಿದ್ದಾರೆ. ಬಿಜೆಪಿಗರ ಈ ಢೋಂಗಿತನ ಜನರಿಗೆ ಅರ್ಥವಾಗಿದೆ. ಧರ್ಮಸ್ಥಳ ಪ್ರಕರಣದಲ್ಲಿ ಎಸ್‌ಐಟಿಗೆ ಪೂರ್ಣ ಸ್ವಾತಂತ್ರ್ಯ ನೀಡಲಾಗಿದ್ದು, ತನಿಖೆ ಪೂರ್ಣಗೊಳಿಸಿ ವರದಿಯನ್ನು ಸಲ್ಲಿಸಲು ಸೂಚಿಸಲಾಗಿದೆ. ಈ ತನಿಖೆಯಲ್ಲಿ ರಾಜ್ಯ ಸರ್ಕಾರ ಹಸ್ತಕ್ಷೇಪ ಮಾಡುವುದಿಲ್ಲ. ಅಲ್ಲದೆ, ಬೇರೆ ತನಿಖೆ ಅಗತ್ಯವಿಲ್ಲ ಎಂದು ನಾನು ಭಾವಿಸಿದ್ದೇನೆ. **–ಸಿದ್ದರಾಮಯ್ಯ**

ಜಾತಿ, ಧರ್ಮದ ಹೆಸರಲ್ಲಿ ಬಿಜೆಪಿ ನಾಯಕರಿಂದ ವಿಷಬೀಜ ಬಿತ್ತುವ ಕೆಲಸ



ಬಿ.ಸುಬ್ರಹ್ಮಣ್ಯ

ಮೈಸೂರು,ಆ.31–ಸೌಹಾರ್ದತೆಯಿಂದಿರುವ ರಾಜ್ಯದಲ್ಲಿ ಜಾತಿ, ಧರ್ಮ ಹೆಸರಲ್ಲಿ ವಿಷ ಬೀಜ ಬಿತ್ತುವ ಕೆಲಸವನ್ನು ಬಿಜೆಪಿ ನಾಯಕರು ಮಾಡುತ್ತಿದ್ದಾರೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಕಿಡಿಕಾರಿದ್ದಾರೆ.

ಮುಸ್ಲಿಮರನ್ನು ತಮ್ಮ ಬೆನ್ನ ಹಿಂದೆ ಇಟ್ಟುಕೊಳ್ಳಲು ಸಿದ್ದರಾಮಯ್ಯ ಬಾನು ಮುಷ್ತಾಕ್‌ರನ್ನ ದಸರಾ ಉದ್ಘಾಟನೆಗೆ ಕರೆದಿದ್ದಾರೆ. ಇದು ನಾಳೆ ಸಿಎಂ ಕುರ್ಚಿಗೆ ಕಂಟಕ ಬಂದಾಗ ಮುಸ್ಲಿಂ ಶಕ್ತಿಯನ್ನು ತಮ್ಮ ಹಿಂದೆ ನಿಲ್ಲಿಸಿಕೊಳ್ಳಲು ಹೆಣೆದಿರುವ ತಂತ್ರವೂ ಆಗಿದೆ ಎಂಬ ಪ್ರತಾಪ್ ಸಿಂಹ ಹೇಳಿಕೆಗೆ ತಿರುಗೇಟು ನೀಡಿರುವ ಅವರು, ಸಿದ್ದರಾಮಯ್ಯ ಅವರ ಬೆನ್ನ ಹಿಂದೆ ಇಡೀ ಕರ್ನಾಟಕದ ಜನತೆ ಇದ್ದಾರೆ. ಒಂದು ಜಾತಿ ಓಲೈಕೆ ಮಾಡುವ ಅಗತ್ಯವಿಲ್ಲ. ಈ ಹಿಂದೆ ರೈತ ಪುಟ್ಟಣ್ಣ, ಕೆ.ಎಸ್ ನಿಸಾರ್ ಅಹಮದ್ ಅವರಿಂದ ದಸರಾ ಉದ್ಘಾಟನೆ ಮಾಡಿಸಿದ್ದು ಸಿದ್ದರಾಮಯ್ಯರ ಔದಾರ್ಯ. ಅದೇ ರೀತಿಯಲ್ಲಿ ಬೂಕರ್ ಪ್ರಶಸ್ತಿ ಪುರಸ್ಕೃತರನ್ನು ಆಹ್ವಾನಿಸಿದ್ದಾರೆ. ಇದರಲ್ಲಿ ಯಾವುದೇ ರೀತಿ ಜಾತಿ ಧರ್ಮ ಬರಲ್ಲ, ಬಿಜೆಪಿಗೆ ಅಹಿಂದ ವರ್ಗಗಳನ್ನು ಕಂಡರೆ ತಾತ್ಸಾರ. ಅದಕ್ಕಾಗಿ ಈ ಹಿಂದೂ ಮತ್ತು ಮುಸ್ಲಿಮರನ್ನು ಎತ್ತಿ ಕಟ್ಟುವ ಕೆಲಸ ಮಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದ್ದಾರೆ.

ರಾಜ್ಯದಲ್ಲಿ ಪ್ರತಿವರ್ಷ ನಗರ, ತಾಲೂಕು, ಹೋಬಳಿಯ ಗಲ್ಲಿ ಗಲ್ಲಿಗಳಲ್ಲಿ ಗಣೇಶ ಹಬ್ಬ ಆಚರಿಸುತ್ತಾ ಹಿಂದೂ, ಮುಸ್ಲಿಂ, ಕ್ರೈಸ್ತರು ಸೌಹಾರ್ದತೆ ಮೆರೆಯುತ್ತಿದ್ದಾರೆ. ಇಂತಹ ರಾಜ್ಯದಲ್ಲಿ ಜಾತಿ, ಧರ್ಮದ ಹೆಸರಲ್ಲಿ ವಿಷ ಬೀಜ ಬಿತ್ತುವ ಕೆಲಸವನ್ನು ಬಿಜೆಪಿ ನಾಯಕರು ಮಾಡುತ್ತಿದ್ದಾರೆ. ಅದರಲ್ಲೂ ಪ್ರತಾಪ್ ಸಿಂಹ ಅವರು ಸದಾ ಹಿಂದೂ, ಮುಸ್ಲಿಮರ ನಡುವೆ ದ್ವೇಷ ಬಿತ್ತುವಂತಹ, ಕೋಮು ದ್ವೇಷಕ್ಕೆ ಕಾರಣವಾಗುವಂತಹ ಹೇಳಿಕೆಗಳನ್ನೇ ನೀಡುತ್ತಿರುತ್ತಾರೆ ಎಂದು ಕಿಡಿಕಾರಿದ್ದಾರೆ.



ಗಣೇಶಮೂರ್ತಿ ವಿಸರ್ಜನೆ
ಮೈಸೂರಿನ ಜೆಪಿ ನಗರ ವಿನಾಯಕ ಎನ್–ಕ್ಲೇವ್ ಗೆಳೆಯರ ಬಳಗದ ವತಿಯಿಂದ ಗಣಪತಿ ವಿಸರ್ಜನಾ ಕಾರ್ಯಕ್ರಮ ನೆರವೇರಿಸಲಾಯಿತು.

ಕುವೆಂಪು ಅವರಿಗೆ ಮರಣೋತ್ತರ 'ಭಾರತ ರತ್ನ' ಪ್ರಶಸ್ತಿಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಸಿಎಂಗೆ ಮನವಿ



ರಾಷ್ಟ್ರಕವಿ ಕುವೆಂಪು ಅವರಿಗೆ ಮರಣೋತ್ತರ 'ಭಾರತ ರತ್ನ' ಪ್ರಶಸ್ತಿಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ಒತ್ತಾಯಿಸಿ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ನೇತೃತ್ವದಲ್ಲಿ ಕುವೆಂಪು ವಿಶ್ವಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್ ಪದಾಧಿಕಾರಿಗಳು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೈಸೂರಿನ ನಿವಾಸದಲ್ಲಿ ಭೇಟಿ ಮಾಡಿ ಮನವಿ ಸಲ್ಲಿಸಿದರು.

ಮೈಸೂರು, ಆ.31(ಎಸ್‌ಪಿಎನ್)– ರಾಷ್ಟ್ರಕವಿ ಕುವೆಂಪು ಅವರಿಗೆ ಮರಣೋತ್ತರ 'ಭಾರತ ರತ್ನ' ಪ್ರಶಸ್ತಿಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ಒತ್ತಾಯಿಸಿ ಕುವೆಂಪು ವಿಶ್ವಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್ ಪದಾಧಿಕಾರಿಗಳು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಮನವಿ ಸಲ್ಲಿಸಿದರು.

ಕುವೆಂಪು ಎಂದೇ ಪದನಾಮದಿಂದ ಪ್ರಸಿದ್ಧರಾದ ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ ಅವರು, 20 ನೇ ಶತಮಾನದ ಪ್ರತಿಭಾವಂತ ಕನ್ನಡ ಸಾಹಿತಿಗಳು. ಮಲೆನಾಡಿನ ನಿಸರ್ಗದಲ್ಲಿ ಜನಿಸಿ, ಪ್ರಕೃತಿಯನ್ನು ಪರಿಭಾವಿಸುತ್ತಾ, ಮಾನವ ಪ್ರಕೃತಿಯ ನಡುವಿನ ಸಂಕೀರ್ಣತೆಯನ್ನು ಅರ್ಥ ಮಾಡಿಕೊಂಡು ಅದನ್ನು ಗದ್ಯ, ಪದ್ಯ, ಸಣ್ಣ ಕಥೆ, ಮಹಾಕಾವ್ಯ, ಸಾಹಿತ್ಯ ವಿಮರ್ಶೆ, ಆತ್ಮಚರಿತ್ರೆ ಜೀವನ ಚರಿತ್ರೆಗಳ ಮೂಲಕ ಪ್ರತಿಬಿಂಬಿಸಿದರು. ಒಂದು ರೀತಿಯಲ್ಲಿ ಹೇಳುವುದಾದರೆ ಕನ್ನಡ ಸಾಹಿತ್ಯದ ಕಿರುವಾಹಿನಿ ಕುವೆಂಪುರವರಿಂದ ಒಂದು ಅದ್ಭುತ ಪ್ರವಾಹವಾಗಿ ಏರ್ಪಟ್ಟಿತು.

ಅವರ ಕೃತಿಗಳು ಇಂಗ್ಲಿಷ್ ಇಲ್ಲವೇ ಯುರೋಪಿಯನ್ ಭಾಷೆಗಳಿಗೆ ಸಕಾಲದಲ್ಲಿ ತರ್ಜುಮೆ ಆಗಿದ್ದರೆ, 'ನೋಬೆಲ್ ಪ್ರಶಸ್ತಿ'ಯೂ ಲಭಿಸುತ್ತಿತ್ತು. ದುರಷ್ಟವಶಾತ್ ಈ ಸುವರ್ಣಾವಕಾಶವನ್ನು ನಾವು ತಪ್ಪಿಸಿಕೊಂಡೆವು. ಅವರ ಸಾಹಿತ್ಯ ಸೇವೆಯನ್ನು ಗುರುತಿಸಿ, ಈಗಾಗಲೇ 'ಭಾರತರತ್ನ' ಪ್ರಶಸ್ತಿ ಕೊಡಬೇಕಿತ್ತು ಆದರೆ, ಅವರು ನಿಧನರಾಗಿ ಮೂರು ದಶಕಗಳು ಸಂದು ಹೋಗಿವೆ. ಆದರೆ, ಕನ್ನಡಿಗರು ಅವರ ಕೃತಿಗಳನ್ನು, ದರ್ಶನ ಚಿಂತನೆಗಳನ್ನು ಸ್ಮರಿಸದೇ ಒಂದೂ ದಿನವೂ ಕಳೆಯುತ್ತಿಲ್ಲ. ಅವರ ಸ್ಮರಣೆಗಾಗಿ ವೃತ್ತ, ರಸ್ತೆ, ಬಡಾವಣೆಗಳಿಗೆ ಕುವೆಂಪು ಅವರ ಹೆಸರಿಟ್ಟಿದ್ದಾರೆ. ಅವರ ವಿಚಾರಧಾರೆಗಳು ನಿತ್ಯವೂ ಪರಾಮರ್ಶನ ಪ್ರತಿಮೆಯಾಗಿದ್ದಾರೆ.

ಕರ್ನಾಟಕ ಸರ್ಕಾರವು ಕುವೆಂಪು ರಚಿತ 'ಜಯ ಭಾರತ ಜನನಿಯ ತನುಜಾತೆ' ಕವಿತೆಯನ್ನು ನಾಡಗೀತೆಯನ್ನಾಗಿ ಪುರಸ್ಕರಿಸಿದೆ. ಆದ್ದರಿಂದ ನಮ್ಮ ರಸಋಷಿ, ಕವಿದಾರ್ಶನಿಕ ಕುವೆಂಪು ಅವರಿಗೆ 'ಭಾರತ ರತ್ನ' ಪ್ರಶಸ್ತಿಯನ್ನು ಮರಣೋತ್ತರವಾಗಿ ನೀಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ನಿಯೋಗ ಮನವಿ ಮಾಡಿದೆ.

ಈ ವೇಳೆ ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್, ಹೆಚ್.ಕೆ.ರಾಮು, ಮೈಸೂರು ವಿವಿ ನಿವೃತ್ತ ನಿರ್ದೇಶಕ ಕೆ.ಟಿ. ವೀರಪ್ಪ, ವಿಶ್ರಾಂತ ಕುಲಪತಿ ಪ್ರೊ.ಎಂ.ಎಸ್. ಶೇಖರ್, ನಿವೃತ್ತಪ್ರಾಧ್ಯಾಪಕ ಪ್ರೊ ಕೆ.ಎಸ್.ಭಗವಾನ್, ನಿವೃತ್ತ ಪ್ರಾಧಾಪಕ ಪ್ರೊ.ಸಿ.ನಾಗಣ್ಣ, ನಿವೃತ್ತ ಅಧಿಕಾರಿ ಜಯಣ್ಣ, ಡಾ.ಲತಾ ರಾಜಶೇಖರ್, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್ ಸೇರಿದಂತೆ ಇತರರಿದ್ದರು.

ಗಣೇಶೋತ್ಸವ...



ಮೈಸೂರಿನ ಕುವೆಂಪುನಗರದಲ್ಲಿ ಕುವೆಂಪುನಗರ ಯೂತ್ಸ್ ವತಿಯಿಂದ 4ನೇ ವರ್ಷದ ಗಣೇಶೋತ್ಸವ ಪ್ರಯುಕ್ತ ಗಣೇಶ ಮೂರ್ತಿ ಪ್ರತಿಷ್ಠಾಪಿಸಿ, ಪೂಜೆ ಸಲ್ಲಿಸಲಾಯಿತು. ಭಾನುವಾರ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ನಂತರ ಮೆರವಣಿಗೆ ನಡೆಸಿ, ಗಣೇಶ ಮೂರ್ತಿ ವಿಸರ್ಜಿಸಿದರು.

ಗಣೇಶಮೂರ್ತಿ ವಿಸರ್ಜನೆ...




ಮೈಸೂರಿನ ಎನ್.ಆರ್.ಮೊಹಲ್ಲಾದ ಶಿವಾಜಿ ರಸ್ತೆ 2ನೇ ಕ್ರಾಸ್‌ನಲ್ಲಿ ನಿವಾಸಿಗಳು ಗಣೇಶ ಮೂರ್ತಿ ಪ್ರತಿಷ್ಠಾಪಿಸಿ, ಪೂಜಿಸಿದರು. ಭಾನುವಾರ ಮೊಹಲ್ಲಾದಲ್ಲಿ ಅದ್ಧೂರಿಯಾಗಿ ಮೆರವಣಿಗೆ ನಡೆಸಿದರು. ನಂತರ ಸಂಜೆ ಗಣೇಶಮೂರ್ತಿ ವಿಸರ್ಜಿಸಿದರು. ಈ ವೇಳೆ ಮುಖಂಡರಾದ ಜ್ಯೋತಿ, ನವೀನ್ ಹಾಗೂ ಮೊಹಲ್ಲಾದ ಮಹಿಳೆಯರು, ಯುವಕರು, ಮಕ್ಕಳು ಉಪಸ್ಥಿತರಿದ್ದರು.

ಇಂದು ಸಿದ್ದರಾಮಯ್ಯರಿಂದ ನೂತನ ಕರ್ನಾಟಕ ಪಬ್ಲಿಕ್ ಶಾಲೆ ಉದ್ಘಾಟನೆ

ಮೈಸೂರು, ಆ.31(ಬಿಎಲ್‌ಯು)–ತಮ್ಮ ಹುಟ್ಟೂರು ಮೈಸೂರಿನ ಸಿದ್ದರಾಮನಹುಂಡಿಯಲ್ಲಿ ನೂತನವಾಗಿ ನಿರ್ಮಿಸಿರುವ ಕರ್ನಾಟಕ ಪಬ್ಲಿಕ್ ಶಾಲೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾಳೆ (ಸೆ.1) ಉದ್ಘಾಟಿಸುವರು. ತಾವು ಪ್ರಾಥಮಿಕ ಶಿಕ್ಷಣ ಪಡೆದ ಶಾಲೆಯನ್ನು ನೆನಪು ಮಾಡಿಕೊಂಡಿರುವ ಸಿದ್ದರಾಮಯ್ಯ ಅವರು ಸ್ವಗ್ರಾಮದಲ್ಲಿ ಕರ್ನಾಟಕ ಪಬ್ಲಿಕ್ ಶಾಲೆ ನಿರ್ಮಿಸಿದ್ದಾರೆ. ತಾವು ಶಾಸಕರಾಗಿ ಆಯ್ಕೆಯಾಗಿರುವ ವರುಣ ಕ್ಷೇತ್ರದ ವ್ಯಾಪ್ತಿಯಲ್ಲಿ ಸಿದ್ದರಾಮನಹುಂಡಿ ಸೇರುತ್ತದೆ. ನಾಳೆ ಬೆಳಿಗ್ಗೆ 10.30ಕ್ಕೆ ಸಿದ್ದರಾಮಯ್ಯ ಅವರು ಕರ್ನಾಟಕ ಪಬ್ಲಿಕ್ ಶಾಲೆ ಉದ್ಘಾಟಿಸುವರು.

ಇಂದಿನಿಂದ ಉಚಿತ ಯೋಗ ಶಿಬಿರ



ಮೈಸೂರು, ಆ.31– ಮೈಸೂರಿನ ಚೈತನ್ಯ ಯೋಗ ಎಜುಕೇಷನ್ ಅಂಡ್ ರಿಸರ್ಚ್ ಫೌಂಡೇಷನ್ ವತಿಯಿಂದ ಮೂರು ದಿನಗಳ ಕಾಲ ಉಚಿತ ಯೋಗ ತರಗತಿ (ಮುದ್ರಾ, ಧ್ಯಾನ ಮತ್ತು ಪ್ರಾಣಾಯಾಮ)ಗಳನ್ನು ಸೆ.1ರಿಂದ 3ರವರೆಗೆ ಕಾಳಿದಾಸ ರಸ್ತೆಯ (ಚಂದ್ರಕಲಾ ಆಸ್ಪತ್ರೆಯ ಎದುರು) ಕುವೆಂಪು ಟ್ರಸ್ಟಿನ ಬಾಡಿ ಲುಕ್ ಯೋಗ ಕೇಂದ್ರದಲ್ಲಿ ಬೆಳಗ್ಗೆ 11ರಿಂದ 12ರವರೆಗೆ ಮತ್ತು ಸಂಜೆ 3.30ರಿಂದ 4.30ರವರೆಗೆ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ 9449886387 ಅಥವಾ 9844492535 ಸಂಪರ್ಕಿಸಬಹುದು.

ನಿಧನ

ಲಕ್ಷ್ಮೀನಾರಾಯಣ



ಮೈಸೂರು, ಆ.31– ಮೈಸೂರಿನ ಜೆ.ಪಿ.ನಗರ ಪೊಲೀಸ್ ಬೂತ್ ನಿವಾಸಿ, ನಿವೃತ್ತ ಎಎಸ್‌ಐ ಲಕ್ಷ್ಮೀನಾರಾಯಣ ಎಂ.ಎಸ್(60) ಅವರು ಭಾನುವಾರ ಮಧ್ಯಾಹ್ನ ನಿಧನರಾದರು. ಇವರು ಪತ್ನಿ, ಹರಿಣಿ, ಪುತ್ರ ಶ್ರೇಯಸ್, ಪುತ್ರಿ ಸುಮನ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಯನ್ನು ಚಾಮುಂಡಿಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ಸೋಮವಾರ ಬೆಳಗ್ಗೆ 10.30ಕ್ಕೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಸ್.ಮೋಹನ್‌ಕುಮಾರ್



ಮೈಸೂರಿನ ತಿಲಕ್‌ನಗರದ ನಿವಾಸಿ ಎಸ್.ಮೋಹನ್ ಕುಮಾರ್(65) ಭಾನುವಾರ ನಿಧನರಾದರು. ಇವರು ಪತ್ನಿ ಕನ್ಯಾಕುಮಾರಿ, ಮಕ್ಕಳಾದ ಗೌತಮ್, ಸಿದ್ಧಾರ್ಥ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಬನ್ನಿಮಂಟಪದ ಜೋಡಿ ತೆಂಗಿನಮರದ ಸ್ಮಶಾನದಲ್ಲಿ ಸೋಮವಾರ ಮಧ್ಯಾಹ್ನ 12ಕ್ಕೆ ಅಂತ್ಯಕ್ರಿಯೆ ನೆರವೇರಿಸುವುದಾಗಿ ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ಜಗದೀಶ್ ಕುಮಾರ್



ಜಗದೀಶ್ ಕುಮಾರ್(55), ಇಂದು ಸಂಜೆ ಅನಾರೋಗ್ಯದಿಂದ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಮರಣ ಹೊಂದಿದ್ದಾರೆ. ಮೃತರು ಪತ್ನಿ ಮತ್ತು ಪುತ್ರಿಯನ್ನು ಅಗಲಿದ್ದಾರೆ. ಅಂತ್ಯಸಂಸ್ಕಾರವನ್ನು ಸೋಮವಾರ ಬೆಳಿಗ್ಗೆ 11 ಗಂಟೆಗೆ ಮೈಸೂರಿನ ಕೆ.ಜಿ. ಕೊಪ್ಪಲಿನ ರುದ್ರಭೂಮಿಯಲ್ಲಿ (ಕಾವೇರಿ ಸ್ಕೂಲ್ ಪಕ್ಕ) ನೆರವೇರಿಸಲಾಗುವುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

01.09.2025 ಸೋಮವಾರ, ಮಳೆ ನಕ್ಷತ್ರ: ಪುಬ್ಬ 31.08.2025 ರಿಂದ 13.09.2025 ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಕಣ್ಣಿನ ಸೋಂಕು ಮತ್ತು ಕಣ್ಣಿನಲ್ಲಿ ಮಾಂಸ ಬೆಳವಣಿಗೆ ಶಿಬಿರ–ಕಣ್ಣು ಕೆಂಪಾಗುವುದು, ಕಣ್ಣಿನಲ್ಲಿ ಏನೋ ಇರುವ ಅನುಭವ, ಕಣ್ಣಿನಿಂದ ಸೋರುವುದು, ಕಣ್ಣು ತುರಿಸುವುದು, ಶುಷ್ಕ ನೇತ್ರ, ಆಭರಣ ಮತ್ತು ಸೌಂದರ್ಯವರ್ಧಕಗಳಿಂದ ಆಗಿರುವ ಚರ್ಮದ ಅಲರ್ಜಿ ಮತ್ತು ಚರ್ಮಕ್ಕೆ ಸಂಬಂಧಪಟ್ಟ ಕಾಯಿಲೆಗೆ ಚಿಕಿತ್ಸೆ, ಯುವಕರ ಮಾನಸಿಕ ಆರೋಗ್ಯ ಜಾಗೃತಿ, ಗರ್ಭ ಸಂಸ್ಕಾರ ಕುರಿತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.

■ **ರಾಮಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಜೆಎಸ್‌ಎಸ್ ಆಸ್ಪತ್ರೆ:** ಸಾಂಕ್ರಾಮಿಕ ರೋಗಗಳ ಕುರಿತು ಸಿಎಂಇ ಕಾರ್ಯಕ್ರಮ, ಉದ್ಘಾಟನೆ: ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರಮಠ, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, 3ನೇ ಮಹಡಿ, ಜೆಎಸ್‌ಎಸ್ ಆಸ್ಪತ್ರೆ, ಎಂ.ಜಿ. ರಸ್ತೆ, ಬೆಳಗ್ಗೆ 10ರಿಂದ.

■ **ಶ್ರೀ ಶ್ರೀ ಶ್ರೀ 101 ಗಣಪತಿ ದೇವಸ್ಥಾನ ಟ್ರಸ್ಟ್:** ಶ್ರೀ ಗೌರಿ–ಗಣೇಶ ಹಬ್ಬ ಮತ್ತು ಶ್ರೀ 101 ಗಣಪತಿ ಪ್ರತಿಷ್ಠಾನ, 70ನೇ ವಾರ್ಷಿಕೋತ್ಸವದ ಪ್ರಯುಕ್ತ ವಿಶೇಷ ಪೂಜಾ ಮಹೋತ್ಸವ, ಬೆಳಗ್ಗೆಯಿಂದ ಪೂಜಾ ಕಾರ್ಯಕ್ರಮ, ಸಂಜೆ 7ಕ್ಕೆ ಆಕಾಶ್, ದೀಕ್ಷಿತ್ ಮತ್ತು ವೃಂದದವರಿಂದ ದೇವರನಾಮ, ಭಕ್ತಿಗೀತೆಗಳು, ಭಾವಗೀತೆ, ಸ್ಥಳ: ತ್ಯಾಗರಾಜ ಸರ್ಕಲ್, ಕೆ.ಆರ್. ಮೊಹಲ್ಲಾ.

■ **ಎಸ್‌ಪಿವಿಜಿಎಂಸಿ ಟ್ರಸ್ಟ್:** 64ನೇ ಪಾರಂಪರಿಕ ಸಂಗೀತೋತ್ಸವ, ಸಂಜೆ 5.30ರಿಂದ ಗಮಕ ವಾಚನ ಕಾರ್ಯಕ್ರಮ, ಕಾವ್ಯ: ಹರಿಕಥಾಮೃತಸಾರ–ಗಣಪತಿ ಸ್ತೋತ್ರ ಸಂಧಿ, ವಾಚನ: ವಿದುಷಿ ಸಂಧ್ಯಾ ರಮೇಶ್, ವ್ಯಾಖ್ಯಾನ: ವಿದ್ವಾನ್ ಎ. ನಿರಂಜನ, 6.45ಕ್ಕೆ ಗಾಯನ, ವಿದುಷಿ ಪೃಥ್ವಿ ಭಾಸ್ಕರ್–ಗಾಯನ, ಗಿರಿಧರ್–ಮೃದಂಗ, ವಿದ್ವಾನ್ ಶಮಿತ್‌ಗೌಡ–ಘಟಂ, ಸ್ಥಳ: 8ನೇ ಕ್ರಾಸ್, ವಿವಿ ಮೊಹಲ್ಲಾ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ಸಂಜೀವ್ ಕುಲಕರ್ಣಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10: 'ಸಸ್ಯ ಸಿರಿ': ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ– ಡಾ.ಟಿ.ಶಿವಕುಮಾರ್, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಸಿ.ವಿಶ್ವನಾಥ್, ಕೆ.ಬಿ.ಸುನೀತಾ ಆಚಾರ್ಯ, ವ್ಯಾಖ್ಯಾನ–ಕೆ.ಎಲ್.ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು: ರಾಜೇಶ್ ಕೃಷ್ಣನ್ ಅವರು ಹಾಡಿರುವ ಕೆ.ಎಸ್.ನಿಸಾರ್ ಅಹಮದ್ ಅವರ ರಚನೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಬಿ.ಶ್ರೀರಾಂಭಟ್–ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ: ಗೇಮ್ ಷೋ, ಪ್ರಸ್ತುತಿ–ಬಿ.ದಿಗ್ವಿಜಯ್.

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ನಮ್ಮ ಆರೋಗ್ಯ: ರಾಷ್ಟ್ರೀಯ ಪೌಷ್ಠಿಕ ಆಹಾರ ಸಪ್ತಾಹದ ಸಂದರ್ಭದಲ್ಲಿ 'ಅನಿಮಿಯಾ ಮುಕ್ತ ಪೌಷ್ಠಿಕ ಕರ್ನಾಟಕ ಕಾರ್ಯಕ್ರಮ' ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮೈಸೂರು ವಿಭಾಗೀಯ ಸಹನಿರ್ದೇಶಕರ ಕಛೇರಿಯಲ್ಲಿ ಉಪನಿರ್ದೇಶಕರಾಗಿರುವ ಡಾ.ಬಿ.ಮಲ್ಲಿಕಾ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ, 1.00 ಪ್ರಗತಿ ಪಥ: ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.30 ಪ್ರದೇಶ ಸಮಾಚಾರ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಆರ್. ಹರಿಣಿ– ಹಾಡುಗಾರಿಕೆ. **ಸಂಜೆ:** 4.00 ಮಹಿಳಾರಂಗ, 4.45 ಹಿಂದಿ ಪಾಠ: ಪ್ರಸ್ತುತಿ– ಡಾ.ಸ್ಮಿತಾ ಚಿಪ್ಳೂಣ್‌ಕರ್, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ರೈತ ಶಾಲೆ ಕುರಿತು ಸಂವಾದ, ಭಾಗವಹಿಸುತ್ತಾರೆ–ಮಂಡ್ಯ ತಾಲೂಕು ಕೆರೆಗೋಡು ಹೋಬಳಿ ಆಲಕೆರೆ ಸತ್ಯಮೂರ್ತಿ ಹಾಗೂ ಎ.ಎಸ್. ಚಂದ್ರಶೇಖರ್, ಪ್ರಸ್ತುತಿ–ಎನ್.ಕೇಶವಮೂರ್ತಿ. **ರಾತ್ರಿ:** 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ: ಮೈಸೂರಿನ ಯುವ ಚಿತ್ರಕಲಾವಿದ ಪುನೀತ್ ವೈ. ಎಸ್. ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ– ದಿಗ್ವಿಜಯ್ ಬಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಎನ್.ರವಿಕಿರಣ್–ಚಿತ್ರ ವೀಣಾವಾದನ, 10.00 ನಿನಾದ: ವೈಣಿಕ ವಾಗ್ಗೇಯ ವಾಹಿನಿ, 10.30 ಸವಿನೆನಪು.

ALLIANCE SQUARE PROPERTIES
RESIDENTIAL SITES IN MYSURU STARTING FROM ₹20 LAKHS
0821-2541100
www.alliancesquare.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಸೆಪ್ಟೆಂಬರ್ 1 ಸೋಮವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 135 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸ್ಪೆಕ್‌ಟ್ರಾ ಕನ್ವೆನ್ಷನ್ ಸೆಂಟರ್

Hunsur Road, MYSORE
Ph: 0821-2416419 / 95354 91919

ಬಿಜೆಪಿ ಜತೆ ಸೇರಿ ಸರ್ಕಾರ ರಚನೆಗೆ ಡಿಕೆಶಿ ಮುಂದಾಗಿದ್ದರು

ಬಿಜೆಪಿ ಉಚ್ಚಾಟಿತ ಶಾಸಕ ಯತ್ನಾಳ್ ಹೊಸ ಬಾಂಬ್

● ದೆಹಲಿಯಲ್ಲಿ ಒಂದು ಸುತ್ತು ಮಾತುಕತೆ ನಡೆದಿತ್ತು ● ಡಿ.ಕೆ.ಶಿವಕುಮಾರ್–ಸಿಎಂ, ಬಿ.ವೈ.ವಿಜಯೇಂದ್ರ–ಡಿಸಿಎಂ ಎಂದು ಒಪ್ಪಂದವಾಗಿತ್ತು ● ಡಿಕೆಶಿಗೆ ಕಾಂಗ್ರೆಸ್ ಶಾಸಕರ ಬೆಂಬಲವಿಲ್ಲ ಎಂದು ಗುಪ್ತಚರ ವರದಿಯಲ್ಲಿ ತಿಳಿದ ಬಳಿಕ ಪ್ರಯತ್ನ ಕೈಬಿಡಲಾಯಿತು

ಕಲಬುರಗಿ,ಆ.31–ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕಾಂಗ್ರೆಸ್‌ನಿಂದ ಒಂದು ಕಾಲು ಹೊರಗಿಟ್ಟಿದ್ದು, ಬಿಜೆಪಿ ಜೊತೆ ಸೇರಿ ಸಮ್ಮಿಶ್ರ ಸರ್ಕಾರ ರಚಿಸಲು ಮುಂದಾಗಿದ್ದರು ಎಂದು ಬಿಜೆಪಿಯ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಹೊಸ ಬಾಂಬ್ ಸಿಡಿಸಿದ್ದಾರೆ.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಒಪ್ಪಂದದ ಪ್ರಕಾರ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ, ಬಿ.ವೈ.ವಿಜಯೇಂದ್ರ ಉಪಮುಖ್ಯಮಂತ್ರಿ ಆಗುವ ಬಗ್ಗೆ ಚರ್ಚೆ ನಡೆದಿತ್ತು. ಆದರೆ, ಅವರಿಗೆ ಶಾಸಕರ ಬೆಂಬಲ ಕಡಿಮೆ ಇದೆ ಎಂಬ ಕಾರಣಕ್ಕೆ ಅದು ಮುಂದುವರಿಯಲಿಲ್ಲ ಎಂದು ಯತ್ನಾಳ್ ಹೇಳಿದ್ದಾರೆ.

ಮುಖ್ಯಮಂತ್ರಿ ಆಗಲೇಬೇಕೆಂದು ಛಲ ಹೊಂದಿರುವ ಡಿ.ಕೆ.ಶಿವಕುಮಾರ್, ಸಿಎಂ ಸ್ಥಾನವನ್ನು ಸಿದ್ದರಾಮಯ್ಯ ಬಿಟ್ಟು ಕೊಡುವುದಿಲ್ಲ ಎಂದು ಮನವರಿಕೆ ಮಾಡಿಕೊಂಡು ಬಿಜೆಪಿ ಜೊತೆ ಸೇರಿ ಸಮ್ಮಿಶ್ರ ಸರ್ಕಾರ ರಚಿಸಿ ಮುಖ್ಯಮಂತ್ರಿ ಆಗಲು ಪ್ರಯತ್ನಪಟ್ಟಿದ್ದರು. ಈ ಸಂಬಂಧ ಈಗಾಗಲೇ ನಮ್ಮ ಮಹಾಮಹಿಮ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಜೊತೆ ದೆಹಲಿಯಲ್ಲಿ ಒಂದು ಸುತ್ತಿನ ಚರ್ಚೆ ನಡೆದಿದೆ ಎಂದರು.


ಯತ್ನಾಳ್


ಡಿ.ಕೆ.ಶಿವಕುಮಾರ್


ವಿಜಯೇಂದ್ರ

ಸುಮಾರು 60ರಿಂದ 70 ಕಾಂಗ್ರೆಸ್ ಶಾಸಕರನ್ನು ಕರೆದುಕೊಂಡು ಬಿಜೆಪಿಗೆ ಬಂದು "ನಮಸ್ತೇ ಸದಾ ವತ್ಸಲೇ" ಎಂದು ಹೇಳುವ ಯೋಜನೆಯನ್ನೂ ಡಿ.ಕೆ.ಶಿವಕುಮಾರ್ ಹಾಕಿಕೊಂಡಿದ್ದರು. ಆದರೆ, 12ರಿಂದ 13 ಮಂದಿ ಕಾಂಗ್ರೆಸ್ ಶಾಸಕರ ಬೆಂಬಲವೂ ಅವರಿಗಿಲ್ಲ. ಎಲ್ಲರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಕಡೆ ಇದ್ದಾರೆ ಎಂಬುದು ಕೇಂದ್ರ ಇಂಟಲಿಜೆನ್ಸ್ ಮಾಹಿತಿಯಿಂದ ತಿಳಿದು ಬಂದಿತ್ತು. ಈ ಬಗ್ಗೆ ನಮ್ಮ ಹೈಕಮಾಂಡ್ ನಾಯಕರೇ ಒಬ್ಬರು 'ಡಿ.ಕೆ.ಶಿವಕುಮಾರ್ ಬಳಿ ಎಷ್ಟು ಕಾಂಗ್ರೆಸ್ ಶಾಸಕರಿದ್ದಾರೆ' ಎಂದು ಕೇಳಿದ್ದರು. ಒಂದು ಹತ್ತು ಮಂದಿ ಇರಬಹುದು. ಬಿಜೆಪಿಗೆ ಬರುತ್ತಾರೆಂದು ಗೊತ್ತಾದರೆ ಅವರು ಕೂಡ ಇರಲಿಕ್ಕಿಲ್ಲ ಎಂದು ಹೇಳಿದ್ದೆ ಎಂದು ಯತ್ನಾಳ್ ಹೇಳಿದ್ದಾರೆ.

ಸಿದ್ದರಾಮಯ್ಯ ಮುಸ್ಲಿಂ ಓಲೈಕೆ ಮಾಡುತ್ತಾರೆ. ಆದರೂ ಒಂದೆರಡು ವರ್ಷ ಅವರೇ ಸರ್ಕಾರ ಮುನ್ನಡೆಸಲಿ. ಡಿ.ಕೆ.ಶಿವಕುಮಾರ್ ಮತ್ತು ಬಿ.ವೈ.ವಿಜಯೇಂದ್ರ ಭ್ರಷ್ಟರು. ಇವರಿಬ್ಬರೂ ಸೇರಿದರೆ ಕರ್ನಾಟಕವನ್ನೇ ಮಾರಾಟ ಮಾಡಿಬಿಟ್ಟಾರು ಎಂದು ಯತ್ನಾಳ್ ವ್ಯಂಗ್ಯವಾಡಿದ್ದಾರೆ.

> "ಬಸನಗೌಡ ಪಾಟೀಲ್ ಯತ್ನಾಳ್ ಹೇಳಿಕೆ ಕುರಿತು ಬೆಂಗಳೂರಲ್ಲಿ ಮಾಧ್ಯಮದವರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ನನಗೆ ಆ ಕಸ ಅಥವಾ ಸೆಗಣಿ ಮೇಲೆ ಕಲ್ಲು ಹಾಕಲು ಇಷ್ಟವಿಲ್ಲ ಎಂದರು.

ಮೈಸೂರಿಗೆ ಇಂದು ರಾಷ್ಟ್ರಪತಿ ಆಗಮನ

● ಎರಡು ದಿನಗಳ ಮೈಸೂರು ಪ್ರವಾಸ ಕೈಗೊಂಡಿರುವ ದ್ರೌಪದಿ ಮುರ್ಮು ● ಆಯಿಷ್ ವಜ್ರಮಹೋತ್ಸವ ಕಾರ್ಯಕ್ರಮದಲ್ಲಿ ಭಾಗಿ ● ಇಂದು ಸಂಜೆ ಚಾಮುಂಡಿಬೆಟ್ಟ, ನಾಳೆ ಅರಮನೆಗೆ ಭೇಟಿ ನೀಡಲಿರುವ ಪ್ರಥಮ ಪ್ರಜೆ

ಮೈಸೂರು,ಆ.31(ಎಂಟಿವೈ)–ಎರಡು ದಿನಗಳ ಮೈಸೂರು ಪ್ರವಾಸ ಕೈಗೊಂಡಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನಾಳೆ(ಸೆ.1) ಮಧ್ಯಾಹ್ನ 3.10ಕ್ಕೆ ದೆಹಲಿಯಿಂದ ವಿಶೇಷ ವಿಮಾನದಲ್ಲಿ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದು, ಆಯಿಷ್ ವಜ್ರ ಮಹೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಬಳಿಕ ಚಾಮುಂಡಿಬೆಟ್ಟಕ್ಕೆ ತೆರಳಿ ದರ್ಶನ ಪಡೆದು, ಮೈಸೂರಲ್ಲೇ ವಾಸ್ತವ್ಯ ಹೂಡಲಿದ್ದಾರೆ.

ಮೈಸೂರಿಗೆ ಮೂರು ವರ್ಷದ ನಂತರ ರಾಷ್ಟ್ರಪತಿ ದ್ರೌಪದಿ ಮುರ್ಮು ಆಗಮಿಸುತ್ತಿದ್ದು, ಬಿಗಿ ಭದ್ರತೆ ಕೈಗೊಳ್ಳಲಾಗಿದೆ. ಎರಡು ದಿನದ ಪ್ರವಾಸದ ಹಿನ್ನೆಲೆಯಲ್ಲಿ ರಾಷ್ಟ್ರಪತಿಗಳನ್ನು ಬರಮಾಡಿಕೊಳ್ಳಲು ಜಿಲ್ಲಾಡಳಿತ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ಕಳೆದ ಎರಡು ದಿನಗಳಿಂದ ಭದ್ರತೆಯನ್ನು ಪರಿಶೀಲಿಸಲಾಗಿದೆ.

ದೆಹಲಿಯಿಂದ ನೇರವಾಗಿ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನಾಳೆ(ಸೆ.1) ಮಧ್ಯಾಹ್ನ 12 ಗಂಟೆಗೆ ದೆಹಲಿಯ ರಾಷ್ಟ್ರಪತಿ ಭವನದಿಂದ ಹೊರಟು, 12.25ಕ್ಕೆ ದೆಹಲಿಯ ಪಾಲಂ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಮೈಸೂರಿನತ್ತ ಪ್ರಯಾಣಿಸಲಿದ್ದಾರೆ. 2 ಗಂಟೆ 45 ನಿಮಿಷದ ಪ್ರಯಾಣದ ನಂತರ ಮಧ್ಯಾಹ್ನ 3.10ಕ್ಕೆ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ. ವಿಮಾನ ನಿಲ್ದಾಣದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಸೇರಿದಂತೆ ಶಿಷ್ಟಾಚಾರದಂತೆ ಹಿರಿಯ ಅಧಿಕಾರಿಗಳು ಪಾಲ್ಗೊಂಡು ರಾಷ್ಟ್ರಪತಿಗಳನ್ನು ಬರಮಾಡಿಕೊಳ್ಳಲಿದ್ದಾರೆ.

ಬಳಿಕ ಮಧ್ಯಾಹ್ನ 3.20ಕ್ಕೆ ವಿಮಾನ ನಿಲ್ದಾಣದಿಂದ ರಸ್ತೆ ಮಾರ್ಗದಲ್ಲಿ ರಿಂಗ್ ರಸ್ತೆಯಲ್ಲಿ ಸಾಗಿ, ಬೋಗಾದಿ ರಿಂಗ್ ರಸ್ತೆ ಜಂಕ್ಷನ್ ಮೂಲಕ ಮಧ್ಯಾಹ್ನ 3.45ಕ್ಕೆ ಗಂಗೋತ್ರಿ ಬಡಾವಣೆಯಲ್ಲಿರುವ ▶ 6ನೇ ಪುಟಕ್ಕೆ


ದ್ರೌಪದಿ ಮುರ್ಮು

ಚಾಮುಂಡಿಬೆಟ್ಟಕ್ಕೆ ಇಂದು ಮಧ್ಯಾಹ್ನ 2ರಿಂದ ರಾತ್ರಿ 8.30ರವರೆಗೆ ಪ್ರವೇಶವಿಲ್ಲ

ರಾಷ್ಟ್ರಪತಿಗಳು ನಾಳೆ(ಸೆ.1) ಸಂಜೆ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಲಿರುವುದರಿಂದ ನಾಳೆ ಮಧ್ಯಾಹ್ನ 2 ಗಂಟೆಯಿಂದ ರಾತ್ರಿ 8.30ರವರೆಗೆ ಚಾಮುಂಡಿಬೆಟ್ಟಕ್ಕೆ ಸಾರ್ವಜನಿಕರು, ಪ್ರವಾಸಿಗರ ಪ್ರವೇಶ ನಿಷೇಧಿಸಲಾಗಿದೆ. ತಾವರೆಕಟ್ಟೆ, ಉತ್ತನಹಳ್ಳಿ ರಸ್ತೆಯಿಂದ ಬರುವ ವಾಹನಗಳಿಗೆ ಪ್ರವೇಶ ನಿರ್ಬಂಧಿಸಲಾಗಿದೆ. ರಾತ್ರಿ 8.30ರ ನಂತರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗುತ್ತದೆ.

ಇಂದು ಅರಮನೆಗೆ ಪ್ರವೇಶ ನಿಷಿದ್ಧ, ನಾಳೆ ಮಧ್ಯಾಹ್ನದ ನಂತರ ಅವಕಾಶ

ಮೈಸೂರು ಅರಮನೆಗೆ ನಾಳೆ(ಸೆ.1) ಪ್ರವಾಸಿಗರು, ಸಾರ್ವಜನಿಕರ ಪ್ರವೇಶ ನಿಷೇಧಿಸಲಾಗಿದೆ. ಸೆ.2ರಂದು ಬೆಳಗ್ಗೆ 8.30ಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅರಮನೆಗೆ ಭೇಟಿ ನೀಡಿ, ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು ಏರ್ಪಡಿಸಿರುವ ಉಪಾಹಾರ ಕೂಟದಲ್ಲಿ ಪಾಲ್ಗೊಳ್ಳಲಿದ್ದಾರೆ. ಬೆಳಗ್ಗೆ 8.30ರಿಂದ 10ರವರೆಗೆ ರಾಷ್ಟ್ರಪತಿಗಳು ಅರಮನೆಯಲ್ಲಿಯೇ ಇರುವುದರಿಂದ ಅಂದು ಬೆಳಗ್ಗಿನಿಂದ 11.30ರವರೆಗೂ ಪ್ರವೇಶಕ್ಕೆ ನಿರ್ಬಂಧ ಹೇರಲಾಗಿದೆ. 11.30ರ ನಂತರ ಅರಮನೆ ವೀಕ್ಷಣೆಗೆ ಅವಕಾಶ ನೀಡಲಾಗಿದೆ ಎಂದು ಮೈಸೂರು ಅರಮನೆ ಮಂಡಳಿ ತಿಳಿಸಿದೆ.

ಉಪ್ಪಾರ ಜನಾಂಗವನ್ನು ಎಸ್‌ಟಿಗೆ ಸೇರಿಸಲು ಶೀಘ್ರವೇ ಕೇಂದ್ರಕ್ಕೆ ಶಿಫಾರಸು

ಸಿಎಂ ಸಿದ್ದರಾಮಯ್ಯ ಭರವಸೆ



ನಂಜನಗೂಡು,ಆ.31–ಅತ್ಯಂತ ಹಿಂದುಳಿದ ಸಮಾಜವಾದ ಉಪ್ಪಾರ ಸಮುದಾಯವನ್ನು ಎಸ್‌ಟಿ ವರ್ಗಕ್ಕೆ ಸೇರ್ಪಡೆಗೊಳಿಸಲು ಈಗಾಗಲೇ ಕುಲಶಾಸ್ತ್ರೀಯ ಅಧ್ಯಯನ ನಡೆಸಿ ವರದಿ ಕೂಡ ಸಲ್ಲಿಕೆಯಾಗಿದೆ. ಈ ವರದಿಯನ್ನು ಸದನದಲ್ಲಿ ಚರ್ಚೆ ನಡೆಸಿ ಎಸ್ಟಿ ವರ್ಗಕ್ಕೆ ಸೇರ್ಪಡೆಗೊಳಿಸುವಂತೆ ಶೀಘ್ರದಲ್ಲೇ ಕೇಂದ್ರಕ್ಕೆ ಶಿಫಾರಸು ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದ ಶ್ರೀಕಂಠೇಶ್ವರ ದೇವಾಲಯದ ದಾಸೋಹ ಭವನದ ಆವರಣದಲ್ಲಿ ಜಿಲ್ಲಾಡಳಿತ ಮತ್ತು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಏರ್ಪಡಿಸಲಾಗಿದ್ದ ಭಗೀರಥ ಮಹರ್ಷಿ ಜಯಂತ್ಯುತ್ಸವ ಕಾರ್ಯಕ್ರಮ ಮತ್ತು ಉಪ್ಪಾರ ಸಮುದಾಯ ಭವನದ ಶಂಕುಸ್ಥಾಪನೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಉಪ್ಪಾರ ಸಮುದಾಯ ಶೈಕ್ಷಣಿಕ, ಆರ್ಥಿಕವಾಗಿ, ಸಾಮಾಜಿಕ, ರಾಜಕೀಯವಾಗಿ ಅತ್ಯಂತ ಹಿಂದುಳಿದ ಸಮಾಜವಾಗಿದ್ದು, ಸಮುದಾಯವನ್ನು ಅಭಿವೃದ್ಧಿಪಡಿಸಿ ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಎಸ್‌ಟಿಗೆ ಸೇರ್ಪಡೆಗೊಳಿಸಲು ಕುಲಶಾಸ್ತ್ರೀಯ ಅಧ್ಯಯನ ಮಾಡಲಾಗಿದ್ದು, ಈ ವರದಿಯನ್ನು ಮುಂದಿನ ಸದನದಲ್ಲಿ ಚರ್ಚೆ ನಡೆಸಿ ಎಸ್‌ಟಿ ವರ್ಗಕ್ಕೆ ಸೇರ್ಪಡೆಗೊಳಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲಾಗುವುದು ಎಂದು ಅವರು ಹೇಳಿದರು.

2.25 ಕೋಟಿ ವೆಚ್ಚದಲ್ಲಿ ಉಪ್ಪಾರ ಸಮುದಾಯ ಭವನ ನಿರ್ಮಾಣ: ಶಾಸಕ ದರ್ಶನ್ ಧ್ರುವನಾರಾಯಣ ಮಾತನಾಡಿ, ಉಪ್ಪಾರ ಸಮುದಾಯ ಭವನ ನಿರ್ಮಾಣಕ್ಕಾಗಿ ಮುಖ್ಯಮಂತ್ರಿಗಳು ತಮ್ಮ ವಿಶೇಷ ಅನುದಾನದ ಅಡಿಯಲ್ಲಿ 1 ಕೋಟಿ ರೂ. ಬಿಡುಗಡೆ ಮಾಡಿದ್ದಾರೆ. ಅಲ್ಲದೆ ಕ್ಷೇತ್ರಕ್ಕೆ ಸುಮಾರು 50 ಕೋಟಿ ವಿಶೇಷ ಅನುದಾನ ನೀಡಲಾಗಿದ್ದು, ಆ ಅನುದಾನದಲ್ಲಿ 1 ಕೋಟಿ ಅನುದಾನವನ್ನು ಸಮುದಾಯ ಭವನ ನಿರ್ಮಾಣಕ್ಕೆ ಮೀಸಲಿಡಲಾಗುವುದು, 25 ಲಕ್ಷ ಹಳೆಯ ಅನುದಾನವಿದ್ದು, 2 ಕೋಟಿ 25 ಲಕ್ಷ ವೆಚ್ಚದಲ್ಲಿ ▶ 6ನೇ ಪುಟಕ್ಕೆ

ಜಂಬೂಸವಾರಿಯಂದೇ ಏರ್ ಶೋ



ಮೈಸೂರು,ಆ.31(ಎಂಟಿವೈ)–ದಸರಾ ಮಹೋತ್ಸವದಲ್ಲಿ ಈ ಬಾರಿ ಬಹು ನಿರೀಕ್ಷಿತ ವೈಮಾನಿಕ ಪ್ರದರ್ಶನ ದಸರಾ ದಿನವೇ ನಡೆಯುವ ಸಾಧ್ಯತೆಯಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಜಯದಶಮಿಯಂದೇ ಏರ್ ಶೋ ನಡೆಯಲಿದೆ ಎಂದು ತಿಳಿಸಿದ್ದಾರೆ. ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ದಸರಾ ವೇಳೆ ಏರ್ ಶೋ ನಡೆಸುವುದಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ ಸೂಚಿಸಿದೆ. ರಕ್ಷಣಾ ಇಲಾಖೆ ಏರ್ ಶೋ ನಡೆಸಲು ಅನುಮತಿ ನೀಡಿದೆ ಎಂದರು. ಇದೇ ವೇಳೆ ಏರ್ ಶೋ ದಿನಾಂಕ ಹೇಳುವಂತೆ ಕೇಳಿದ್ದಕ್ಕೆ ಮೊದಲು ▶ 6ನೇ ಪುಟಕ್ಕೆ

ಇ–ಖಾತಾ ವಿತರಣೆಯಲ್ಲಿ ಮೈಸೂರಿಗೆ ಅಗ್ರಸ್ಥಾನ

● ಆಸ್ತಿ ಮಾಲೀಕರಿಂದ ಉತ್ತಮ ಸ್ಪಂದನೆ ● ಪ್ರತಿ ಶುಕ್ರವಾರ ಇ–ಖಾತಾ ಜನಸ್ಪಂದನಾ ಕಾರ್ಯಕ್ರಮ ● ಆಸ್ತಿ ಖರೀದಿ, ಮಾರಾಟಕ್ಕೆ ಇ–ಖಾತಾ ಕಡ್ಡಾಯ ● ಆಸ್ತಿ ದಾಖಲೆ ರಚನೆ, ಹಕ್ಕು ವರ್ಗಾವಣೆಗೆ ಇ–ಆಸ್ತಿ ಸಾಫ್ಟ್‌ವೇರ್ ಬಳಕೆ

ಮೈಸೂರು, ಆ.31(ಆರ್‌ಕೆ, ಬಿಸಿಟಿ, ಬಿಎಲ್‌ಯು)–ಈ ವರ್ಷದ ಜುಲೈನಲ್ಲಿ ಆರಂಭವಾದ ಇ–ಖಾತಾ ಅಭಿಯಾನದಲ್ಲಿ ಇಡೀ ಕರ್ನಾಟಕದಲ್ಲೆ ಮೈಸೂರು ಅತಿ ಹೆಚ್ಚು ಇ–ಖಾತಾ ವಿತರಣೆ ಮಾಡಿ ದಾಖಲೆ ಬರೆದಿದೆ. ಒಟ್ಟು 1,50,671 ಇ–ಖಾತಾ ವಿತರಣೆ ಮೂಲಕ ಕರ್ನಾಟಕದಲ್ಲಿ ಮೈಸೂರು ಅಗ್ರಸ್ಥಾನ ಪಡೆದಿದೆ. ಆಸ್ತಿಗಳ ನೋಂದಣಿ, ಮಾರಾಟ ಮತ್ತು ಖರೀದಿಗೆ ಇ–ಖಾತಾ ಅಗತ್ಯವಾದ ಮೂಲ ದಾಖಲೆಯಾಗಿದೆ. ಇ–ಖಾತಾ ಇಲ್ಲದಿದ್ದರೆ ಯಾವುದೇ ಆಸ್ತಿಗಳ ನೋಂದಣಿ ಮತ್ತು ಮಾರಾಟ ಸಾಧ್ಯವಿಲ್ಲ. ಈ ಹಿನ್ನೆಲೆ ಆಸ್ತಿ ಮಾಲೀಕರು ಇ–ಖಾತಾವನ್ನು ಕಡ್ಡಾಯವಾಗಿ ಪಡೆಯಬೇಕು ಎಂದು ರಾಜ್ಯ ಸರ್ಕಾರ ಆದೇಶ ನೀಡಿತ್ತು.

ಈ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಇ–ಖಾತಾ ವಿತರಣೆಯನ್ನು ಬಿರುಸುಗೊಳಿಸಲಾಗಿದೆ. ನಿವೇಶನ ಮತ್ತು ಮನೆಗಳ ಮಾಲೀಕರು ಇ–ಖಾತಾ ಪಡೆಯಲು ಉತ್ಸಾಹ ತೋರಿದ್ದಾರೆ.



ಇದರಿಂದ ಆ.30ರವರೆಗೆ ಮೈಸೂರು ಜಿಲ್ಲೆಯಲ್ಲಿ ಒಟ್ಟು 1,50,671 ಅರ್ಜಿಯ ಎ (ಎ–ಖಾತಾ) ಮತ್ತು ಬಿ (ಬಿ–ಖಾತಾ) ಖಾತಾ ನೋಂದಣಿ ಮಾಡಿ ಆಸ್ತಿ ಮಾಲೀಕರಿಗೆ ನೀಡಲಾಗಿದೆ. ಮೈಸೂರು ನಗರಪಾಲಿಕೆ ವ್ಯಾಪ್ತಿಯಲ್ಲಿ 41,101 ಎ–ಖಾತಾ ಮತ್ತು 4,580 ಬಿ–ಖಾತಾ ▶ 6ನೇ ಪುಟಕ್ಕೆ

ಮೈಸೂರಲ್ಲಿ ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ಅವರ ಅದ್ಧೂರಿ ಹುಟ್ಟುಹಬ್ಬ ಆಚರಣೆ

ವಿವಿಧ ಕ್ಷೇತ್ರಗಳಲ್ಲಿ ಛಾಪು ಮೂಡಿಸಿದ ಸಂದೇಶ್ ನಾಗರಾಜ್

● ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ್ಣನೆ ● ಸಂದೇಶ್ ನಾಗರಾಜ್ ಹಾಗೂ ನನ್ನ ನಡುವೆ ರಾಜಕೀಯ ವೈರುಧ್ಯವಿದ್ದರೂ ವೈಯಕ್ತಿಕವಾಗಿ ನಾವು ಆತ್ಮೀಯರು

ಮೈಸೂರು, ಆ.31 (ಬಿಎಲ್‌ಯು)–ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ಅವರು ಹೋಟೆಲ್ ಉದ್ಯಮಿಯಾಗಿ, ಸಿನಿಮಾ ನಿರ್ಮಾಪಕರಾಗಿ, ರಾಜಕಾರಣಿಯಾಗಿ ತಮ್ಮದೆ ಆದ ಛಾಪು ಮೂಡಿಸಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ್ಣಿಸಿದರು.

ಮೈಸೂರಿನ ದಸರಾ ವಸ್ತುಪ್ರದರ್ಶನದ ಆವರಣದಲ್ಲಿ ಇಂದು ವಿಧಾನ ಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ಅವರ 80ನೇ ಹುಟ್ಟುಹಬ್ಬ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಎರಡು ಬಸ್‌ಗಳನ್ನು ಖರೀದಿ ಮಾಡಿ ಉದ್ಯಮ ಕ್ಷೇತ್ರಕ್ಕೆ ಕಾಲಿಟ್ಟ ಸಂದೇಶ್ ನಾಗರಾಜ್ ಅವರು, ನಂತರ ಹೋಟೆಲ್ ಉದ್ಯಮದಲ್ಲೂ ತಮ್ಮ ವ್ಯವಹಾರವನ್ನು ವಿಸ್ತರಿಸಿದರು ಎಂದರು.

ಸಂದೇಶ್ ನಾಗರಾಜ್ 1985ರಿಂದ ನನಗೆ ಪರಿಚಯವಿದೆ. ನಾನು ಪ್ರಥಮ ಪಿಯುಸಿ ವ್ಯಾಸಂಗ ಮಾಡುವಾಗ ಸಂದೇಶ್ ನಾಗರಾಜ್ ಅವರು ತೃತೀಯ ▶ 6ನೇ ಪುಟಕ್ಕೆ





ಮೈಸೂರಿನ ದಸರಾ ವಸ್ತುಪ್ರದರ್ಶನದ ಆವರಣದಲ್ಲಿ ಭಾನುವಾರ, 80 ವಸಂತ ಪೂರೈಸಿರುವ ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸನ್ಮಾನಿಸಿ, ಹುಟ್ಟುಹಬ್ಬದ ಶುಭ ಕೋರಿದರು. ಚಿತ್ರದಲ್ಲಿ ಸಚಿವ ಚಲುವರಾಯಸ್ವಾಮಿ, ಶಾಸಕ ತನ್ವೀರ್ ಸೇಠ್, ಮಾಜಿ ಮೇಯರ್ ಸಂದೇಶ್ ಸ್ವಾಮಿ, ನಟರಾದ ಕಿಚ್ಚ ಸುದೀಪ್, ಸಾಧುಕೋಕಿಲ, ಎಸ್.ಸಂದೇಶ್ ಇತರರಿದ್ದಾರೆ (ಎಡಚಿತ್ರ). ಸಮಾರಂಭದಲ್ಲಿ ಸೇರಿರುವ ಜನಸ್ತೋಮ (ಬಲಚಿತ್ರ).

> "ಬಸ್ ಮಾಲೀಕರಾಗಿದ್ದ ಸಂದೇಶ್ ನಾಗರಾಜ್ ಅವರು ಹೋಟೆಲ್ ಉದ್ಯಮಕ್ಕೂ ಕಾಲಿಟ್ಟರು. ನಾನು ಆಗಾಗ್ಗೆ ಉಪಾಹಾರಕ್ಕಾಗಿ ಅವರ ಹೋಟೆಲ್‌ಗೆ ಹೋಗುತ್ತಿದ್ದೆ. ಸಂದೇಶ್ ನಾಗರಾಜ್ 30ಕ್ಕೂ ಹೆಚ್ಚು ಸಿನಿಮಾಗಳನ್ನು ನಿರ್ಮಾಣ ಮಾಡಿದ್ದಾರೆ. ಸಿನಿಮಾ ನಿರ್ಮಾಣದ ಜೊತೆಗೆ ರಾಜಕೀಯ ಕ್ಷೇತ್ರಕ್ಕೂ ಕಾಲಿಟ್ಟು, ಎರಡು ಬಾರಿ ವಿಧಾನಪರಿಷತ್ ಸದಸ್ಯರಾಗಿದ್ದರು. ಈ ಮೂಲಕ ಸಂದೇಶ್ ನಾಗರಾಜ್ ಉದ್ಯಮಿಯಾಗಿ, ಸಿನಿಮಾ ನಿರ್ಮಾಪಕರಾಗಿ, ರಾಜಕಾರಣಿಯಾಗಿ ಬಹಳ ಎತ್ತರಕ್ಕೆ ಬೆಳೆದಿದ್ದು, ಈ ಕ್ಷೇತ್ರದಲ್ಲಿ ತಮ್ಮದೆ ಆದ ಛಾಪು ಮೂಡಿಸಿದ್ದಾರೆ ಎಂದು ಸಿದ್ದರಾಮಯ್ಯ ಪ್ರಶಂಸೆ ವ್ಯಕ್ತಪಡಿಸಿದರು.

> "ಕಬಡ್ಡಿ ಆಟಗಾರರಾಗಿದ್ದ ಸಂದೇಶ್ ನಾಗರಾಜ್ ಅವರ ಕಬಡ್ಡಿ ಆಟ ನೋಡಲು ನಾನು ಹೋಗುತ್ತಿದ್ದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂದೇಶ್ ನಾಗರಾಜ್ ಜೊತೆಗಿನ ಒಡನಾಟ ಮೆಲುಕು ಹಾಕಿದರು. ರಾಜಕೀಯವಾಗಿ ನಮ್ಮಿಬ್ಬರಲ್ಲಿ ವೈರುಧ್ಯವಿದ್ದರೂ ವೈಯಕ್ತಿಕವಾಗಿ ಅವರು ನನಗೆ ಸ್ನೇಹಮಯಿ. ಈಗ 80ನೇ ವಸಂತದ ಜನ್ಮದಿನ ಆಚರಣೆ ಮಾಡಿಕೊಳ್ಳುತ್ತಿರುವ ಮಾಜಿ ಎಂಎಲ್‌ಸಿ ಸಂದೇಶ್ ನಾಗರಾಜ್ ಅವರು 100 ವರ್ಷಕ್ಕೂ ಹೆಚ್ಚು ಕಾಲ ಸಂತೋಷದಿಂದ ಬದುಕಿ ಬಾಳಲಿ. ಇವರ ಕುಟುಂಬ ವರ್ಗಕ್ಕೂ ಆಯಸ್ಸು, ಆರೋಗ್ಯ ನೀಡಲಿ ಎಂದು ಶುಭ ಹಾರೈಸಿದರು.

ಸಂದೇಶ್ ನಾಗರಾಜ್, ಸಂದೇಶ್ ಸ್ವಾಮಿ ಲವ–ಕುಶರಿದ್ದಂತೆ

> "ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ಹಾಗೂ ಮಾಜಿ ಮೇಯರ್ ಸಂದೇಶ್‌ಸ್ವಾಮಿ ಅವರು ಲವ–ಕುಶರಿದ್ದಂತೆ ಎಂದು ಸಿದ್ದರಾಮಯ್ಯ ಬಣ್ಣಿಸಿದರು. ಸಂದೇಶ್ ನಾಗರಾಜ್ ಕಾಂಗ್ರೆಸ್‌ನಲ್ಲಿದ್ದರೆ, ಸಂದೇಶ್‌ಸ್ವಾಮಿ ಬಿಜೆಪಿಯಲ್ಲಿದ್ದಾರೆ. ಇವರಿಬ್ಬರು ರಾಜಕೀಯವಾಗಿ ಬೇರೆ ಬೇರೆ ಪಕ್ಷದಲ್ಲಿದ್ದರೂ ಸಂಬಂಧದಲ್ಲಿ ಲವ–ಕುಶರಂತೆ ಬದುಕಿ ಬಾಳುತ್ತಿದ್ದಾರೆ. ರಾಜಕೀಯವಾಗಿ ಅನುಸರಿಸುವ ಸಿದ್ಧಾಂತ ಬೇರೆ ಬೇರೆಯಾಗಿದ್ದರೂ ಇಬ್ಬರೂ ಹೀಗೆ ಜೊತೆಯಾಗಿರಿ ಎಂದು ಸಿದ್ದರಾಮಯ್ಯ ಅವರು ಸಂದೇಶ್ ನಾಗರಾಜ್ ಹಾಗೂ ಸಂದೇಶ್ ಸ್ವಾಮಿ ಅವರಿಗೆ ಸಲಹೆ ನೀಡಿದರು.

ನಕ್ಕರೆ ಅದೇ ಸ್ವರ್ಗ

ಹೊಸದಾಗಿ ಮದುವೆಯಾದ ಗುಂಡ ಅತ್ತೆ ಮನೆಗೆ ಹೋಗಿದ್ದ. ಅತ್ತೆ ವಾರ ಪೂರ್ತಿ ಕುಂಬಳಕಾಯಿ ಪಲ್ಯ, ಕುಂಬಳಕಾಯಿ ಗೊಜ್ಜು, ಕುಂಬಳಕಾಯಿ ಸಾರು, ಕುಂಬಳಕಾಯಿ ದೋಸೆ... ಹೀಗೆ ಕುಂಬಳಕಾಯಿ ಖಾದ್ಯ ಮಾಡಿದ್ಲು... 8ನೇ ದಿನ

ಅತ್ತೆ : ಅಳಿಯಂದ್ರೆ ಇವತ್ತು ಅಡುಗೆ ಏನ್ ಮಾಡ್ಲಿ?

ಗುಂಡ : ಅತ್ತೆ ಆ ತೊಂದರೆ ತಗೋಬೇಡಿ. ಕುಂಬಳಕಾಯಿ ತೋಟ ತೋರಿಸಿ, ಅಲ್ಲೇ ಹೋಗಿ ಮೇಯ್ದು ಬರ್ತಿನಿ!

ಮೈಸೂರು ಮಿತ್ರ

ಸೋಮವಾರ, 1 ಸೆಪ್ಟೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ......

'ಸಂಬಂಧಗಳಲ್ಲಿ ಕೆಲವೊಮ್ಮೆ ತಪ್ಪುಗಳನ್ನು ಕಂಡು ಕಾಣದಂತೆ ಇರಬೇಕು. ಏಕೆಂದರೆ ತಪ್ಪು ನನ್ನದಾ ಅಥವಾ ಅವರದಾ ಅನ್ನುವುದಕ್ಕಿಂತ ಸಂಬಂಧ ನಮ್ಮದು ಅನ್ನೋದು ನೆನಪಿರಲಿ'

ವೇದ ಸುಳ್ಳಾದರೂ { ತಾಳಿದವನು
ಗಾದೆ ಸುಳ್ಳಾಗದು { ಬಾಳಿಯಾನು

ನಿಮ್ಮ ಪತ್ರಗಳು

■ ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್: ಜನತೆ ಬೇಸರ, ಆಕ್ರೋಶ

ಮಾನ್ಯರೆ,

ಮೈಸೂರು ದಸರಾ ಮಹೋತ್ಸವ ಉದ್ಘಾಟನೆಗೆ ಬೂಕರ್ ಪ್ರಶಸ್ತಿ ಪುರಸ್ಕೃತೆ ಕವಯತ್ರಿ ಹಾಗೂ ಲೇಖಕಿ ಬಾನು ಮುಷ್ತಾಕ್ ಅವರಿಗೆ ಸಿದ್ದರಾಮಯ್ಯ ಸರ್ಕಾರ ಆಹ್ವಾನ ನೀಡಿದ್ದು ಈಗ ರಾಜಕೀಯ ಸ್ವರೂಪವನ್ನು ಪಡೆದುಕೊಂಡಿರುವುದು ಸರಿಯಷ್ಟೆ.

ಸಾಮಾನ್ಯ ಜನರೂ ಈ ವಿಷಯವನ್ನು ಚರ್ಚಿಸುವಂತಾಗಿ ಈಗ ಅವರ ಚಿಂತೆಗೆ ಕಾರಣವಾಗಿದೆ. ಶ್ರೀ ಮಾತಾ ಚಾಮುಂಡೇಶ್ವರಿ ದೇವಿಯು ಕೇವಲ ಈ ನಾಡ ಜನರ ಆರಾಧ್ಯ ದೇವತೆಯಲ್ಲ. ಬದಲಾಗಿ ಇಡೀ ಪ್ರಪಂಚದಲ್ಲಿಯೇ ಈ ಮಾತೆಯನ್ನು ಅಬಾಲ ವೃದ್ಧರಾದಿಯಾಗಿ ಎಲ್ಲರೂ ಅವಳನ್ನು ಸ್ತುತಿಸಿ ಪೂಜೆಯನ್ನು ಮಾಡಿ ಕೃತಾರ್ಥರಾಗುತ್ತಾರೆ. ಆದರೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಹಲವರ ಕುಮ್ಮಕ್ಕಿನಿಂದ ಮುಸ್ಲಿಂ ಪಂಗಡದವರಾದ ಬಾನುಮುಷ್ತಾಕ್ ಅವರನ್ನು, ನಾಡದೇವಿ ಶ್ರೀ ಚಾಮುಂಡೇಶ್ವರಿ ದೇವಿಯನ್ನು ಆನೆಯ ಮೇಲೆ ಇರಿಸುವ ದಸರಾ ಹಬ್ಬದ ಅಂಬಾರಿಯ ಮೆರವಣಿಗೆಯು ಶುರುವಾಗುವಾಗ ನಡೆಯುವ ಚಿನ್ನದ ಅಂಬಾರಿ ಪೂಜೆಯನ್ನು ಮಾಡಲು ಆಹ್ವಾನಿಸಿರುವುದು ಕೋಟ್ಯಾಂತರ ಹಿಂದೂ ಜನರ ಬೇಸರಕ್ಕೂ ಹಾಗೂ ಆಕ್ರೋಶಕ್ಕೆ ಕಾರಣವಾಗಿದೆ.

ಸರ್ಕಾರದ ಈ ನಡೆಯನ್ನು ಜನತೆಯು ತೀವ್ರವಾಗಿ ಆಕ್ಷೇಪಿಸುತ್ತಾ ಇದ್ದಾರೆ. ಇದಕ್ಕೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ರವರ ಕುಮ್ಮಕ್ಕು ಬೇರೆ! ನಾಚಿಕೆಗೇಡು! ಇವರು ನಮ್ಮ ನಾಯಕರು!! ಇವರುಗಳು ನಮ್ಮ ರಾಜ್ಯದ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ !!! ನಮ್ಮ ನಾಡಹಬ್ಬ ದಸರಾದ ಅಂಬಾರಿ ಮೆರವಣಿಗೆ ಸಂಪ್ರದಾಯಕ್ಕೆ ಇವರು ತಿಲಾಂಜಲಿಯನ್ನಿಟ್ಟಿದ್ದಾರೆ. ಭೇಷ್ ಸಾರ್ಥಕವಾಯಿತು ನಿಮ್ಮ ಜೀವನ. ಈ ನಿರ್ಧಾರದಿಂದ ನಿಮ್ಮ ಜೀವನ ಅಲ್ಲ. ನಮ್ಮ ಜೀವನ ಸಾರ್ಥಕವಾಯಿತು. ಧಿಕ್ಕಾರವಿರಲಿ ನಿಮ್ಮ ಈ ನಿರ್ಧಾರಕ್ಕೆ ಉಂಡ ಮನೆಗೆ ಎರಡು ಬಗೆಯುವ ಕೆಲಸವನ್ನು ಮಾಡಿದ್ದೀರಿ. ಬೇರೆ ಯಾರೂ ಸಿಗಲಿಲ್ಲವಾ ನಾಡದೇವಿ ಶ್ರೀ ಚಾಮುಂಡೇಶ್ವರಿ ದೇವಿಯ ಅಂಬಾರಿ ಮೆರವಣಿಗೆಯನ್ನು ಉದ್ಘಾಟಿಸುವುದಕ್ಕೆ. ನಮ್ಮ ರಾಜ್ಯದ ಪೊಲೀಸ್‌ರವರೊಬ್ಬರನ್ನು ದಸರಾ ಹಬ್ಬದ ಉದ್ಘಾಟನೆ ಮಾಡಲು ಕರೆಯಬಹುದಿತ್ತಲ್ಲವೇ? ಕನ್ನಡ ನಾಡಿನ ಜನತೆ ಲೇಖಕಿ ಬಾನು ಮುಷ್ತಾಕ್ ಅವರಿಗೆ ಅವರೊಬ್ಬರು ಮಹಿಳಾ ಸಂವೇದಿನಿಯಾದ ಲೇಖಕಿ ಎಂದು ಬಹಳ ಗೌರವವನ್ನು ಕೊಡುತ್ತಾರೆ. **–ಬೇಲೂರು ದ.ಶಂ.ಪ್ರಕಾಶ್, ಮೈಸೂರು.**

■ ತುಮಕೂರು ವಿವಿಗೆ ಲಿಂಗೈಕ್ಯ ಶಿವಕುಮಾರ ಸ್ವಾಮಿಗಳ ಹೆಸರಿಡುವುದು ಅತ್ಯಂತ ಸೂಕ್ತ

ಮಾನ್ಯರೆ,

ತುಮಕೂರು ವಿಶ್ವವಿದ್ಯಾನಿಲಯಕ್ಕೆ ತುಮಕೂರಿನ ಸಿದ್ದಗಂಗಾ ಮಠದ ಪೀಠಾಧ್ಯಕ್ಷರಾಗಿದ್ದ ಲಿಂಗೈಕ್ಯ ಡಾ.ಶಿವಕುಮಾರ ಸ್ವಾಮಿಗಳ ಹೆಸರನ್ನಿಡಬೇಕೆಂದು ಹಲವಾರು ಗಣ್ಯಾತಿಗಣ್ಯರು ಹಾಗೂ ಅಸಂಖ್ಯಾತ ಭಕ್ತ ವೃಂದದವರು ರಾಜ್ಯ ಸರ್ಕಾರವನ್ನು ಒತ್ತಾಯಿಸಿರುವುದು ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ನಡೆದಾಡುವ ದೇವರೆಂದೇ ಕರೆಯಲ್ಪಡುತ್ತಿದ್ದ ಡಾ.ಶಿವಕುಮಾರ ಸ್ವಾಮಿಗಳು ತಮ್ಮ ಆಧ್ಯಾತ್ಮಿಕ ಶಕ್ತಿಯಿಂದ ತುಮಕೂರನ್ನು ಪುಣ್ಯಭೂಮಿಯನ್ನಾಗಿಸಿದ್ದರು. ಅನ್ನ ದಾಸೋಹ, ಅಕ್ಷರ ದಾಸೋಹ, ಜ್ಞಾನದಾಸೋಹ ಮುಂತಾದವುಗಳ ಮೂಲಕ ಸಮಾಜದ ಬೆಳಕಾಗಿದ್ದ ಡಾ.ಶಿವಕುಮಾರ ಸ್ವಾಮಿಗಳು ಶತಾಯುಷಿಯಾಗಿ ತಮ್ಮ ದಿವ್ಯ ತೇಜಸ್ಸಿನಿಂದ ಈ ನಾಡಿನ ಓರ್ವ ವಿಭೂತಿ ಪುರುಷರಾಗಿ, ದೇಶಾದ್ಯಂತ ಹೆಸರು ಮಾಡಿದ್ದರು. ಇಂತಹ ಅಖಂಡ ದಿವ್ಯ ಚಾರಿತ್ರರ, ಪುಣ್ಯ ಪುರುಷರ ಹೆಸರನ್ನು ತುಮಕೂರು ವಿಶ್ವವಿದ್ಯಾನಿಲಯಕ್ಕೆ ಇಡುವುದು ರಾಜ್ಯ ಸರ್ಕಾರದ ಆದ್ಯ ಕರ್ತವ್ಯವಾಗಿದೆ.

–ಕೆ.ವಿ.ವಾಸು, ವಕೀಲರು–ನೋಟರಿ, ಮೈಸೂರು.

■ ಹಿಂದೂ ವಿರೋಧಿ ಇಂಡಿಯಾ ಮೈತ್ರಿ ಕೂಟ!

ಮಾನ್ಯರೆ,

ವಿಧಾನಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಆರ್‌ಎಸ್‌ಎಸ್ ಗೀತೆ, ನಮಸ್ತೆ. ಸದಾ ವತ್ಸಲೇ... ಹಾಡುವ ಮೂಲಕ ನಾನು ಹಿಂದೂ ವಿರೋಧಿಯಲ್ಲ, ಎಂದು ಬಿಂಬಿಸಿಕೊಳ್ಳುವ ಯತ್ನ ಮಾಡಿದ್ದರು. ಅವರು ಈ ರೀತಿ ಮಾಡಿದ್ದೂ ಇದೇ ಮೊದಲೇನೂ ಅಲ್ಲ. ಈ ಹಿಂದೆಯೇ ವಿಡಿಯೋವೊಂದು ವ್ಯಾಪಕ ವೈರಲ್ ಆಗಿತ್ತು.

ಇದೀಗ ಅವರು ಹಿಂದೂ ವಿರೋಧಿ ಪಕ್ಷಗಳಿಂದ, ಮಿತ್ರರಿಂದ, ಬೆಂಬಲಿಗರಿಂದ ವ್ಯಾಪಕ ವಿರೋಧ ವ್ಯಕ್ತವಾದ ಹಿನ್ನಲೆಯಲ್ಲಿ ಕಾಂಗ್ರೆಸ್ಸಿಗರ, ಬೆಂಬಲಿಗರ, ಇಂಡಿಯಾ ಮೈತ್ರಿ ಕೂಟದವರ ಕ್ಷಮೆ ಕೇಳಿರುವುದು ಕೂಡ ಗೌರಿ ಗಣೇಶ ಹಬ್ಬದ ಸಮಯದಲ್ಲೇ ವೈರಲ್ ಆಗಿದೆ. ಇದು ನಿಜಕ್ಕೂ ನಾಚಿಕೆಗೇಡಿನ ಸಂಗತಿ. ಇದು ಹಿಂದೂಗಳಿಗೆ, ಕಾಂಗ್ರೆಸ್ ಮತ್ತು ಇಂಡಿಯಾ ಮೈತ್ರಿಕೂಟ ಮಾಡಿದ ಅವಮಾನ. ಇಂತಹ ಹಿಂದೂ ವಿರೋಧಿ ಧೋರಣೆಯಿಂದಲೇ ಈ ಪಕ್ಷಗಳು, ವ್ಯಕ್ತಿಗಳು ಇಂದು ಮೂಲೆ ಗುಂಪಾಗಿದ್ದಾರೆ. ಆದರೂ ಅವರು ತಮ್ಮ ಧೋರಣೆಯನ್ನು ಬದಲಿಸಿಕೊಳ್ಳದಿರುವುದು ಖಂಡನೀಯ. ಹಿಂದೂಗಳಲ್ಲಿರುವ ವಿಭಿನ್ನ ಧೋರಣೆಯೇ ಇದಕ್ಕೂ ಕಾರಣವಾಗಿದೆ. ಇನ್ನಾದರೂ ಇಂತಹ ಮನಸ್ಥಿತಿ ಬದಲಾಗಬೇಕು.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

■ ಚಕ್ರ!

ಮಾನ್ಯರೆ,

ಕನ್ನಡದ ಪಾಲಿಗೆ
'ಸುದರ್ಶನ ಚಕ್ರ'ವೇ
ಆಗಿದ್ದರು, ಸ.ರ.ಸುದರ್ಶನ!
(ರಥಚಕ್ರ ಕೂಡ).
ಈಗ ಚಕ್ರವಿಲ್ಲ: ರಥ ಊನ
ಸಾಂತ್ವನ: ಅನಾಯಾಸ ಮರಣ!

ಪಾಪ: 'ತಾಯ ಮೇಲೆ ಅತ್ಯಾಚಾರ' (ಸುದ್ದಿ). ಹೇ ದೇವ! ಇನ್ನು ಮಾನವ ಪ್ರಾಣಿ ಮಾಡದೆ ಉಳಿಸಿರುವ ಪಾಪವಾದರೂ ಏನು?

–ಸಿಪಿಕೆ, ಹಿರಿಯ ಸಾಹಿತಿ, ಮೈಸೂರು.



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ವೈಭವದ ಗಣೇಶೋತ್ಸವದಲ್ಲಿ ನಿಜಭಕ್ತಿಗೆ ಅಭಾವ..!



> ಇಂದಿನ ಗಣೇಶೋತ್ಸವದಲ್ಲಿ ತೋರಿಕೆಗೆ ಹೆಚ್ಚು ಆದ್ಯತೆ ನೀಡಲಾಗುತ್ತಿದೆ. ಡೆಕೋರೇಶನ್ ಕಣ್ಣಿಗೆ ಕುಕ್ಕುವಂತಿರುತ್ತದೆ. ಗಣೇಶನ ಎದುರು ಅಸಂಬದ್ಧ ಗೀತೆಗಳ ಗಾಯನ, ಅರೆಬರೆ ಬಟ್ಟೆ ಧರಿಸಿ ನೃತ್ಯ ಮಾಡುವ ಕಾರ್ಯಕ್ರಮ ಏರ್ಪಡಿಸುವುದನ್ನು ಕಾಣಬಹುದು. ಪ್ರತಿಷ್ಠೆ ಹಾಗೂ ಸ್ಪರ್ಧೆಗೆ ಬಿದ್ದು ದುಂದು ವೆಚ್ಚ ಮಾಡುವುದು. ವಿಸರ್ಜನಾ ಕಾರ್ಯಕ್ರಮದಲ್ಲೂ ಡಿ.ಜೆ. ಸಂಗೀತಕ್ಕೆ ನೃತ್ಯ ಮಾಡುವುದು. ಗಣೇಶೋತ್ಸವ ಸಂದರ್ಭದಲ್ಲಿ ಗಲಾಟೆಗಳಾಗುವ ಕಾರಣಕ್ಕೆ ಪೊಲೀಸ್ ಸಿಬ್ಬಂದಿಯನ್ನು ಸರ್ಕಾರ ನಿಯೋಜಿಸುತ್ತಿದೆ ಎಂದರೆ ವಿಘ್ನ ವಿನಾಶಕನಿಗೆ ಎಷ್ಟು ಬೇಸರವಾಗಬೇಡ. ಭಾನುವಾರ ಹೆಚ್ಚು ವಿಸರ್ಜನಾ ಕಾರ್ಯಕ್ರಮವಿರುವುದರಿಂದ ಪ್ರಮುಖ ನಗರಗಳಲ್ಲಿ ಮದ್ಯ ಮಾರಾಟ ಬಂದ್ ಮಾಡುತ್ತದೆ ಎಂದರೆ ಗಣೇಶೋತ್ಸವದಲ್ಲಿ ಪಾಲ್ಗೊಳ್ಳುವ ಯುವಕರ ಅಭಿರುಚಿ ಎಂತದ್ದು ಎಂಬುದನ್ನು ಅರಿಯಬಹುದಾಗಿದೆ. ಎಲ್ಲರೂ ಹೀಗೆ ಇರುತ್ತಾರೆ ಎಂದು ಹೇಳುತ್ತಿಲ್ಲ. ಇಂದಿಗೂ ಕೆಲವು ಊರುಗಳಲ್ಲಿ, ಪಟ್ಟಣ/ನಗರದ ಕೆಲವು ಏರಿಯಾಗಳಲ್ಲಿ ಅರ್ಥಪೂರ್ಣ ಆಚರಣೆ ಮಾಡಲಾಗುತ್ತಿದೆ.

ಕೋಟಿ ದೇವರುಗಳ ನೆಲೆಬೀಡು ಭಾರತ ದೇಶದಲ್ಲಿ ಅಗ್ರಪೂಜೆ ಗಣೇಶನಿಗೆ ಮಾತ್ರ, ಜಾತ್ಯಾತೀತವಾಗಿ ಎಲ್ಲರಿಂದ ಪೂಜಿಸಲ್ಪಡುವ ಗಣೇಶ ವಿಘ್ನ ವಿನಾಶಕನಾಗಿ ತನ್ನ ಮಹಿಮೆಯನ್ನು ಭಾರತದ ಆಚೆಗೂ ತೋರಿದ್ದಾನೆ. ವಿಷ್ಣುವಿಗೆ ಹತ್ತು ಅವತಾರಗಳಿದ್ದರೆ, ಗಣೇಶನಿಗೆ ಜನರ ಭಕ್ತಿಯ ಪರಾಕಾಷ್ಠೆಯಿಂದ ನೂರಾರು ಅವತಾರಗಳಲ್ಲಿ ನೋಡುವಂತಾಗಿದೆ. ಜನಪ್ರಿಯ ಗಣಪತಿಯ ಹಬ್ಬವನ್ನು ಪ್ರತಿವರ್ಷ ಜನರು ಪ್ರಿಯವಾಗಿಯೇ ಆಚರಿಸುತ್ತಾರೆ.

ಗಣೇಶೋತ್ಸವದಲ್ಲಿ ಕಣ್ಣು, ಕಿವಿಗೆ ಮಾತ್ರ ಹಬ್ಬವಲ್ಲ, ನಾಲಗೆ ಹಾಗೂ ಹೊಟ್ಟೆಗೂ ಭರಪೂರ ಹಬ್ಬ. ಇಂತಿಪ್ಪ ಗಣೇಶೋತ್ಸವವು ಇಂದು ಎಲ್ಲೆಡೆ ವೈಭವದಿಂದ ಆಚರಿಸಲ್ಪಡುತ್ತಿದೆ. ಒಂದು ರೀತಿಯ ಅಭಿಮಾನವೂ ಮೂಡುತ್ತಿದೆ. ಆದರೆ ಎಲ್ಲೋ ಒಂದು ಕಡೆ ನಿಜ ಭಕ್ತಿಗೆ ಅಭಾವ ಉಂಟಾಗಿದೆಯಾ? ಎಂಬ ಅನುಮಾನವೂ ಮೂಡುತ್ತದೆ. ತನ್ಮೂಲಕ ವರ್ಷದಿಂದ ವರ್ಷಕ್ಕೆ ಈ ಮಹಾ ಉತ್ಸವವು ಅದರ ಮೂಲ ಅರ್ಥವನ್ನೆ ಕಳೆದುಕೊಳ್ಳುತ್ತಿದೆಯೇ? ಎಂಬ ಕಳವಳ ಉಂಟಾಗುತ್ತಿದೆ.

ಗಣೇಶನ ಹುಟ್ಟು ಪುರಾಣದ ಒಂದು ಸೋಜಿಗ ಎನಿಸಿದರೆ ಗಣೇಶೋತ್ಸವ ಪ್ರಾರಂಭವು ಸಹ ಇತಿಹಾಸದ ಒಂದು ಸೋಜಿಗ. 1894ರಲ್ಲಿ ಸ್ವಾತಂತ್ರ್ಯ ಸಂಗ್ರಾಮದ ರೂವಾರಿಗಳಲ್ಲಿ ಒಬ್ಬರಾದ ಶ್ರೀ ಬಾಲಗಂಗಾಧರ ತಿಲಕರು ಮೇಲ್ಜಾತಿಯ ಮನೆಯ ಹಬ್ಬವಾಗಿದ್ದ ಗಣೇಶ ಪೂಜೆಯನ್ನು ಸಾರ್ವಜನಿಕ ಕಾರ್ಯಕ್ರಮವಾಗಿ ಪರಿವರ್ತಿಸಿದರು. ಸ್ವಾತಂತ್ರ್ಯ ಸಂಗ್ರಾಮದ ಐಕ್ಯತೆಯ ಪ್ರತೀಕ ಗಣೇಶ ಚತುರ್ಥಿ. ಯುವಕರನ್ನು ಸಂಘಟಿಸಿ, ಸಾರ್ವಜನಿಕ ಪಾಲುದಾರಿಕೆಯಲ್ಲಿ ಸಂಗೀತ, ಮೆರವಣಿಗೆ ಇತ್ಯಾದಿ ಆಯೋಜಿಸಿ ಜಾಗೃತಿ ಮೂಡಿಸಿದ ಒಂದು ಐತಿಹಾಸಿಕ ಕಾರ್ಯಕ್ರಮ ಗಣೇಶೋತ್ಸವ. ತಿಲಕರ ಈ ಚಿಂತನೆಯು ನಿಜವಾಗಿಯೂ ಫಲ ಕೊಟ್ಟಿತು, ಬ್ರಿಟೀಷರ ಕಪಿಮುಷ್ಟಿಯಲ್ಲಿದ್ದ ಭಾರತ ಸ್ವತಂತ್ರ ಭಾರತವಾಯಿತು. ಅದರಲ್ಲಿ ಗಣೇಶೋತ್ಸವದ ಭಕ್ತಿಯ ಪಾತ್ರವೂ ಸಹ ಇದೆ. ಇಂದಿಗೂ ಭಾರತದ ಯುವಕರು ಸಾರ್ವಜನಿಕ ಗಣೇಶೋತ್ಸವವನ್ನು ತಮ್ಮ ಮನೆಯ ಕಾರ್ಯಕ್ರಮದಂತೆ ತುಂಬಾ ಉತ್ಸಾಹದಿಂದ ಆಚರಿಸುತ್ತಿರುವುದನ್ನು ಕಾಣಬಹುದು.

ಈ ಕಾಲಘಟ್ಟದ ಗಣೇಶೋತ್ಸವವನ್ನು ವಿವಿಧ ಆಯಾಮಗಳಲ್ಲಿ ಆಚರಿಸಲಾಗುತ್ತಿದೆ. ಇಲ್ಲಿ ಭಕ್ತಿಯಷ್ಟೇ ವಿಜೃಂಭಿಸುತ್ತಿಲ್ಲ, ಜಾತಿ, ಬಡಾವಣೆ, ಊರು, ರಾಜಕೀಯ ಇವೆಲ್ಲವುಗಳ ಆಯಾಮಗಳು ಸಹ ಇವೆ. ಒಂದು ಕಾಲದಲ್ಲಿ ಐಕ್ಯತೆಯ ಪ್ರತೀಕವಾಗಿದ್ದ ಗಣೇಶೋತ್ಸವ ಇಂದು ವಿಭಜಿಸುವ ಉತ್ಸವವಾಗಿ ಮಾರ್ಪಾಡಾಗುತ್ತಿರುವುದು ಆತಂಕಕಾರಿ ಬೆಳವಣಿಗೆ ಆಗಿದೆ. ಭಕ್ತಿಯ ಆಚರಣೆಗಿಂತ ಪ್ರತಿಷ್ಠೆ, ಸ್ಪರ್ಧೆ, ಪಕ್ಷದ ಮುಖಂಡರು ಮುನ್ನೆಲೆಗೆ ಬರುತ್ತಿರುವುದು ವಿಪರ್ಯಾಸ. ಹಿಂದೆ ಬೀದಿಗೊಂದು ಗಣಪನನ್ನು ನೋಡಬಹುದಿತ್ತು. ನಗರ ಪ್ರದೇಶಗಳ ಬಡಾವಣೆಗಳಲ್ಲಿ ಇಂದು ಒಂದು ಬೀದಿಯಲ್ಲಿಯೇ ನಾಲ್ಕಾರು ಗಣೇಶನ ಪ್ರತಿಷ್ಠಾಪನೆಯಾಗುತ್ತಿದೆ.

ಗೆಳೆಯರ ಗಣಪ, ಜಾತಿಯ ಗಣಪ, ಬೀದಿಯ ಗಣಪ, ಪಕ್ಷದ ಗಣಪ ಹೀಗೆ ಅನಾರೋಗ್ಯಕರ ಬೆಳವಣಿಗೆಗೆ ಗಣೇಶ ಸಾಕ್ಷಿಯಾಗುತ್ತಿರುವುದು ಮಾತ್ರ ನೋವಿನ ಸಂಗತಿಯಾಗಿದೆ. ಪ್ರತಿಷ್ಠೆಗೆ ಬಿದ್ದು, ಗ್ರಾಂಡ್ ಆಗಿ ಗಣೇಶನನ್ನು ಮೆರೆಸಬೇಕು ಎಂಬ ಭರದಲ್ಲಿ ಶಾಂತಿ, ಸೌಹಾರ್ದತೆ, ಐಕ್ಯತೆಯನ್ನು ಮರೆಯುತ್ತಿರುವುದು ವಿಪರ್ಯಾಸ.

ಭಾರತದ ಇಂದಿನ ನಿಜವಾದ ಶಕ್ತಿಯೇ ಯುವಶಕ್ತಿ. ಯುವಶಕ್ತಿಯನ್ನು ಸರಿಯಾದ ಮಾರ್ಗದಲ್ಲಿ ಬಳಸಿದರೆ ಮಾತ್ರ ಭಾರತ ಬಲಿಷ್ಠ ರಾಷ್ಟ್ರವಾಗಿ ಹೊರಹೊಮ್ಮಬಲ್ಲದು. ಅಂತಹ ಬಲಿಷ್ಠ ಶಕ್ತಿಯನ್ನು ಕೊಡುವ ಶಕ್ತಿ ಗಣೇಶನಿಗೆ ಇದೆ. ಆದರೆ ಗಣೇಶೋತ್ಸವದ ಆಚರಣೆಗೆ ಅನುಸರಿಸುವ ಮಾರ್ಗಗಳು ತುಸು ಬದಲಾವಣೆ ಹೊಂದಬೇಕಿದೆ. ಗಣಪತಿ ಹಬ್ಬ ಎಂದರೆ ಕೆಲವರಿಗೆ ನಿಜಕ್ಕೂ ಒಂದು ಹಬ್ಬವೇ ಸರಿ. ಸಾರ್ವಜನಿಕರಿಂದ ವಂತಿಕೆ ರೂಪದಲ್ಲಿ ಸಂಗ್ರಹಿಸಿದ ಹಣವನ್ನು ಬೇಕಾಬಿಟ್ಟಿ ಖರ್ಚು ಮಾಡಿ, ಕೊನೆಗೆ ಯಾವುದೇ ಲೆಕ್ಕವನ್ನು ಕೊಡದೆ, ಜನರಿಗೆ ದೊನ್ನೆ ಪ್ರಸಾದ ಕೊಟ್ಟು, ಪ್ರಸಾದದ ರೂಪದಲ್ಲಿ ಹಣವನ್ನು ಗುಳುಂ ಮಾಡುವ ಮಂದಿ ಕೆಲವರಿದ್ದರೆ, ಮತ್ತೆ ಕೆಲವರು ಶ್ರಮವಹಿಸಿ ದುಡಿದ ಹಣವನ್ನು ಗಣೇಶೋತ್ಸವಕ್ಕೆ ಉದಾರವಾಗಿ ನೀಡುವುದು ಉಂಟು. ವಂತಿಕೆ ಸ್ವೀಕರಿಸುವ ಮಾದರಿಗಳು ಇಂದು ಬದಲಾಗುತ್ತಿರುವುದು ರೇಜಿಗೆ ತರಿಸುತ್ತಿದೆ. ಕೆಲವು ಏರಿಯಾಗಳಲ್ಲಿ ಯುವಕರು ವಿನಂತಿಸುವ ಬದಲು ಹೆದರಿಸಿ ಇಂತಿಷ್ಟೇ ವಂತಿಕೆ ನೀಡಬೇಕು ಎಂದು ತಾಕೀತು ಮಾಡಿ ವಸೂಲು ಮಾಡುವುದು, ಅವರು ಕೇಳಿದಷ್ಟು ನೀಡಲು ಆಗದಿದ್ದರೆ, ಅವರನ್ನು ಹೀಯಾಳಿಸುವುದು ಇತ್ಯಾದಿ ಕೆಲವರ ಮನಸ್ಸಿಗೆ ಮುಜುಗರ ಉಂಟು ಮಾಡುತ್ತದೆ. ಇತ್ತೀಚೆಗೆ ಕೆಲವು ಕಡೆಗಳಲ್ಲಿ ಟೋಲ್‌ಗೇಟ್ ಮಾದರಿಯಲ್ಲಿ ರಸ್ತೆಯಲ್ಲಿ ಅಡ್ಡಗಟ್ಟಿ ಗಣೇಶೋತ್ಸವಕ್ಕೆ ಹಣ ವಸೂಲಿ ಮಾಡುತ್ತಿರುವುದನ್ನು ಕಂಡು ನಿಜಕ್ಕೂ ಬೇಸರವಾಯಿತು. ಕೆಲವು ಯುವಕರಂತೂ ಸಾಲ ಕೊಟ್ಟ ಮಾದರಿಯಲ್ಲಿ ಹಣ ವಸೂಲಿಗೆ ನಿಲ್ಲುತ್ತಿರುವುದು ಅಹಿತವೆನಿಸುತ್ತದೆ.

ಗಣೇಶೋತ್ಸವಕ್ಕೆ ಕೆಲವು ಶ್ರೀಮಂತರು, ರಿಯಲ್ ಎಸ್ಟೇಟ್ ದೊರೆಗಳು, ಉದ್ಯಮಿಗಳು, ಪ್ರೀತಿಯಿಂದ ಸೇವಾರ್ಥದ ರೂಪದಲ್ಲಿ ಸ್ಪಾನ್ಸರ್ ಮಾಡುತ್ತಾರೆ. ಗಣೇಶಮೂರ್ತಿ ಖರೀದಿಸಲು ಹಣ ನೀಡುವುದು, ಪೆಂಡಾಲ್ ಹಾಕಿಸಿಕೊಡುವುದು, ಮೈಕ್ ಮತ್ತು ಲೈಟ್ ವ್ಯವಸ್ಥೆ ಮಾಡಿಕೊಡುವುದು, ಪ್ರಸಾದ ವ್ಯವಸ್ಥೆ ಮಾಡಿಸುವುದು, ರಸಸಂಜೆ ಕಾರ್ಯಕ್ರಮಗಳಿಗೆ ಪ್ರಾಯೋಜಕತ್ವ ನೀಡುವುದು ಇತ್ಯಾದಿ. ಆದರೆ ಕೆಲವರಿಗೆ ಕಡ್ಡಾಯವಾಗಿ ಇಷ್ಟೇ ನೀಡಬೇಕು ಎಂದು ಆಯೋಜಕರು ಡಿಮ್ಯಾಂಡ್ ಮಾಡುವುದನ್ನು ಸಹ ಕೇಳಿದ್ದೇವೆ. ಮುಂಬೈ ನಗರದಲ್ಲಿ ನೂರಾರು ಕೋಟಿ ರೂಪಾಯಿಯ ವಿಮೆ ಮಾಡಿಸುವಷ್ಟು ಶ್ರೀಮಂತ ಗಣಪತಿಯನ್ನು ಪ್ರತಿಷ್ಠಾಪಿಸಲಾಗುತ್ತದೆ. ವಿಸರ್ಜನಾ ಕಾರ್ಯಕ್ರಮವು ಅದ್ದೂರಿಯಾಗಿರುತ್ತದೆ.

ಕಾಲವೊಂದಿತ್ತು. ಗಣೇಶೋತ್ಸವ ಅರ್ಥಪೂರ್ಣವಾಗಿ ಆಚರಿಸಲಾಗುತ್ತಿತ್ತು. ಯಾವುದೇ ಬೇಡಿಕೆ ಇಲ್ಲ. ಸಂಗ್ರಹವಾದ ಹಣದಲ್ಲಿ ಅದ್ದೂರಿಯಾಗಿ ಅಲ್ಲದಿದ್ದರೂ ಸಂಭ್ರಮ, ಸಡಗರದಿಂದ ಗಣೇಶೋತ್ಸವ ಆಚರಿಸಲಾಗುತ್ತಿತ್ತು. ಸಂಜೆ ವೇಳೆ ವಿಶಿಷ್ಟ ಕಾರ್ಯಕ್ರಮಗಳು ಆಯೋಜನೆ ಆಗುತ್ತಿತ್ತು. ಆರ್ಕೆಸ್ಟ್ರಾ, ಶಾಸ್ತ್ರೀಯ ಸಂಗೀತ, ನೃತ್ಯ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿತ್ತು. ಸ್ಥಳೀಯ ಪ್ರತಿಭೆಗಳಿಗೆ ವೇದಿಕೆ ನೀಡಿ ಬಹುಮಾನ ನೀಡಲಾಗುತ್ತಿತ್ತು. ಯಾವುದೇ ರೀತಿಯ ಅತಿರೇಕಗಳು ಇರುತ್ತಿರಲಿಲ್ಲ. ಗಣಪತಿ ವಿಸರ್ಜನೆಯೂ ಅಷ್ಟೇ, ಸೌಹಾರ್ದಯುತವಾಗಿರುತ್ತಿತ್ತು, ವಾದ್ಯ ಸಂಗೀತ, ಯುವಕರ ನೃತ್ಯದೊಂದಿಗೆ ಭಕ್ತಿಯ ವೈಭವ ಕಾಣುತ್ತಿತ್ತು. ಸ್ಥಳೀಯ ಕೆರೆ, ಕಟ್ಟೆ, ನದಿಗಳಲ್ಲಿ ಅರ್ಥಪೂರ್ಣವಾಗಿ, ಭಕ್ತಿಪ್ರಧಾನವಾಗಿ ವಿಸರ್ಜನೆಯಾಗುತ್ತಿತ್ತು. ಎಲ್ಲರ ಮುಖದಲ್ಲೂ ಒಂದು ಸಮಾಧಾನ ಮೂಡುತ್ತಿತ್ತು.

ಇಂದಿನ ಗಣೇಶೋತ್ಸವದಲ್ಲಿ ತೋರಿಕೆಗೆ ಹೆಚ್ಚು ಆದ್ಯತೆ ನೀಡಲಾಗುತ್ತಿದೆ. ಡೆಕೋರೇಶನ್ ಕಣ್ಣಿಗೆ ಕುಕ್ಕುವಂತಿರುತ್ತದೆ. ಗಣೇಶನ ಎದುರು ಅಸಂಬದ್ಧ ಗೀತೆಗಳ ಗಾಯನ, ಅರೆಬರೆ ಬಟ್ಟೆ ಧರಿಸಿ ನೃತ್ಯ ಮಾಡುವ ಕಾರ್ಯಕ್ರಮ ಏರ್ಪಡಿಸುವುದನ್ನು ಕಾಣಬಹುದು. ಪ್ರತಿಷ್ಠೆ ಹಾಗೂ ಸ್ಪರ್ಧೆಗೆ ಬಿದ್ದು ದುಂದುವೆಚ್ಚ ಮಾಡುವುದು. ವಿಸರ್ಜನಾ ಕಾರ್ಯಕ್ರಮದಲ್ಲೂ ಡಿ.ಜೆ.ಸಂಗೀತಕ್ಕೆ ನೃತ್ಯ ಮಾಡುವುದು. ಗಣೇಶೋತ್ಸವ ಸಂದರ್ಭದಲ್ಲಿ ಗಲಾಟೆಗಳಾಗುವ ಕಾರಣಕ್ಕೆ ಪೊಲೀಸ್ ಸಿಬ್ಬಂದಿಯನ್ನು ಸರ್ಕಾರ ನಿಯೋಜಿಸುತ್ತಿದೆ ಎಂದರೆ ವಿಘ್ನ ವಿನಾಶಕನಿಗೆ ಎಷ್ಟು ಬೇಸರವಾಗಬೇಡ. ಭಾನುವಾರ ಹೆಚ್ಚು ವಿಸರ್ಜನಾ ಕಾರ್ಯಕ್ರಮವಿರುವುದರಿಂದ ಪ್ರಮುಖ ನಗರಗಳಲ್ಲಿ ಮದ್ಯ ಮಾರಾಟ ಬಂದ್ ಮಾಡುತ್ತದೆ ಎಂದರೆ ಗಣೇಶೋತ್ಸವದಲ್ಲಿ ಪಾಲ್ಗೊಳ್ಳುವ ಯುವಕರ ಅಭಿರುಚಿ ಎಂತದ್ದು ಎಂಬುದನ್ನು ಅರಿಯಬಹುದಾಗಿದೆ. ಎಲ್ಲರೂ ಹೀಗೆ ಇರುತ್ತಾರೆ ಎಂದು ಹೇಳುತ್ತಿಲ್ಲ. ಇಂದಿಗೂ ಕೆಲವು ಊರುಗಳಲ್ಲಿ, ಪಟ್ಟಣ/ನಗರದ ಕೆಲವು ಏರಿಯಾಗಳಲ್ಲಿ ಅರ್ಥಪೂರ್ಣ ಆಚರಣೆ ಮಾಡಲಾಗುತ್ತಿದೆ. ಭಕ್ತಿಪ್ರಧಾನವಾದ ಕಾರ್ಯಕ್ರಮಗಳು ಸಹ ನಡೆಯುತ್ತಿವೆ. ಧರ್ಮಾತೀತವಾಗಿಯೂ ಗಣೇಶನ ಉತ್ಸವ ಮಾಡಿದ ವರದಿಗಳು ಸಹ ಆಗಿವೆ. ಆದರೆ ಭಕ್ತಿಯ ಅಭಾವ ಇರುವ ವೈಭವದ ಗಣೇಶೋತ್ಸವಗಳೇ ಹೆಚ್ಚು ಎಂಬುದು ಗಮನಾರ್ಹ.

ಗಣೇಶೋತ್ಸವ ಸಂದರ್ಭಗಳಲ್ಲಿ ಆಗುತ್ತಿರುವ ಅವಘಡಗಳಿಗೆ ಲೆಕ್ಕವಿಲ್ಲ. ಇತ್ತೀಚೆಗೆ ಪಟಾಕಿ ಸಿಡಿದು ಹುಡುಗನೊಬ್ಬ ಮೃತಪಟ್ಟ ವರದಿಯಾಗಿದೆ. ವಿದ್ಯುತ್ ತಗುಲಿ ಪ್ರಾಣ ಕಳೆದುಕೊಂಡಿದ್ದಾರೆ. ವಿಸರ್ಜನೆ ವೇಳೆಯಲ್ಲಿ ಉತ್ಸಾಹ ಅಥವಾ ಉನ್ಮಾದದಲ್ಲಿ ನದಿ/ಕೆರೆಯಲ್ಲಿ ಮುಳುಗುವ ಯುವಕರ ಸಂಖ್ಯೆಗೆ ಲೆಕ್ಕವಿಲ್ಲ. ಗಣೇಶೋತ್ಸವ ಎಂಬುದು ಯುವಕರ ಮನೆಯವರಿಗೆ ಭಕ್ತಿಭಾವ ಮೂಡಿಸಬೇಕೆ ವಿನಃ ಯುವಕರು ಪ್ರಾಣ ಕಳೆದುಕೊಂಡು ಪ್ರತಿವರ್ಷವು ಹಬ್ಬ ಎಂಬುದು ದುಸ್ವಪ್ನವಾಗಿ ಕಾಡಬಾರದು.

ಇನ್ನು ಬೃಹತ್ ಗಣೇಶ ಮೂರ್ತಿಗಳ ವಿಸರ್ಜನೆಗೆ ಕ್ರೇನ್ ಬಳಸುವುದನ್ನು ಕಾಣಬಹುದು. ಆದರೆ ಖೇದಕರ ಸಂಗತಿ ಏನೆಂದರೆ ಹತ್ತಾರು ಅಡಿಗಳ ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ನಿರ್ಮಿಸಿದ ಬೃಹತ್ ಗಣೇಶ ಮೂರ್ತಿಗಳ ವಿಸರ್ಜನೆ ನಂತರ ಅವುಗಳು ನದಿ, ಕೆರೆ, ಸಮುದ್ರಗಳಲ್ಲಿ ಪೂರ್ತಿ ಮುಳುಗದೆ ಅಂಗಹೀನವಾಗಿ, ವಿಕಾರವಾಗಿ ಬಿದ್ದಿರುವುದು ನಿಜಭಕ್ತರ ಮನಸ್ಸಿಗೆ ಕಸಿವಿಸಿ ಉಂಟುಮಾಡುತ್ತದೆ. ಭಕ್ತಿಪ್ರಾಧಾನವಾಗಬೇಕಿರುವ ಈ ಉತ್ಸವದಲ್ಲಿ ಯುಕ್ತಿಪ್ರಧಾನವಾಗಿ ಇಂದಿನ ಯುವ ಸಮೂಹ ಪ್ರಜ್ಞಾಶೂನ್ಯರಾಗಿ ವರ್ತಿಸುತ್ತಿರುವುದು ವಿಪರ್ಯಾಸ. ಲಕ್ಷ/ಕೋಟಿ ರೂಪಾಯಿ ಖರ್ಚು ಮಾಡುವ ಸಂಘಟಕರು ಹೃದಯ ಶ್ರೀಮಂತಿಕೆ, ಭಕ್ತಿ ಶ್ರೀಮಂತಿಕೆ ತೋರಬೇಕಿದೆ. ದೇವರನ್ನು ದೇವರೇ ಕಾಪಾಡಿಕೊಳ್ಳಬೇಕು ಎಂಬ ಪರಿಸ್ಥಿತಿ ನಿರ್ಮಾಣವಾಗುತ್ತಿರುವುದು ದುರದೃಷ್ಟಕರ.

ಯಾವುದೇ ಧಾರ್ಮಿಕ ಕಾರ್ಯಕ್ರಮವು ಭಕ್ತಿಯೆಂಬ ಸುಮಧುರವಾದ ಸುಮ ಅರಳಿಸುವ ಹಾಗೆ ಇರಬೇಕು. ಸಮಾಧಾನ, ಶಾಂತಿಯನ್ನು ವೃದ್ಧಿಸುವಂತಿರಬೇಕು. ಭಕ್ತಿಯ ಹೆಸರಿನಲ್ಲಿ ನಡೆಯುವ ರಂಜನೆಯ ಉತ್ಸವವು ಮನಸ್ಸನ್ನೆ ಕೆರಳಿಸಿ ಅಸಮಾಧಾನ, ಅಶಾಂತಿ ಉಂಟುಮಾಡಬಾರದು. ಎಷ್ಟೇ ಉತ್ಸಾಹ ಇದ್ದರೂ, ಭಕ್ತಿಯ ಪರಾಕಾಷ್ಠೆ ಇರಬೇಕೇ ಹೊರತು ಉನ್ಮಾದ ಇರಬಾರದು. ಆಯೋಜಕರು ತುಂಬಾ ಜವಾಬ್ದಾರಿಯಿಂದ ವರ್ತಿಸಬೇಕು. ಮುಂದಿನ ಪೀಳಿಗೆಗೆ ಗಣೇಶೋತ್ಸವದ ಮೂಲಕ ಒಂದು ಸಂದೇಶವನ್ನು ನೀಡಬೇಕು. ಉತ್ಸವ ಎಂದರೆ ಕೇವಲ ಅದ್ದೂರಿ ಆಚರಣೆ ಎಂಬ ತಪ್ಪು ಸಂದೇಶ ನೀಡಬಾರದು. ಸಂಘಟಕರು ಸೂಕ್ತ ರೀತಿಯಲ್ಲಿ ಮೇಲ್ವಿಚಾರಣೆ ಮಾಡಿ ಸಾವು–ನೋವುಗಳಾಗದಂತೆ ನೋಡಿಕೊಳ್ಳಬೇಕು. ಗಣೇಶೋತ್ಸವದಲ್ಲಿ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಅವಕಾಶ ನೀಡಬಾರದು.

ಸ್ಪರ್ಧೆ, ಪ್ರತಿಷ್ಠೆ, ಸೇಡಿಗೆ ಅವಕಾಶ ನೀಡಬಾರದು. ಎಲ್ಲದಕ್ಕಿಂತ ಹೆಚ್ಚಾಗಿ ಭಕ್ತಿಯೇ ಪ್ರಧಾನ ಅಂಶವಾಗಬೇಕು. ಗಣೇಶ ಸರ್ವರಿಗೂ ಸದ್ಬುದ್ಧಿಯನ್ನು ನೀಡುತ್ತಾನೆ. ಆದರೆ ಅದನ್ನು ಸದ್ವಿನಿಯೋಗ ಮಾಡಬೇಕಾದ ಹೊಣೆಗಾರಿಕೆ, ಪ್ರಬುದ್ಧತೆ ನಮಗಿರಬೇಕು. ಜೈ ಗಣೇಶ.

ಹೂರಣ: ಗಣೇಶ ಮೂರ್ತಿಯನ್ನು ವಿಸರ್ಜನೆ ಮಾಡಬೇಕೇ ವಿನಃ ಬುದ್ಧಿ/ಭಕ್ತಿಯನ್ನು ಅಲ್ಲ.

ಸಾಹಿತ್ಯ ಲೋಕದ ಮಿನುಗುತಾರೆ ತ್ರಿವೇಣಿ

ಇಂದು ಖ್ಯಾತ ಲೇಖಕಿ ತ್ರಿವೇಣಿರವರ ಜನ್ಮದಿನ. ತನ್ನಿಮಿತ್ತ ಈ ಲೇಖನ.

ಕನ್ನಡದ ಸಾರಸ್ವತ ಲೋಕದಲ್ಲಿ ಎಂದೂ ಮರೆಯದ, ಮರೆಯಲಾಗದ ಹೆಸರು ತ್ರಿವೇಣಿ ಅಲಿಯಾಸ್ ಅನುಸೂಯ. ತ್ರಿವೇಣಿರವರು ಅಪರೂಪದ ಕಾದಂಬರಿಗಾರ್ತಿ ಅಂದರೆ ಅತಿಶಯೋಕ್ತಿಯಲ್ಲ. ಮಂಡ್ಯದಲ್ಲಿ ನೆಲೆಸಿದ್ದ ವಕೀಲ ಮಧ್ಯಮ ಕುಟುಂಬದ ಬಿ.ಎಂ ಕೃಷ್ಣಸ್ವಾಮಿ ಮತ್ತು ತಂಗಮ್ಮ ದಂಪತಿಗೆ 01–09–1928 ರಂದು ಜನಿಸಿದ ಇವರು ಮಂಡ್ಯದಲ್ಲೇ ಹೈಸ್ಕೂಲ್ ಶಿಕ್ಷಣ ಪಡೆದರು. ನಂತರ 1947ರಲ್ಲಿ ಕಾಲೇಜು ಶಿಕ್ಷಣವನ್ನು ಮೈಸೂರಿನ ಮಹಾರಾಜ ಕಾಲೇಜಿನ ಮನ:ಶಾಸ್ತ್ರ ವಿಷಯದಲ್ಲಿ ಹೆಚ್ಚಿನ ಅಂಕಗಳಿಸಿ ಸಿದ್ದೇಗೌಡ ದತ್ತಿಯ ಚಿನ್ನದ ಪದಕ ಪಡೆದು ಬಿಎ ಪದವಿ ಪೂರೈಸಿದರು. ಅಲ್ಲದೇ ವಿಶೇಷವಾದ ತಾತಯ್ಯ ಪ್ರಶಸ್ತಿ ಸಹ ಪಡೆದರು. ಮತ್ತೆ ಮಂಡ್ಯಕ್ಕೆ ವಾಪಸ್ ಬಂದು ಅಲ್ಲಿನ ಪ್ರೌಢಶಾಲೆಯಲ್ಲಿ ಅಧ್ಯಾಪಕಿಯಾಗಿ ಸೇವೆ ಸಲ್ಲಿಸಿದರು.

ಅನುಸೂಯರವರು ತಮ್ಮ ಮೊದಲ ಕಥೆಯನ್ನು ತ್ರಿವೇಣಿ ಎಂಬ ಕಾವ್ಯನಾಮದಿಂದ ಪತ್ರಿಕೆಗೆ ಕಳುಹಿಸಿದರು. ಪತ್ರಿಕೆಯ ಸಂಪಾದಕರ ಸಲಹೆಯಂತೆ ತ್ರಿವೇಣಿ ಎಂಬ ಕಾವ್ಯನಾಮವನ್ನು ಮುಂದುವರೆಸಿ, 1953ರಲ್ಲಿ ಅಪಸ್ವರ ಎಂಬ ಮೊದಲ ಕಾದಂಬರಿಯನ್ನು ರಚಿಸಿ ಪ್ರಸಿದ್ಧರಾದರು. ತ್ರಿವೇಣಿರವರು ಬರವಣಿಗೆಗಾಗಿಯೇ ಅಧ್ಯಾಪಕ ವೃತ್ತಿಗೆ ರಾಜೀನಾಮೆ ಕೊಟ್ಟರು. ತ್ರಿವೇಣಿರವರ ಅನೇಕ ಕಾದಂಬರಿ, ಕಥೆಗಳು ಮನ:ಶಾಸ್ತ್ರದ ಅಧ್ಯಯನಕ್ಕೆ ಸಂಬಂಧಪಟ್ಟಿದ್ದಾಗಿದೆ. ಅವರು



ಕಾದಂಬರಿಗಾರ್ತಿ ತ್ರಿವೇಣಿ

ಸಾಮಾಜಿಕ ಕಾದಂಬರಿ, ಮನೋವೈಜ್ಞಾನಿಕ ಕಾದಂಬರಿ ಮತ್ತು ಸಣ್ಣಕಥೆಗಳನ್ನು ಆಧರಿಸಿ ಸುಮಾರು 21 ಕಾದಂಬರಿಗಳು ಮತ್ತು ಮೂರು ಸಣ್ಣಕಥೆಗಳ ಸಂಕಲನ ರಚಿಸಿದರು. ಅವುಗಳೆಂದರೆ, 1. ಅಪಸ್ವರ 2. ಅಪಜಯ 3. ಬೆಕ್ಕಿನಕಣ್ಣು 4. ಹೃದಯಗೀತಾ 5. ದೂರದಬೆಟ್ಟ 6. ಶರಪಂಜರ 7. ಮೊದಲಹೆಜ್ಜೆ 8. ಸೋತುಗೆದ್ದವಳು 9. ತಾವರೆಯ ಕೊಳ 10. ಅವಳ ಮನೆ 11. ಮುಕ್ತಿ 12. ಕಂಕಣ 13. ಬೆಳ್ಳಿಮೋಡ 14. ಕೀಲುಗೊಂಬೆ 15. ಹಣ್ಣೆಲೆ ಚಿಗುರಿದಾಗ 16. ಹೂವು ಹಣ್ಣು 17. ಬಾನು ಬೆಳಗಿತು 18. ಕಾಶಿಯಾತ್ರೆ 19. ಮುಚ್ಚಿದ ಬಾಗಿಲು. 20. ಅವಳ ಮಗಳು 21. ವಸಂತಗಾನ ಹಾಗೂ ಸಣ್ಣಕಥೆಗಳಾದ ಸಮಸ್ಯೆಯ ಮಗು, ಹೆಂಡತಿಯ ಹೆಸರು, ಎರಡು ಮನಸ್ಸು .

ಇವರ ಪ್ರಮುಖ ಆರು ಕಾದಂಬರಿಗಳಾದ ಹಣ್ಣೆಲೆ ಚಿಗುರಿದಾಗ, ಬೆಳ್ಳಿಮೋಡ, ಶರಪಂಜರ, ಮುಕ್ತಿ, ಹೂವುಹಣ್ಣು ಮತ್ತು ಕಂಕಣ ಚಲನಚಿತ್ರವಾಗಿ ತೆರೆಕಂಡವು. ಹೆಸರಾಂತ ನಿರ್ದೇಶಕ ಪುಟ್ಟಣ್ಣ ಕಣಗಾಲ್‌ರವರು ನಿರ್ದೇಶಿಸಿದ ಬೆಳ್ಳಿಮೋಡ, ಶರಪಂಜರ ಚಿತ್ರಗಳು ಯಶಸ್ವಿಯಾಗಿ ಪ್ರದರ್ಶನಗೊಂಡವು. ತ್ರಿವೇಣಿರವರ ಅಪಸ್ವರ ಮತ್ತು ಅಪಜಯ ಕಾದಂಬರಿಗಳು ಹಿಂದಿ ಭಾಷೆಗೆ ಎಸ್.ಎಂ.ರಾಮಸ್ವಾಮಿಯವರು, ಶರಪಂಜರ ಕಾದಂಬರಿಯನ್ನು ಮೀರಾ ನರ್ವೇಕರ್ ರವರು ಇಂಗ್ಲೀಷ್ ಭಾಷೆಗೂ ಮತ್ತು ಬೆಕ್ಕಿನಕಣ್ಣು ಕಾದಂಬರಿಯನ್ನು ಶರ್ವಾಣಿರವರು ತೆಲುಗು ಭಾಷೆಗೆ ಅನುವಾದಿಸಿರುತ್ತಾರೆ. ಅಲ್ಲದೇ ಕಿರುತೆರೆಗೆ ಧಾರವಾಹಿ ಸರಣಿಯಾಗಿ ಅವಳ ಮನೆ, ಅಪಸ್ವರ ಮತ್ತು ಅಪಜಯ ಕಾದಂಬರಿಗಳನ್ನು ದೂರದರ್ಶನ ಮಾಧ್ಯಮದಲ್ಲಿ ಪ್ರಸಾರ ಮಾಡಲಾಗಿದೆ.

ತಮ್ಮ 35ನೇ ವಯಸ್ಸಿನಲ್ಲಿ ಪಡೆದ ಮಗುವಿಗೆ ತಮ್ಮ ಮೊದಲನೇ ಕಾದಂಬರಿ ಅಪಸ್ವರದ ನಾಯಕಿ ಮೀರಾ ಹೆಸರನ್ನೇ ಇಡಬೇಕೆಂಬ ಆಸೆ ಇತ್ತು. ಅವರ ಆಸೆಯಂತೆಯೇ ಹೆಣ್ಣು ಮಗುವಾಯಿತು. ಮಗು ಹುಟ್ಟಿದ 9ನೆಯ ದಿನಕ್ಕೆ ತ್ರಿವೇಣಿ ಕಣ್ಮುಚ್ಚಿದರು. 1963ರ ಜುಲೈ 20ರಂದು ಇಹಲೋಕದ ಸಂಪರ್ಕ ತೊರೆದ ಇವರು ತಮ್ಮ 34ನೇ ವಯಸ್ಸಿನಲ್ಲಿ ಕೇವಲ 12 ವರ್ಷಗಳಲ್ಲಿ ಲೇಖಕಿಯಾಗಿ ಸಾಹಿತ್ಯದಾಗಸದಲ್ಲಿ ಮಿನುಗುತಾರೆಯಾದರು ತ್ರಿವೇಣಿರವರು ಸ್ತ್ರೀ ಕಾದಂಬರಿಗಾರ್ತಿಯರಿಗೆ ಕನ್ನಡ ಸಾಹಿತ್ಯದಲ್ಲಿ ಅಗ್ರಸ್ಥಾನ ಗಳಿಸಿಕೊಟ್ಟರು. ಸಾಮಾಜಿಕ, ಸಾಹಿತ್ಯ ಕ್ಷೇತ್ರದಲ್ಲಿ ಮಹಿಳೆಯರ ಧ್ವನಿಯಾದರು. ತ್ರಿವೇಣಿರವರು ತಮ್ಮ ಕಾದಂಬರಿಗಳಿಗೆ ಯಾರದೇ ಮುನ್ನುಡಿ ಅಥವಾ ಬೆನ್ನುಡಿಯ ಅವಶ್ಯಕತೆ ಇಲ್ಲದೇ ಅಪಾರ ಓದುಗ ಅಭಿಮಾನಿಗಳನ್ನು ಗಳಿಸಿ ಖ್ಯಾತರಾದರು.

ಹಿರಿಯ ಲೇಖಕರಾದ ಬಿ.ಎಂ.ಶ್ರೀಕಂಠಯ್ಯ ತ್ರಿವೇಣಿರವರ ದೊಡ್ಡಪ್ಪ. ಹೆಸರಾಂತ ಕಾದಂಬರಿಗಾರ್ತಿ ಶ್ರೀಮತಿ ಆರ್ಯಾಂಭ ಪಟ್ಟಾಭಿ ಇವರ ತಂಗಿ, ಮತ್ತೊಬ್ಬ ಪ್ರಸಿದ್ಧ ಕಾದಂಬರಿಗಾರ್ತಿ ವಾಣಿ ಕಾವ್ಯನಾಮದ ಶ್ರೀಮತಿ ಬಿ.ಎಸ್.ಸುಬ್ಬಮ್ಮನವರು ಇವರ ಚಿಕ್ಕಮ್ಮ. ಬೆಂಗಳೂರಿನ ಸಾಹಿತ್ಯ ವೇದಿಕೆಯು ಉತ್ತಮ ಬರಹಗಾರರನ್ನು ಪ್ರೋತ್ಸಾಹಿಸಲು ತ್ರಿವೇಣಿರವರ ಜನ್ಮದಿನವಾದ ಸೆ.1ರಂದು ತ್ರಿವೇಣಿ ಮನೋವೈಜ್ಞಾನಿಕ ಕಥಾ ಸ್ಪರ್ಧೆಯನ್ನು ಹಲವಾರು ವರ್ಷಗಳಿಂದ ಏರ್ಪಡಿಸುತ್ತಿರುವುದು ಬರಹಗಾರರಿಗೆ ಸಂತಸದ ವಿಷಯ.



–ನಂ.ಶ್ರೀಕಂಠಕುಮಾರ್
ಮೈಸೂರು.
ಮೊ. 9481067333

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಸಂದೇಶ್ ನಾಗರಾಜ್ ಅವರಿಗೆ ವಿವಿಧ ಕ್ಷೇತ್ರಗಳ ಗಣ್ಯರಿಂದ ಶುಭ ಹಾರೈಕೆ


ಮೈಸೂರಿನ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಭಾನುವಾರ ನಡೆದ ಚಲನಚಿತ್ರ ನಿರ್ಮಾಪಕರೂ ಆದ ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ಅವರ 80ನೇ ಹುಟ್ಟುಹಬ್ಬ ಸಮಾರಂಭದಲ್ಲಿ ಅವರನ್ನು ನಟ ಕಿಚ್ಚ ಸುದೀಪ್ ಅವರೊಂದಿಗೆ ನಗರ ಪಾಲಿಕೆ ಮಾಜಿ ಸದಸ್ಯ ಲೋಕೇಶ್ ಪಿಯಾ ಆತ್ಮೀಯವಾಗಿ ಅಭಿನಂದಿಸಿದರು.

ಮೈಸೂರು, ಆ.31(ಜಿಎ)–ರಾಜಕಾರಣಿ, ಉದ್ಯಮಿ, ಸಿನಿಮಾ ನಿರ್ಮಾಪಕರೂ ಆದ ಸಂದೇಶ್ ನಾಗರಾಜ್ ಅವರ 80ನೇ ಹುಟ್ಟುಹಬ್ಬಕ್ಕೆ ವಿವಿಧ ಕ್ಷೇತ್ರಗಳ ಗಣ್ಯರು ಭೇಟಿ ನೀಡಿ ಶುಭ ಕೋರಿದರು.

ಮೈಸೂರಿನ ದಸರಾ ವಸ್ತುಪ್ರದರ್ಶನ ಮೈದಾನದಲ್ಲಿ ಭಾನುವಾರ ಸಂದೇಶ್ ನಾಗರಾಜ್ ಅವರ 80ನೇ ಹುಟ್ಟುಹಬ್ಬ ಅಂಗವಾಗಿ ಆಯೋಜಿಸಿದ್ದ ಅದ್ದೂರಿ ಕಾರ್ಯಕ್ರಮದಲ್ಲಿ ಪಕ್ಷಾತೀತವಾಗಿ ರಾಜಕೀಯ ಮುಖಂಡರು, ಉದ್ಯಮಿಗಳು, ಕನ್ನಡ ಚಿತ್ರರಂಗದ ವಾಣಿಜ್ಯ ಮಂಡಳಿ, ನಟ, ನಟಿಯರು, ಸಂಗೀತ ನಿರ್ದೇಶಕರು ಸೇರಿದಂತೆ ಎಲ್ಲಾ ಕ್ಷೇತ್ರದ ಗಣ್ಯರು ಭೇಟಿ ಮಾಡಿ ಅಭಿನಂದಿಸಿ ಶುಭ ಹಾರೈಸಿದರು.

ಚಿತ್ರರಂಗದಿಂದ ನಟ ಕಿಚ್ಚ ಸುದೀಪ್, ಡಾಲಿ ಧನಂಜಯ್, ಯುವರಾಜ್ ಕುಮಾರ್, ಅರುಣ್ ಸಾಗರ್, ಸೃಜನ್ ಲೋಕೇಶ್, ಸಾಧು ಕೋಕಿಲ, ಚಿನ್ನೆಗೌಡ, ಗಿರಿಜಾ ಲೋಕೇಶ್, ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿಯ ಎಲ್ಲಾ ಪದಾಧಿಕಾರಿಗಳು ಆಗಮಿಸಿ, ಶುಭ ಕೋರಿದರು.

ಸಚಿವರಾದ ಕೆ.ವೆಂಕಟೇಶ್, ಜಮೀರ್ ಅಹಮ್ಮದ್ ಖಾನ್, ಭೈರತಿ ಸುರೇಶ್, ವಿರೋಧ ಪಕ್ಷದ ನಾಯಕ ಆರ್.ಅಶೋಕ್, ವಿಧಾನಪರಿಷತ್ ಸದಸ್ಯರಾದ ಡಾ.ಯತೀಂದ್ರ ಸಿದ್ದರಾಮಯ್ಯ, ಸಿ.ಎನ್.ಮಂಜೇಗೌಡ, ಶಾಸಕರಾದ ಕೆ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ರಾಘವೇಂದ್ರ ಹಿಟ್ನಾಳ್, ಅನಿಲ್ ಚಿಕ್ಕಮಾದು, ಮಾಜಿ ಸಂಸದ ಪ್ರತಾಪ್ ಸಿಂಹ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮಾಜಿ ಕಾರ್ಪೊರೇಟರ್ ಸಿ.ಮಾದೇಶ್ ಸೇರಿದಂತೆ ಅನೇಕ ರಾಜಕಾರಣಿಗಳು ಹಾರೈಸಿದರು.


ಸಂದೇಶ್ ನಾಗರಾಜ್ ಅವರಿಗೆ ಅಭಿಮಾನಿಗಳು ಬೃಹತ್ ಸೇಬಿನ ಹಾರ ಹಾಕಿ ಶುಭ ಕೋರಿದರು.


ಸಂದೇಶ್ ನಾಗರಾಜ್ ಅವರ ಹುಟ್ಟುಹಬ್ಬಕ್ಕೆ ಶಾಸಕ ಅನಿಲ್ ಚಿಕ್ಕಮಾದು ಅವರು ಹೂಗುಚ್ಛ ನೀಡಿ ಶುಭ ಕೋರಿದರು.


ಸಂದೇಶ್ ನಾಗರಾಜ್ ಅವರ ಹುಟ್ಟುಹಬ್ಬಕ್ಕೆ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ಹೂಗುಚ್ಛ ನೀಡಿ ಶುಭ ಕೋರಿದರು.


ಸಂದೇಶ್ ನಾಗರಾಜ್ ಅವರ ಹುಟ್ಟುಹಬ್ಬದ ಅಂಗವಾಗಿ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯದ ಪ್ರಧಾನ ಅರ್ಚಕರಾದ ಶಶಿಶೇಖರ್ ದೀಕ್ಷಿತರು ಪ್ರಸಾದ ನೀಡಿ ಶುಭ ಹಾರೈಸಿದರು. ಈ ವೇಳೆ ನಟ ಕಿಚ್ಚ ಸುದೀಪ್ ಉಪಸ್ಥಿತರಿದ್ದರು.


ಸಂದೇಶ್ ನಾಗರಾಜ್ ಮೇಲ್ನೋಟಕ್ಕೆ ಶ್ರೀಮಂತರು, ಅಂತರಂಗದಲ್ಲಿ ಅತ್ಯಂತ ಸರಳ ಜೀವಿ

ಮೈಸೂರು, ಆ.31(ಜಿಎ)–ಸಂದೇಶ್ ನಾಗರಾಜ್ ಅವರ ಜೀವನ ಶೈಲಿ ನೋಡಿದರೆ ಮೇಲ್ನೋಟಕ್ಕೆ ಶ್ರೀಮಂತರು. ಆದರೆ ಅವರ ಅಂತರಂಗದಲ್ಲಿ ಅತ್ಯಂತ ಸರಳ ಜೀವಿ ಎಂದು ವಾಗ್ಮಿ ಪ್ರೊ.ಕೃಷ್ಣೇಗೌಡ ಬಣ್ಣಿಸಿದರು.

ಮೈಸೂರಿನ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಮೈದಾನದಲ್ಲಿ ಸಂದೇಶ್ ನಾಗರಾಜ್ ಹುಟ್ಟುಹಬ್ಬದ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನನಗೆ ಸಂದೇಶ್ ನಾಗರಾಜ್ ಅವರು ವೈಯಕ್ತಿಕವಾಗಿ ಬಂಧುವಾಗಿದ್ದು, ಗೌರವಯುತ ವ್ಯಕ್ತಿ. ಅವರು ರಾಜಕಾರಣಿ, ಉದ್ಯಮಿ, ಸಿನಿಮಾ ನಿರ್ಮಾಪಕರು ಎಂದು ಅಲ್ಲ. ಕಣ್ಣ ಎದುರಿಗೆ ಬಹಳ ಎತ್ತರಕ್ಕೆ ಬೆಳೆದಿದ್ದಾರೆ. ಇಷ್ಟು ಎತ್ತರಕ್ಕೆ ಬೆಳೆದಿದ್ದರೂ ಅಂತರಂಗದಲ್ಲಿ ಸಾಮಾನ್ಯರಂತೆ ಇದ್ದಾರೆ. ಯಾವುದೇ ಅಂಜಿಕೆ ಇಲ್ಲದೇ ಸಾಮಾನ್ಯ ವ್ಯಕ್ತಿಯೂ ಅವರ ಎದುರು ನಿಂತ ಸುಲಭವಾಗಿ ಮಾತನಾಡಬಹುದು. ಅವರು ಅತ್ಯಂತ ಸಾಮಾನ್ಯ ಮನುಷ್ಯ. ಯಾವಾಗಲೂ ಸಂತೋಷದಿಂದ ಇರುತ್ತಾರೆ ಎಂದರು.



ಉತ್ತಮ ಕುಟುಂಬಸ್ಥರು, ಉದ್ಯಮಿಗಳಾಗಿ ಬೆಳೆದಿರುವ ಅವರು ಪಾಂಡವಪುರದ ಸೀತಾಪುರ ಎಂಬ ಗ್ರಾಮದಲ್ಲಿ ಸಾಮಾನ್ಯ ಕೃಷಿ ಕುಟುಂಬದಲ್ಲಿ ಜನಿಸಿ, ಹೇಗೆ ಇಷ್ಟು ದೊಡ್ಡ ಕನಸು ಕಂಡರು ಎಂಬುದು ಅಚ್ಚರಿಯ ವಿಷಯವಾಗಿದೆ. ಒಬ್ಬ ಮನುಷ್ಯ ಕನಸು ಕಾಣುವುದು ಸುಲಭ. ಆದರೆ, ಯಾವುದೇ ಸಂದರ್ಭದಲ್ಲಿ ಧೃತಿಗೆಡದೆ ಮುಂದಿಟ್ಟ ಹೆಜ್ಜೆ ಹಿಂದೆ ಇಡದೇ ಛಲದಿಂದ ಮುಂದೆ ಸಾಗುವುದು ಅದು ಕೆಲವರಿಗೆ ಮಾತ್ರ ಸಾಧ್ಯ. ಅಂತಹ ಬಹಳ ದೊಡ್ಡ ಸಾಹಸಿ ಧೀರಾ ಸಂದೇಶ್ ನಾಗರಾಜ್ ಎಂದು ವರ್ಣಿಸಿದರು.


ನಗರಪಾಲಿಕೆ ಮಾಜಿ ಸದಸ್ಯ ಸಿ.ಮಾದೇಶ್ ಹೂಗುಚ್ಛ ನೀಡಿ ಸಂದೇಶ್ ನಾಗರಾಜ್ ಅವರಿಗೆ ಶುಭ ಹಾರೈಸಿದರು.

ಮೈಸೂರು ಪಾಕ್, ರಾಗಿ ಪಾಯಸ, ಪಕೋಡ, ಬಾತ್, ಅನ್ನ ಸಾಂಬಾರ್ ಭರ್ಜರಿ ಊಟದ ವ್ಯವಸ್ಥೆ


ಕಾರ್ಯಕ್ರಮದಲ್ಲಿ ನೆರೆದಿದ್ದ ಜನಸ್ತೋಮ

ಮೈಸೂರು, ಆ.31(ಜಿಎ)–ಮೈಸೂರಿನ ದಸರಾ ವಸ್ತುಪ್ರದರ್ಶನ ಮೈದಾನದಲ್ಲಿ ಭಾನುವಾರ ಸಂದೇಶ್ ನಾಗರಾಜ್ ಅವರ 80ನೇ ಹುಟ್ಟುಹಬ್ಬದ ಅಂಗವಾಗಿ ಆಯೋಜಿಸಿದ್ದ ಅದ್ದೂರಿ ಕಾರ್ಯಕ್ರಮದಲ್ಲಿ ಅಭಿಮಾನಿಗಳಿಗೂ, ಅತಿಥಿಗಳಿಗೂ ಅಚ್ಚುಕಟ್ಟಾದ ಊಟದ ವ್ಯವಸ್ಥೆ ಮಾಡಲಾಗಿತ್ತು. ಕಾರ್ಯಕ್ರಮಕ್ಕೆ ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನದಿಂದಲೂ ಆಗಮಿಸಿದ್ದ ಸಾವಿರಾರೂ ಮಂದಿಯ ಊಟಕ್ಕೆ ಯಾವುದೇ ಸಮಸ್ಯೆ ಎದುರಾಗದೇ ಹಸಿದು ಹೋಗದಂತೆ ಪ್ರತ್ಯೇಕ ಕೌಂಟರ್ ಮಾಡುವ ಮೂಲಕ ಸುಸಜ್ಜಿತವಾದ ವ್ಯವಸ್ಥೆ ಮಾಡಲಾಗಿತ್ತು. ಸರತಿ ಸಾಲಿನಲ್ಲಿ ನಿಂತು ಊಟ ಸ್ವೀಕರಿಸಿದರು.

ಮತ್ತೊಂದೆಡೆ ವೇದಿಕೆ ಎಡ ಭಾಗದಲ್ಲಿ ಕಾರ್ಯಕ್ರಮಕ್ಕೆ ಆಗಮಿಸಿದ ಗಣ್ಯರಿಗೆ ಪ್ರತ್ಯೇಕವಾಗಿ ಕುಳಿತು ಊಟ ಮಾಡುವ ವ್ಯವಸ್ಥೆ ಮಾಡಲಾಗಿತ್ತು. ಆದರೆ, ಅಭಿಮಾನಿಗಳು ಹಾಗೂ ಗಣ್ಯರಿಗೂ ಒಂದೇ ರೀತಿಯ ಊಟದ ಮೆನು ಮಾಡಿದ್ದು ವಿಶೇಷವಾಗಿತ್ತು

ಮೆನು : ಮೈಸೂರು ಪಾಕ್, ರಾಗಿ ಪಾಯಸ, ಪಕೋಡ, ಬಾತ್, ಅನ್ನ, ಸಾಂಬಾರ್, ಮಜ್ಜಿಗೆ, ರಸಂ ಮಾಡಲಾಗಿತ್ತು. ಎಲ್ಲರೂ ಊಟ ಸವಿದು ಊಟದ ವ್ಯವಸ್ಥೆ ಮತ್ತು ರುಚಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.


ಮೈಸೂರಿನ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ನಡೆದ ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ಅವರ 80ನೇ ಹುಟ್ಟುಹಬ್ಬ ಸಮಾರಂಭದಲ್ಲಿ ಅವರನ್ನು ಚಾಮರಾಜ ಕ್ಷೇತ್ರದ ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು ಅವರು ಅಭಿನಂದಿಸಿದರು. ಈ ವೇಳೆ ಕಾಂಗ್ರೆಸ್ ಮುಖಂಡರಾದ ಬಿ.ಎಂ.ರಾಮು ಹಾಗೂ ಮೋಹನ್ ಇದ್ದರು.

ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಆಯ್ಕೆಗೆ ಪ್ರಗತಿಪರರ ಬೆಂಬಲ


ದಸರಾ ಉದ್ಘಾಟನೆಗೆ ಹಿರಿಯ ಸಾಹಿತಿ ಬಾನು ಮುಷ್ತಾಕ್ ಅವರ ಆಯ್ಕೆ ವಿರೋಧಿಸುವುದನ್ನು ಖಂಡಿಸಿ ಪ್ರಗತಿಪರರು ಪ್ರತಿಭಟನೆ ನಡೆಸಿದರು.

ಮೈಸೂರು, ಆ.31(ಎಸ್‌ಪಿಎನ್)–ದಸರಾ ಉದ್ಘಾಟನೆಗೆ ಹಿರಿಯ ಸಾಹಿತಿ ಬಾನು ಮುಷ್ತಾಕ್ ಅವರ ಆಯ್ಕೆ ಉತ್ತಮವಾಗಿದೆ. ರಾಜ್ಯ ಸರ್ಕಾರದ ನಿರ್ಧಾರವನ್ನು ಬೆಂಬಲಿಸಿ, ವಿರೋಧಿಸುವವರನ್ನು ಖಂಡಿಸಿ ಪ್ರಗತಿಪರ ಸಂಘಟನೆಗಳ ಒಕ್ಕೂಟ ಮೈಸೂರು ಜಿಲ್ಲಾ ನ್ಯಾಯಾಲಯ ಎದುರಿನ ಗಾಂಧೀಜಿ ಪ್ರತಿಮೆ ಬಳಿ ಭಾನುವಾರ ಪ್ರತಿಭಟನೆ ನಡೆಸಿತು.

ಪ್ರತಿಭಟನೆಯಲ್ಲಿ 'ಕೋಮುವಾದ ನಾಶವಾಗಲಿ', 'ಮತೀಯವಾದ ಅಳಿಯಲಿ' ಸೇರಿದಂತೆ ಇತರೆ ಘೋಷಣೆಗಳನ್ನು ಕೂಗಿದರು. ಬಳಿಕ ಮಾಧ್ಯಮಗಳೊಂದಿಗೆ ರಂಗಾಯಣ ಮಾಜಿ ನಿರ್ದೇಶಕ ಎಚ್.ಜನಾರ್ಧನ್(ಜನ್ನಿ) ಮಾತನಾಡಿ, ದಸರಾ ಎಂದಿಗೂ ಒಂದು ಧರ್ಮಕ್ಕೆ ಸೀಮಿತವಾಗಿಲ್ಲ. ಬದಲಾಗಿ ಭಾರತೀಯ ಕನ್ನಡದ ಹಬ್ಬವಾಗಿದ್ದು, ದೇಶ–ವಿದೇಶಗಳಲ್ಲಿ ಪ್ರಸಿದ್ಧಿ ಪಡೆದಿದೆ ಎಂದರು.

ಇಂತಹ ಕಾರ್ಯಕ್ರಮವನ್ನು ಮಾನವೀತೆ ಅಳವಡಿಸಿಕೊಂಡಿರುವ ಯಾರು ಬೇಕಾದರೂ ಉದ್ಘಾಟಿಸ ಬಹುದು. ತಮ್ಮ ಬರವಣಿಗೆಗೆ ಅಂತರ ರಾಷ್ಟ್ರೀಯ ಮಟ್ಟದ ಬೂಕರ್ ಪ್ರಶಸ್ತಿಗೆ ಭಾಜನರಾಗಿರುವ ಹೆಣ್ಣು ಮಗಳಿಗೆ ಬಿಜೆಪಿ ನಾಯಕರು ಕೀಳುಮಟ್ಟದ ಭಾಷೆ ಉಪಯೋಗಿಸುತ್ತಿರುವುದು ಖಂಡನಾರ್ಹ ಎಂದರು. ಬಿಜೆಪಿ ನಾಯಕರ ಹೇಳಿಕೆ ಮುಂದುವರೆದರೆ, ರಾಜ್ಯಾದ್ಯಂತ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಹಿರಿಯ ಸಾಹಿತಿ ಬಾನು ಮುಷ್ತಾಕ್ ಅವರು, ಕನ್ನಡದ ಹೆಣ್ಣುಮಗಳು. ಮಿಗಿಲಾಗಿ ತಮ್ಮ ಬರವಣಿಗೆ ಮೂಲಕ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರುವಾಸಿಯಾಗಿದ್ದಾರೆ. ಅವರು ದಸರಾ ಉದ್ಘಾಟನೆ ಮಾಡಿದರೆ ತಪ್ಪೇನು? ದಸರಾವನ್ನು ಒಂದು ಧರ್ಮಕ್ಕೆ ಸೀಮಿತಗೊಳಿಸಲು ಸಾಧ್ಯವಿಲ್ಲ. ದಸರಾ ಎಲ್ಲಾ ಧರ್ಮದವರೂ ಪಾಲ್ಗೊಳ್ಳುವ ಹಬ್ಬ ಎಂದರು.

ಈ ವೇಳೆ ಹಿರಿಯ ಪತ್ರಕರ್ತ ಟಿ.ಗುರುರಾಜ್, ಪ್ರಗತಿಪರ ಒಕ್ಕೂಟದ ಸಂಚಾಲಕ ಪಿ.ರಾಜು, ಐಟಿಯು ಜಿಲ್ಲಾ ಕಾರ್ಯದರ್ಶಿ ಬಾಲಾಜಿ, ರಂಗಾಯಣ ಮಾಜಿ ನಿರ್ದೇಶಕ ಸಿ.ಬಸವಲಿಂಗಯ್ಯ, ಪ್ರೊ.ಕಾಳಚನ್ನೇಗೌಡ, ಧನಂಜಯ ಎಲಿಯೂರು, ಹೊಸಕೋಟೆ ಬಸವರಾಜು, ಸವಿತಾ ಪ.ಮಲ್ಲೇಶ್, ಅಶೋಕಪುರಂ ರಾಜಣ್ಣ, ಕೆ.ಬಾಲಕೃಷ್ಣ, ರತಿರಾವ್, ಪ್ರೊ.ಭಗವಾನ್, ಜಗದೀಶ್ ಸೂರ್ಯ, ಲತಾಬಿದ್ದಪ್ಪ, ಸುಶೀಲಾ, ರಜಿತಾ, ಪಿ.ಆರ್.ವಿಜಯಕುಮಾರ್, ಅಹಿಂದ ಜವರಪ್ಪ, ಖಲೀಂ, ಬಾಬು ರಾಜು, ಚಂದ್ರು, ಸಿ.ಎನ್.ನರಸಿಂಹ ಮೂರ್ತಿ, ಮೋಹನ್, ಬಲರಾಮ್, ಬಾಲಾಜಿರಾವ್, ವರುಣ ನಾಗರಾಜು, ಲಾ.ಜಗನ್ನಾಥ್, ಪಾಷಾ, ನಾ.ದಿವಾಕರ್, ರಾಘವೇಂದ್ರ ಸೇರಿದಂತೆ ಇತರರಿದ್ದರು.

ವಿ. ಪ್ರಿಯಾಗೆ ಪಿಹೆಚ್.ಡಿ



ಮೈಸೂರು: ಡಾ. ಬಿ. ಮಹದೇವಪ್ಪ ಅವರ ಮಾರ್ಗದರ್ಶನದಲ್ಲಿ ವಿ. ಪ್ರಿಯಾ ಅವರು ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರಲ್ಲಿ ವಿಜೃಂಭಣೆಯ ಗಣೇಶ ಮೂರ್ತಿಗಳ ಸಾಮೂಹಿಕ ವಿಸರ್ಜನಾ ಮೆರವಣಿಗೆ

ಮೈಸೂರು,ಆ.31(ಪಿಎಂ)–ನಗರದ ವಿವಿಧೆಡೆ ಪ್ರತಿಷ್ಠಾಪಿಸಲಾಗಿದ್ದ ಗಣೇಶ ಮೂರ್ತಿಗಳ ಸಾಮೂಹಿಕ ವಿಸರ್ಜನಾ ಮೆರವಣಿಗೆ ಭಾನುವಾರ ವಿಜೃಂಭಣೆಯಿಂದ ನೆರವೇರಿತು. ವಿಭಿನ್ನ ವಿನ್ಯಾಸದಲ್ಲಿ ರೂಪತಳೆದಿದ್ದ ಗಣೇಶನ ಮೂರ್ತಿಗಳು ಮೆರವಣಿಗೆಯಲ್ಲಿ ಸಾಗುವ ಮೂಲಕ ಸಾವಿರಾರು ಸಂಖ್ಯೆಯಲ್ಲಿ ನೆರೆದಿದ್ದ ಭಕ್ತರಿಗೆ ದರ್ಶನ ಕರುಣಿಸಿದವು.

ಮೈಸೂರು ಸಾರ್ವಜನಿಕ ಗಣೇಶ ವಿಸರ್ಜನಾ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಸಾರ್ವಜನಿಕ ಗಣೇಶ ಮೂರ್ತಿಗಳ ವಿಸರ್ಜನೆಯ ಬೃಹತ್ ಮೆರವಣಿಗೆಗೆ ವೀರನಗೆರೆಯ ಅಶೋಕ ರಸ್ತೆಯ ಶ್ರೀವೀರಗಣಪತಿ ದೇವಸ್ಥಾನದಲ್ಲಿ ಪೂಜಾ ವಿಧಿವಿಧಾನ ನೆರವೇರಿಸುವ ಮೂಲಕ ಚಾಲನೆ ನೀಡಲಾಯಿತು.

ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಸಂಸದ ಪ್ರತಾಪ್ ಸಿಂಹ, ಶಾಸಕರಾದ ಕೆ.ಹರೀಶ್ ಗೌಡ, ಟಿ.ಎಸ್.ಶ್ರೀವತ್ಸ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಮುಖಂಡರಾದ ಗಿರಿಧರ್, ಶ್ರೀನಿವಾಸ್ ಮತ್ತಿತರರು ಪೂಜೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ನಗರದ ವಿವಿಧ ಕಡೆಗಳಿಂದ ಗಣೇಶ ಮೂರ್ತಿಗಳನ್ನು ಹೊತ್ತು ಬಂದಿದ್ದ ಸುಮಾರು 40 ವಾಹನಗಳನ್ನು ವೀರಗಣಪತಿ ದೇವಸ್ಥಾನದ ಎದುರು ಸಾಲಾಗಿ ನಿಲ್ಲಿಸಿ, ಪೂಜಾ ವಿಧಿವಿಧಾನ ನೆರವೇರಿಸಲಾಯಿತು. ದೇವಸ್ಥಾನದ ಗಣೇಶ ಮೂರ್ತಿಗೆ ಪಂಚಾಮೃತ ಅಭಿಷೇಕ ನೆರವೇರಿಸಿದ್ದಲ್ಲದೆ, ಗಣಪತಿ ಹೋಮ ಸೇರಿದಂತೆ ವಿವಿಧ ಪೂಜಾ ಕೈಂಕರ್ಯ ನೆರವೇರಿಸಲಾಯಿತು. ಅಲ್ಲದೆ, ಮೈಸೂರಿನ ಎಲ್ಲಾ ಜನತೆಗೆ ಒಳ್ಳೆಯದಾಗಲಿ ಎಂದು ಸಂಕಲ್ಪ ಮಾಡಿ ಪೂಜೆಗೈಯಲಾಯಿತು. ಜೊತೆಗೆ 108 ಈಡುಗಾಯಿ ಸಹ ಒಡೆಯಲಾಯಿತು. ಅರ್ಚಕರಾದ ಎಸ್.ವಿ.ಪ್ರಹ್ಲಾದ್‌ರಾವ್, ಓಂಪ್ರಕಾಶ್, ವಿಠಲ್ ಪ್ರಸಾದ್ ವಿಶೇಷವಾಗಿ ಪೂಜೆಗಳನ್ನು ನಡೆಸಿಕೊಟ್ಟರು.


ಅಪಾರ ಜನಸ್ತೋಮದ ನಡುವೆ ಸಾಗುತ್ತಿರುವ ಗಣೇಶ ಮೂರ್ತಿಗಳನ್ನು ಹೊತ್ತ ವಾಹನಗಳನ್ನು ಚಿತ್ರದಲ್ಲಿ ಕಾಣಬಹುದು.

ಬಳಿಕ ದೇವಸ್ಥಾನದ ಎದುರಿನಿಂದ ಸಾಗಿದ ಮೆರವಣಿಗೆಯು, ಅಶೋಕ ರಸ್ತೆ ಮೂಲಕ ದೊಡ್ಡ ಗಡಿಯಾರ ವೃತ್ತ ತಲುಪಿ, ಗಾಂಧಿಚೌಕ, ಸಯ್ಯಾಜಿರಾವ್ ರಸ್ತೆ, ಚಿಕ್ಕಗಡಿಯಾರ ವೃತ್ತ, ಸಂತೆಪೇಟೆ, ಡಿ.ದೇವರಾಜ ಅರಸು ರಸ್ತೆಯಲ್ಲಿ ಸಾಗಿ, ಜೆಎಲ್‌ಬಿ ರಸ್ತೆ ತಲುಪಿ ಅಂತ್ಯಗೊಂಡಿತು. ನಂತರ ಗಣೇಶ ಮೂರ್ತಿಗಳನ್ನು ಹೊತ್ತ ವಾಹನಗಳು ಶ್ರೀರಂಗಪಟ್ಟಣ ತಲುಪಿದವು. ನಂತರ ಇಲ್ಲಿನ ಸಾಯಿಬಾಬಾ ದೇವಸ್ಥಾನದ ಬಳಿ ಹರಿಯುವ ಕಾವೇರಿ ನದಿಯಲ್ಲಿ ಗಣೇಶ ಮೂರ್ತಿಗಳನ್ನು ವಿಸರ್ಜಿಸಲಾಯಿತು.

ಪಟಾಕಿ ಸಿಡಿಸಿ ಸಂಭ್ರಮ: ಮೆರವಣಿಗೆಯುದ್ದಕ್ಕೂ ವಿಶೇಷವಾಗಿ ಯುವಪಡೆ ಪಟಾಕಿ ಸಿಡಿಸಿ ಸಂಭ್ರಮಿಸಿತು. ಅಲ್ಲದೆ, ಮೆರವಣಿಗೆಯಲ್ಲಿದ್ದ ತಮಟೆ, ಚಂಡೆ ಸದ್ದಿಗೆ ಕುಣಿದು ಕುಪ್ಪಳಿಸಿತು. ಮಂಗಳವಾದ್ಯ ಹಾಗೂ ವೀರಗಾಸೆ ಸೇರಿದಂತೆ ಜಾನಪದ ಕಲಾತಂಡಗಳು ಮೆರವಣಿಗೆಗೆ ಮತ್ತಷ್ಟು ಮೆರುಗು ನೀಡಿದವು. ಜೊತೆಗೆ ನೆರೆದಿದ್ದವರು ಧರಿಸಿದ್ದ ಕೇಸರಿ ಪೇಟಗಳು ಆಕರ್ಷಿಸಿದರೆ, ಗಣೇಶ ಮೂರ್ತಿ ಹೊತ್ತ ವಾಹನಗಳಲ್ಲಿ ಭಗವಾಧ್ವಜಗಳು ರಾರಾಜಿಸಿದವು.

ಗಮನ ಸೆಳೆದ ಮಹನೀಯರ ಚಿತ್ರಗಳು: ಗಣೇಶ ಮೂರ್ತಿಗಳನ್ನು ಹೊತ್ತ ಸಾಕಷ್ಟು ವಾಹನಗಳಲ್ಲಿ ಮಹನೀಯರು ಚಿತ್ರಗಳು ಗಮನ ಸೆಳೆದವು. ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್, ಬುದ್ಧ, ಬಸವಣ್ಣ, ಶಿವಾಜಿ, ಬಾಲಗಂಗಾಧರ ತಿಲಕ್, ಕಿತ್ತೂರು ರಾಣಿ ಚನ್ನಮ್ಮ ಸೇರಿದಂತೆ ಮೊದಲಾದ ಮಹನೀಯರ ಫೋಟೋಗಳಿರುವ ಬ್ಯಾನರ್‌ಗಳು ಕಂಡುಬಂದವು.

ವೈವಿಧ್ಯ ವಿನ್ಯಾಸದ ಮೂರ್ತಿಗಳು: ಮೆರವಣಿಗೆಯಲ್ಲಿ ಸಾಗಿದ ಗಣೇಶ ಮೂರ್ತಿಗಳು ವೈವಿಧ್ಯತೆಯಿಂದ ಕೂಡಿದ್ದವು. ಹೀಗಾಗಿ ರಸ್ತೆಬದಿಗಳಲ್ಲಿ ಜಮಾಯಿಸಿದ್ದ ಸಾರ್ವಜನಿಕರು ಅವುಗಳನ್ನು ಕಂಡು ಪುಳಕಿತರಾದರು. ಶಿವ ತ್ರಿಶೂಲ ಹಿಡಿದು ನಿಂತ ಭಂಗಿಯಲ್ಲಿ ವಿನ್ಯಾಸಗೊಳಿಸಿರುವ ಗಣೇಶ ಮೂರ್ತಿ ಸೇರಿದಂತೆ ವಿಭಿನ್ನ ಶೈಲಿಯಲ್ಲಿ ಮೂಡಿಬಂದಿರುವ ಗಣೇಶ ಮೂರ್ತಿಗಳು ಸಾರ್ವಜನಿಕರನ್ನು ಆಕರ್ಷಿಸಿದವು.

ಪೊಲೀಸ್ ಬಿಗಿ ಭದ್ರತೆ: ನಗರ ಪೊಲೀಸ್ ವತಿಯಿಂದ ಮೆರವಣಿಗೆಗೆ ಬಿಗಿ ಭದ್ರತೆ ಕಲ್ಪಿಸಲಾಗಿತ್ತು. ಮೆರವಣಿಗೆ ಸಾಗುವ ಮಾರ್ಗದಲ್ಲಿ ವಾಹನ ಸಂಚಾರ ನಿರ್ಬಂಧಿಸಿ ಪರ್ಯಾಯ ಮಾರ್ಗದಲ್ಲಿ ಸಾಗಲು ಪೊಲೀಸರು ಕ್ರಮ ವಹಿಸಿದ್ದರು. ಅಶೋಕ ರಸ್ತೆ ಹಾಗೂ ಇಲ್ಲಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳಲ್ಲಿ ಜನದಟ್ಟಣೆ ಉಂಟಾಗುವ ಟೀ ಅಂಗಡಿ, ಮದ್ಯದಂಗಡಿಗಳನ್ನು ಮುಚ್ಚಿಸಲಾಗಿತ್ತು. ಗಣೇಶ ಮೂರ್ತಿ ಹೊತ್ತಿದ್ದ ಪ್ರತಿ ವಾಹನಕ್ಕೂ ಪಿಎಸ್‌ಐ ನೇತೃತ್ವದಲ್ಲಿ ಭದ್ರತೆ ಕಲ್ಪಿಸಲಾಗಿತ್ತು. ಕೆಎಸ್‌ಆರ್‌ಪಿ, ಸಿಎಆರ್ ಪೊಲೀಸರನ್ನು ನಿಯೋಜಿಸಲಾಗಿತ್ತು. ಮೊಬೈಲ್ ಕಮಾಂಡರ್ ವಾಹನದಲ್ಲಿ ಸ್ವತಃ ಡಿಸಿಪಿ ಆರ್.ಎನ್.ಬಿಂದುಮಣಿಯವರು ಕುಳಿತು ಭದ್ರತಾ ವ್ಯವಸ್ಥೆ ಮೇಲೆ ನಿಗಾ ವಹಿಸಿದ್ದರು. ನಗರ ಪೊಲೀಸ್‌ನ ಗುಪ್ತಚರ ವಿಭಾಗದ ಮಾಹಿತಿಯಂತೆ ಎಲ್ಲಾ ಮುನ್ನೆಚ್ಚರಿಕೆ ಕ್ರಮದೊಂದಿಗೆ ಸೂಕ್ತ ವ್ಯವಸ್ಥೆ ಕಲ್ಪಿಸಿದ್ದ ಹಿನ್ನೆಲೆಯಲ್ಲಿ ಮೆರವಣಿಗೆ ಸುಗಮವಾಗಿ ನೆರವೇರಿತು. ಸಮಿತಿ ಸಂಯೋಜಕ ಸು.ಮುರುಳಿ, ಮುಖಂಡರಾದ ಶ್ರೀನಿವಾಸ್, ಜಗದೀಶ್, ಮಂಜುನಾಥ್, ಆನಂದ್, ಲೋಹಿತ್ ರಾಜೇ ಅರಸ್ ಸೇರಿದಂತೆ ಸಾವಿರಾರು ಮಂದಿ ಸಾರ್ವಜನಿಕ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಜಾತಿ, ಪಕ್ಷ, ಪಂಥ ಮೀರಿ ಹಿಂದೂಗಳು ಒಗ್ಗಟ್ಟು ಪ್ರದರ್ಶಿಸಬೇಕು

ಸಾಮಾಜಿಕ ಕಾರ್ಯಕರ್ತ ಧನಂಜಯ್ ಅಗೋಳಿಕಜೆ ಕರೆ

ಮೈಸೂರು, ಆ.31(ಪಿಎಂ)– ಜಾತಿ, ಪಕ್ಷ ಹಾಗೂ ಪಂಥಗಳನ್ನು ಮೀರಿ ಹಿಂದೂಗಳು ಒಗ್ಗಟ್ಟಾಗಬೇಕಾದ ಅಗತ್ಯವಿದೆ ಎಂದು ಕೊಡಗು ಜಿಲ್ಲೆ ಮೂಲದ ಸಾಮಾಜಿಕ ಕಾರ್ಯಕರ್ತ ಧನಂಜಯ್ ಅಗೋಳಿಕಜೆ ಹೇಳಿದರು.

ಮೈಸೂರಿನ ವೀರನಗೆರೆ ಅಶೋಕ ರಸ್ತೆಯ ವೀರಗಣಪತಿ ದೇವಸ್ಥಾನದ ಆವರಣದಲ್ಲಿ ಮೈಸೂರು ಸಾರ್ವಜನಿಕ ಗಣೇಶ ವಿಸರ್ಜನಾ ಸಮಿತಿ ವತಿಯಿಂದ ಸಾರ್ವಜನಿಕ ಗಣೇಶ ಮೂರ್ತಿಗಳ ವಿಸರ್ಜನಾ ಬೃಹತ್ ಮೆರವಣಿಗೆ ಪ್ರಯುಕ್ತ ಭಾನುವಾರ ಹಮ್ಮಿಕೊಂಡಿದ್ದ ಸಭಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಗಣೇಶ ಉತ್ಸವವನ್ನು ಬಾಲಗಂಗಾಧರ ತಿಲಕರು ಸಾರ್ವಜನಿಕವಾಗಿ ಆಚರಣೆಗೆ ತಂದರು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಹಿಂದೂಗಳು ಒಟ್ಟಾಗಬೇಕೆಂದು ತಿಲಕರ ಗುರಿಯಾಗಿತ್ತು. ಭಾರತ ಸ್ವಾತಂತ್ರ್ಯ ಕಳೆದುಕೊಳ್ಳಲು ಕಾರಣಗಳೇನು ಎಂದು ಅವಲೋಕಿಸಿದ ತಿಲಕರಿಗೆ ಇದಕ್ಕೆಲ್ಲಾ ಕಾರಣ ಹಿಂದೂಗಳಲ್ಲಿನ ಒಗ್ಗಟ್ಟಿನ ಕೊರತೆ ಎಂಬುದು ತಿಳಿಯಿತು. ಹಾಗಾಗಿ ಹಿಂದೂಗಳಲ್ಲಿ ಒಗ್ಗಟ್ಟು ಮೂಡಿಸಲು ಗಣೇಶೋತ್ಸವವನ್ನು ಸಾರ್ವಜನಿಕವಾಗಿ ಆಚರಿಸಲು ಕರೆ ನೀಡಿದರು ಎಂದು ತಿಳಿಸಿದರು.

ಬಾಲಗಂಗಾಧರ ತಿಲಕರು ಅಂದು ಹಿಂದೂಗಳಲ್ಲಿ ಒಗ್ಗಟ್ಟು ಮೂಡಿಸಲು ದೊಡ್ಡ ಪರಿಶ್ರಮ ಹಾಕಿದರು. ಇಂದು ಕೂಡ ದೇಶದಲ್ಲಿ ಹಿಂದೂಗಳು ಒಗ್ಗೂಡುವ ಅಗತ್ಯವಿದೆ. ಇಲ್ಲವಾದರೆ ಭವಿಷ್ಯದಲ್ಲಿ ಹಿಂದೂಗಳು ಸಂಕಷ್ಟ ಅನುಭವಿಸಬೇಕಾಗುತ್ತದೆ. ನಾವು ಜಾಗೃತರಾಗಿ ನಮ್ಮ ಶ್ರದ್ಧಾಕೇಂದ್ರಗಳನ್ನು ಉಳಿಸಿಕೊಳ್ಳಬೇಕು ಎಂದರು.

ಗಣಪತಿ ವಿಸರ್ಜನೆ ವೇಳೆ

ಅಹಿತಕರ ಘಟನೆ ನಡೆಯದಂತೆ ಕ್ರಮ ವಹಿಸಿ

ಮಂಡ್ಯ, ಆ.31– ಜಿಲ್ಲೆಯಲ್ಲಿ ಗಣಪತಿ ವಿಸರ್ಜನೆ ವೇಳೆ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ಕ್ರಮ ವಹಿಸುವುದು ಪೊಲೀಸರ ಜವಾಬ್ದಾರಿಯಾಗಿದ್ದು, ನಾಗಮಂಗಲದಲ್ಲಿನ ಮಸೀದಿ ಮುಂದೆ ಸಾಗುವ ಕೆಲ ಗಣಪತಿ ಮೆರವಣಿಗೆಗೆ ನಿರ್ಬಂಧ ಹೇರಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದ್ದಾರೆ.



ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಭಾನುವಾರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಮೊದಲಿನಿಂದಲೂ ನಾಗಮಂಗಲದ ಮಸೀದಿ ಮುಂದೆ ಸಾಗುತ್ತಿದ್ದ ಕೆಲವು ಗಣಪತಿ ಮೆರವಣಿಗೆಗೆ ಅನುಮತಿ ನೀಡಲಾಗಿದೆ. ಕಾನೂನು ಸುವ್ಯವಸ್ಥೆ ಕಾಪಾಡಲು ಹೊಸದಾಗಿ ಪ್ರತಿಷ್ಠಾಪಿಸಲಾದ ಗಣೇಶ ವಿಗ್ರಹಗಳ ಮೆರವಣಿಗೆ ಮಸೀದಿ ದಾರಿಯಲ್ಲಿ ಹೋಗಲು ನಿರ್ಬಂಧಿಸಲಾಗಿದೆ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಗಣಪತಿ ಪ್ರತಿಷ್ಠಾಪನೆ ಮತ್ತು ಮೆರವಣಿಗೆಯ ಕುರಿತು ಒತ್ತಡದಿಂದ ತೀರ್ಮಾನ ತೆಗೆದು ಕೊಳ್ಳಬೇಡಿ ಹಾಗೂ ಯಾವುದೇ ಅಹಿತಕರ ಘಟನೆ ಉಂಟಾಗದಂತೆ ಮತ್ತು ಧಾರ್ಮಿಕ ಭಾವನೆಗೆ ಧಕ್ಕೆ ಉಂಟಾಗದಂತೆ ಎಚ್ಚರಿಕೆ ವಹಿಸುವಂತೆ ಮುಖ್ಯಮಂತ್ರಿಗಳು ಎಲ್ಲಾ ಶಾಸಕರಿಗೂ ಸಂಪುಟ ಸಭೆಯಲ್ಲಿ ಸೂಚನೆ ನೀಡಿದ್ದಾರೆ. ಜಿಲ್ಲೆಯಲ್ಲೂ ಸಹ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಬಾರದಂತೆ ಸೂಕ್ತ ರೀತಿಯಲ್ಲಿ ಗಣಪತಿ ವಿಸರ್ಜನೆ ಮಾಡಲು ಜಿಲ್ಲಾಧಿಕಾರಿಗಳು ಹಾಗೂ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ತಿಳಿಸಿದ್ದೇನೆ ಎಂದರು.

ಧರ್ಮಸ್ಥಳ ಯಾರ ಆಸ್ತಿಯೂ ಅಲ್ಲ, ಶಿವನ ದರ್ಶನ ಯಾರು ಬೇಕಾದರೂ ಪಡೆಯಬಹುದು. ಧರ್ಮಸ್ಥಳದ ಮೇಲೆ ನನಗೆ ಅಪಾರವಾದ ನಂಬಿಕೆ ಇದೆ. ಇಂದು ಧರ್ಮಸ್ಥಳ ಕ್ಷೇತ್ರಕ್ಕೆ ಅಂಟಿದ್ದ ಕಳಂಕವನ್ನು ತೊಡೆದು ಹಾಕಿ. ಹಾದಿ ಬೀದಿಯಲ್ಲಿ ಧರ್ಮಸ್ಥಳದ ಕುರಿತು ಮಾತನಾಡುತ್ತಿದ್ದವರನ್ನು ಸ್ತಬ್ಧ ಮಾಡಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಗೃಹ ಸಚಿವ ಡಾ.ಜಿ.ಪರಮೇಶ್ವರ್‌ರವರು ಎಂದರು.

ಸಂಸದ ಕುಮಾರಸ್ವಾಮಿ ರಿಂಗ್ ರೋಡ್ ನಿರ್ಮಾಣಕ್ಕೆ 900ಕೋಟಿ ಅನುದಾನ ಕೊಡಿಸುವುದಾಗಿ ಹೇಳಿದ್ದಾರೆ. ಹಾಗೆ ಅನುದಾನ ನೀಡಿದರೆ ಸಂಜಯ್ ವೃತ್ತದಲ್ಲಿ ಸನ್ಮಾನ ಮಾಡೋಣ ಎಂದು ವ್ಯಂಗ್ಯವಾಡಿದರು. ಸಂಸದರಾಗಿ ಜಿಲ್ಲೆಗೆ ಒಂದೂವರೆ ತಿಂಗಳಿಂದಲೂ ಬಂದಿಲ್ಲ. ಅವರ ಆರೋಗ್ಯ ಚೆನ್ನಾಗಿರಲಿ ಎಂದು ಆಶಿಸುತ್ತೇವೆ. ಪಾರ್ಲಿಮೆಂಟ್‌ಗೆ ಹೋಗುತ್ತಾರೆ. ಪ್ರಧಾನ ಮಂತ್ರಿ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಾರೆ ಆದರೆ ಮಂಡ್ಯಗೆ ಯಾಕೆ ಬಂದಿಲ್ಲ ಎಂದು ಪ್ರಶ್ನಿಸಿದರು. ಶಾಸಕರಾದ ಕೆ.ಎಂ.ಉದಯ್, ರಮೇಶ್ ಬಂಡಿಸಿದ್ದೇಗೌಡ, ಜಿಲ್ಲಾ ಅಧ್ಯಕ್ಷ ಸಿ.ಡಿ. ಗಂಗಾಧರ್ ಉಪಸ್ಥಿತರಿದ್ದರು.

ಸೆ.4 ಮಡಿಲು ತುಂಬುವ ಕಾರ್ಯಕ್ರಮ

ಶ್ರೀರಂಗಪಟ್ಟಣ, ಆ, 31–ನಿಮಿಷಾಂಬ ದೇವಸ್ಥಾನದ ಆವರಣದಲ್ಲಿ ಸೆ.4 ರಂದು 700ಕ್ಕೂ ಹೆಚ್ಚು ಗರ್ಭಿಣಿಯರಿಗೆ ಮಡಿಲು ತುಂಬುವ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಶಾಸಕ ರಮೇಶ್ ಬಂಡಿಸಿದ್ದೇಗೌಡ ತಿಳಿಸಿದರು.

ಪಟ್ಟಣದ ತಹಸೀಲ್ದಾರ್ ಕೋರ್ಟ್ ಆವರಣದಲ್ಲಿ ತಾಲೂಕು ಮಟ್ಟದ ಇಲಾಖೆ ಅಧಿಕಾರಿಗಳ ಸಭೆ ನಡೆಸಿದ ಅವರು ಈ ಕಾರ್ಯಕ್ರಮದಲ್ಲಿ ತಾಲೂಕಿನವರಷ್ಟೇ ಅಲ್ಲದೆ ವಿಧಾನಸಭಾ ಕ್ಷೇತ್ರದ ಎಲ್ಲಾ ಗರ್ಭಿಣಿ ಸ್ತ್ರೀಯರಿಗೂ ಕೂಡ ಮಡಿಲು ತುಂಬುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು. ಪಟ್ಟಣದ ಒಳಚರಂಡಿ ವ್ಯವಸ್ಥೆಗೆ ಗುದ್ದಲಿ ಪೂಜೆ, ರೈತರಿಗೆ ವಿವಿಧ ಸವಲತ್ತುಗಳ ವಿತರಣೆ ಫಲಾನುಭವಿಗಳಿಗೆ ವಿವಿಧ ಸವಲತ್ತುಗಳನ್ನು ವಿತರಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ತಹಸೀಲ್ದಾರ್ ಚೇತನ ಯಾದವ್, ಪುರಸಭಾ ಸಿಓ ರಾಜಣ್ಣ, ಪ್ರಭಾರ ಅಧ್ಯಕ್ಷ ದಿನೇಶ್, ದೇವಾಲಯದ ಪ್ರಧಾನ ಅರ್ಚಕ ಸೂರ್ಯ ನಾರಾಯಣ ಭಟ್ ಇದ್ದರು.

ಶಾಂತಿಭಂಗ ಉಂಟುಮಾಡಿದ ಇಬ್ಬರ ವಿರುದ್ಧ ದೂರು ದಾಖಲು

ನಾಗಮಂಗಲ, ಆ.31–ಗಣೇಶ ಮೂರ್ತಿ ಮೆರವಣಿಗೆಗೆ ಸಂಬಂಧಿಸಿದ ಕೋಮು ಸೌಹಾರ್ದತೆ ಹಾಳು ಮಾಡಲೆತ್ನಿಸಿದ ಇಬ್ಬರ ವಿರುದ್ಧ ಪೋಲೀಸರು ಸ್ವಯಂ ದೂರು ದಾಖಲಿಸಿಕೊಂಡಿದ್ದಾರೆ.

ಪಟ್ಟಣದ ಕೆಂಪೇಗೌಡ ಅಲಿಯಾಸ್ ಕೋಳಿ ರಾಮ ಹಾಗೂ ಕಾರ್ತಿಕ್ ಎಂಬವರು ಪಟ್ಟಣದ ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆಗೆ ಸಂಬಂಧಿಸಿದಂತೆ 2 ಕೋಮುಗಳ ನಡುವೆ ಶಾಂತಿ ಸುವ್ಯವಸ್ಥೆಯನ್ನು ಕದಡುವ ಉದ್ದೇಶದಿಂದ ಸಾಮಾಜಿಕ ಯೂಟ್ಯೂಬ್ ಚಾನೆಲ್‌ನಲ್ಲಿ ಅಪಪ್ರಚಾರದ 15 ನಿಮಿಷದ ವಿಡಿಯೋವನ್ನು ಬಿತ್ತರಿಸಿದ್ದು, ಅದನ್ನು ಜನ ವೀಕ್ಷಣೆ ಮಾಡಿರುವುದನ್ನು ಪೊಲೀಸ್ ಠಾಣೆಯ ಗುಪ್ತಚರ ಮಾಹಿತಿ ಸಿಬ್ಬಂದಿ ಹಾಗೂ ಸೋಶಿಯಲ್ ಮೀಡಿಯಾ ಮಾನಿಟರ್ ಸಿಬ್ಬಂದಿ ಪತ್ತೆ ಹಚ್ಚಿದ್ದಾರೆ.

ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಿರುವವರು ಯಾವುದೇ ಭಯವಿಲ್ಲದೆ ಸಾರ್ವಜನಿಕರು ಶಾಂತಿ ಕಾಪಾಡುವ ಜೊತೆಗೆ ಸಣ್ಣಪುಟ್ಟ ಅಹಿತಕರ ಘಟನೆಗಳಿಗೆ ಅವಕಾಶ ನೀಡದಂತೆ ಹಾಗೂ ಮೆರವಣಿಗೆಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಸೂಕ್ತ ಭದ್ರತೆ ನೀಡಲಾಗುವುದು ಎಂದು ಡಿವೈಎಸ್‌ಪಿ ಚೆಲುವರಾಜು ಆಶ್ವಾಸನೆ ನೀಡಿದ್ದರು.

ಆರೋಪಿಗಳಾದ ಕೆಂಪೇಗೌಡ ಅಲಿಯಾಸ್ ಕೋಳಿ ರಾಮ ಹಾಗೂ ಕಾರ್ತಿಕ್ ಎಂಬವರ ವಿರುದ್ಧ ಪಟ್ಟಣ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಶಿವಕುಮಾರ್ ಸ್ವಯಂದೂರು ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಶಾಂತಿ ನೆಮ್ಮದಿ ಕದಡಲು ಯತ್ನಿಸುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ತೆಗೆದು ಕೊಳ್ಳಲಾಗುವುದು ಎಂದು ಡಿವೈಎಸ್‌ಪಿ ತಿಳಿಸಿದ್ದಾರೆ.

ಕರ್ನಾಟಕ ಸಂವಿಧಾನ ಸೇನೆ ತಾಲೂಕು ಘಟಕ ಅಧ್ಯಕ್ಷರ ಆಯ್ಕೆ



ಕರ್ನಾಟಕ ಸಂವಿಧಾನ ಸೇನೆ ತಾಲೂಕು ನೂತನ ಅಧ್ಯಕ್ಷ ಮಾಕವಳ್ಳಿ ರಮೇಶ್ ಅವರನ್ನು ಗೌರವಿಸಲಾಯಿತು.

ಕೆ.ಆರ್.ಪೇಟೆ,ಆ.31–ಕರ್ನಾಟಕ ಸಂವಿಧಾನ ಸೇನೆ ತಾಲೂಕು ಘಟಕದ ಅಧ್ಯಕ್ಷರಾಗಿ ಮಾಕವಳ್ಳಿ ರಮೇಶ್ ಆಯ್ಕೆಯಾಗಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಕರ್ನಾಟಕ ಸಂವಿಧಾನ ಸೇನೆ ತಾಲೂಕು ಕಾರ್ಯಕರ್ತರ ಸಭೆಯಲ್ಲಿ ರಾಜ್ಯಾಧ್ಯಕ್ಷ ನರಸಿಂಹ ಮೂರ್ತಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತಾಲೂಕು ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ತಾಲೂಕು ಘಟಕದ ಗೌರವಾಧ್ಯಕ್ಷರಾಗಿ ಚಂದ್ರು, ತಾಲೂಕು ಸಂಚಾಲಕರಾಗಿ ಸಣಬ ಮಂಜು, ತಾಲೂಕು ಘಟಕದ ನಾಗೋರ್ನಹಳ್ಳಿ ಎನ್.ವಿ.ಕೃಷ್ಣ ಉಪಾಧ್ಯಕ್ಷರಾಗಿ ಗಂಗಾಧರ್, ಸಂಘಟನಾ ಕಾರ್ಯದರ್ಶಿಯಾಗಿ ಎಸ್‌ಎಸ್. ಆನಂದ್, ಪದಾಧಿಕಾರಿಗಳಾಗಿ ಕೆ.ಎಸ್. ಮಹೇಶ್, ಕಾಮನಹಳ್ಳಿ ಮಹೇಶ್, ಟಿ.ಕೆ.ರವಿ, ಹಳೆಯೂರು ಜಗದೀಶ್, ಕಾಪನಹಳ್ಳಿ ಪುನೀತ್, ವಳಗೆರೆಮೆಣಸ ವಿ.ಬಿ.ಅರುಣ್‌ರವರುಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ನೂತನ ಪದಾಧಿಕಾರಿಗಳನ್ನು ಅಭಿನಂದಿಸಿ ಮಾತನಾಡಿದ ಹೆಚ್.ಎನ್. ನರಸಿಂಹಮೂರ್ತಿ ಅಂಬೇಡ್ಕರ್ ಆಶಯದಂತೆ ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ನೀಡುವ ಯೋಜನೆಗಳನ್ನು ನಮ್ಮ ಸಂವಿಧಾನ ಸೇನೆಯು ಹಾಕಿಕೊಂಡಿರುತ್ತದೆ. ಸರ್ವರಿಗೂ ಸಾಮಾಜಿಕ ನ್ಯಾಯ ನೀಡಲು ರಾಜ್ಯಾದ್ಯಂತ ಎಲ್ಲಾ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಶಾಖೆಗಳನ್ನು ಆರಂಭಿಸುವ ಮೂಲಕ ಸಂಘಟನೆಯ ಶಕ್ತಿಯನ್ನು ಹೆಚ್ಚಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ ಎಂದರು.

ಜಿಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಸಭೆ

ಮಂಡ್ಯ, ಆ.31– ಜಿಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ನೌಕರರ ವಿವಿಧೋದ್ದೇಶ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಸಭೆ ನಗರದ ಕರ್ನಾಟಕ ಸಂಘದ ಕೆವಿಎಸ್ ಭವನದಲ್ಲಿ ನಡೆಯಿತು.

ಸಂಘದ ಅಧ್ಯಕ್ಷ ಸುರೇಶ್ ಮಾತನಾಡಿ, ಸಂಘದ ಅಭಿವೃದ್ಧಿಗೆ ಎಲ್ಲರೂ ಕೈ ಜೋಡಿಸಿ ಸಿಗುವ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು. ಸರಿಯಾದ ಸಮಯದಲ್ಲಿ ಸಾಲ ಮರುಪಾವತಿ ಮಾಡಿದವರನ್ನು ಸನ್ಮಾನಿಸಲಾಗುತ್ತದೆ. ಏಕೆಂದರೆ ನೀವು ತೆಗೆದುಕೊಂಡ ಸಾಲವನ್ನು ಸರಿಯಾಗಿ ಮರು ಪಾವತಿ ಮಾಡಿದಲ್ಲಿ, ಇತರೆ ಸದಸ್ಯರಿಗೂ ಸಾಲ ತೆಗೆದುಕೊಳ್ಳಲು ಸಹಾಯವಾಗುತ್ತದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಹಿರಿಯ ಸದಸ್ಯರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷ ಕೆ.ಎಸ್. ಚಂದ್ರು, ನಿರ್ದೇಶಕರಾದ ಜಿ.ರಾಮಲಿಂಗೇಗೌಡ, ಅಂಕೇಗೌಡ, ಬಸವಾಚಾರಿ, ಕೆ.ಆರ್.ಪುಟ್ಟರಾಜು, ಹೊನ್ನೇಗೌಡ, ಹನುಮಂತಪ್ಪ, ಶಂಕರೇ ಗೌಡ, ರಾಜೇಶ್, ಚಂದ್ರಶೇಖರ್, ಪ್ರಕಾಶ್ ಗೌಡ, ಉಮಾ, ಶಿಲ್ಪಾ ಭಾಗವಹಿಸಿದ್ದರು.

ಚುನಾವಣೆ ಸಮಯದಲ್ಲಿ

ನಮ್ಮ ಬಲಿಷ್ಟತೆ ತೋರಿಸೋಣ

ಭಾರತೀನಗರ, ಆ.31–ಚುನಾವಣೆ ಬಂದಾಗ ಯಾರ ಶಕ್ತಿ ಎಷ್ಟಿದೆ, ಯಾರು ಬಲಿಷ್ಟರು ಎಂಬುದನ್ನು ತೋರಿಸುವ ಕಾಲ ಬರುತ್ತದೆ ಎಂದು ಶಾಸಕ ಮಧು ಜಿ.ಮಾದೇಗೌಡ ಪರೋಕ್ಷವಾಗಿ ವಿರೋಧಿಗಳಿಗೆ ಗುಡುಗಿದ್ದಾರೆ.

ಸಮೀಪದ ಮೆಳ್ಳಹಳ್ಳಿಯಲ್ಲಿ ಕನಕ ಭವನದ ಕಾಂಪೌಂಡ್ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ, ಶಕ್ತಿ ಪ್ರದರ್ಶನ, ರಾಜಕೀಯವನ್ನು ಚುನಾವಣೆ ಸಮಯದಲ್ಲಿ ಮಾಡಬೇಕೆ ಹೊರತು ಉಳಿದ ಸಮಯದಲ್ಲಿ ಅಭಿವೃದ್ಧಿ ಮಾಡಲು ಸಹಕರಿಸುವುದು ರಾಜಕಾರಣಿಗಳ ಲಕ್ಷಣವಾಗಿದೆ. ನಮ್ಮ ರಾಜಕೀಯವೇನಿದ್ದರೂ ಚುನಾವಣಾ ಸಮಯದಲ್ಲಿ. ಈಗ ಕೇವಲ ಅಭಿವೃದ್ಧಿಯ ಮಂತ್ರವಷ್ಟೆ ಎಂದರು.

ವಿರೋಧ ಪಕ್ಷದವರು ಕಾಂಗ್ರೆಸ್ ಮೇಲೆ ಇಲ್ಲದ ಸಲ್ಲದ ವಿಚಾರವನ್ನು ಹೇಳುವ ಮೂಲಕ ಜನರನ್ನು ದಾರಿ ತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ. ಜನರು ದಡ್ಡರೆಂದು ಭಾವಿಸಿರುವ ವಿರೋಧ ಪಕ್ಷದವರು ಸರ್ಕಾರದ ಮೇಲಿರುವ ಪ್ರೀತಿ ಇರುವುದನ್ನು ಮರೆ ಮಾಚಲು ಯತ್ನಿಸುತ್ತಿದ್ದಾರೆಂದು ದೂರಿದರು. ಕಾಂಪೌಂಡ್ ನಿರ್ಮಾಣಕ್ಕೆ 9 ಲಕ್ಷ ಹಣ ಬಿಡುಗಡೆಗೊಳಿಸಲಾಗಿದೆ. ಮುಂದೆ ಭವನ ನಿರ್ಮಾಣ ಯಶಸ್ವಿಗೊಳಿಸಲು ಅಗತ್ಯವಾದ ಸಹಕಾರ ನೀಡುತ್ತೇನೆಂದು ಭರವಸೆ ನೀಡಿದರು.

ಗ್ರಾ.ಪಂ ಸದಸ್ಯ ವಿನಯ್ ಹೊನ್ನೇಗೌಡ ಮಾತನಾಡಿ, ಗ್ರಾಮದ ಅಭಿವೃದ್ಧಿಗಾಗಿ ಕನಕ ಭವನ ನಿರ್ಮಾಣಕ್ಕೆ ಮಾಡಿಕೊಂಡ ಮನವಿ ಮೇರೆಗೆ ಅನುದಾನ ಬಿಡುಗಡೆಗೊಳಿಸಿದ್ದಾರೆ. ಗ್ರಾಮದ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ತಾ.ಪಂ ಮಾಜಿ ಸದಸ್ಯರಾದ ಬಿ. ಗಿರೀಶ್, ಭರತೇಶ್, ಮುಖಂಡರಾದ ಅಣ್ಣೂರು ಆರ್.ಸಿದ್ದಪ್ಪ, ಕಾರ್ಕಹಳ್ಳಿ ಸ್ವರೂಪ್‌ಚಂದ್ರ, ಗ್ರಾ.ಪಂ ಅಧ್ಯಕ್ಷೆ ಸೌಭಾಗ್ಯ ರಾಮಣ್ಣ, ಉಪಾಧ್ಯಕ್ಷೆ ಸುವರ್ಣ, ಕೆ.ಟಿ. ಶ್ರೀನಿವಾಸ್, ಮಿಥುನ್, ಕೆ.ವಿ.ಶ್ರೀನಿವಾಸ್, ಕೌಶಲ್ಯ, ರವಿಚಂದ್ರ, ವೆಂಕಟೇಶ್, ಗುಡಿಗೆರೆ ಮಂಜುನಾಥ್, ಪಿಡಿಓ ಸುಧಾ, ಗ್ರಾಮದ ಹಿರಿಯ ಮುಖಂಡ ಎಂ.ಕೆ. ಹೊನ್ನೇಗೌಡ, ಬಿ.ರೇವಣ್ಣ, ನಾಡಗೌಡ ತಮ್ಮಣ್ಣ, ಕರಿಯಪ್ಪ, ಪೂಜಾರಿ ಶಿವಣ್ಣ, ಕೆ.ರೇವಣ್ಣ, ಕಂಡಕ್ಟರ್ ಕೃಷ್ಣ, ತೆಂಡೆ ಯಜಮಾನರಾದ ನವೀನ, ಶಿವಣ್ಣ, ಸತೀಶ, ಉಮೇಶ್ ಸೇರಿದಂತೆ ಹಲವರಿದ್ದರು.

ಕಾರ್ಯಕ್ರಮದ ನಂತರ ಮಾರಮ್ಮ ಸೇವಾ ಸಮಿತಿ ಮತ್ತು ಶನೇಶ್ವರ ವಿನಾಯಕ ಗೆಳೆಯರ ಬಳಗದ ವತಿಯಿಂದ ಪ್ರತಿಷ್ಠಾಪಿಸಿದ್ದ ಗಣಪತಿಗೆ ಪೂಜೆ ಸಲ್ಲಿಸಿದರು.

ಕಿಕ್ಕೇರಿ ಆರಕ್ಷಕ ಠಾಣೆ ಗಣಪತಿ ವಿಸರ್ಜನೆ



ಠಾಣೆಯಲ್ಲಿಟ್ಟಿದ್ದ ಗಣೇಶ ಮೂರ್ತಿಯನ್ನು ಅಮಾನಿಕೆರೆಯಲ್ಲಿ ವಿಸರ್ಜಿಸಲಾಯಿತು.

ಕಿಕ್ಕೇರಿ: ಯುವಕರು ಆರೋಗ್ಯಕರ ಸಮಾಜಕ್ಕೆ ಹಬ್ಬವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಇನ್ಸ್‌ಸ್ಪೆಕ್ಟರ್ ರೇವತಿ ತಿಳಿಸಿದರು.

ಇಲ್ಲಿನ ಆರಕ್ಷಕಠಾಣೆಯಲ್ಲಿ ಪ್ರತಿಷ್ಠಾಪಿಸಲಾಗಿದ್ದ ಗಣಪತಿಗೆ ವಿಸರ್ಜನಾ ಮಹೋತ್ಸವದಲ್ಲಿ ಭಾಗಿಯಾಗಿ ಮಾತನಾಡುತ್ತ, ಗಣಪತಿ ಹಬ್ಬ ಆಚರಣೆ ಪರಿಸರ, ಸಾರ್ವಜನಿಕರಲ್ಲಿ ಒಳಿತು ಮಾಡುವ ವಾತಾವರಣದಂತೆ ಇರಬೇಕು. ಈ ದೃಷ್ಟಿಯಿಂದ ತಮ್ಮ ಠಾಣೆ ಜಾಗೃತಿ ಮೂಡಿಸಲು ಮುಂದಾಗಿದೆ ಎಂದರು.

ಯಾವುದೇ ಕಾರಣಕ್ಕೂ ಡಿಜೆ ಬಳಸದಿರಿ. ಡಿಜೆ ಶಬ್ದದಿಂದ ಸಾಕಷ್ಟು ಹೃದ್ರೋಗಿಗಳು, ವಯೋವೃದ್ಧರು, ಮಕ್ಕಳು, ಗರ್ಭಿಣಿಯರು, ಪ್ರಾಣಿಗಳ ಆರೋಗ್ಯದಲ್ಲಿ ಏರುಪೇರು ಆಗಲಿದೆ. ಪಟಾಕಿ ಸಿಡಿಸುವುದರಿಂದ ಪರಿಸರ ಹಾನಿಯಾಗಲಿದೆ. ಸರಳವಾಗಿ ಭಕ್ತಿಯಿಂದ ಗಣಪತಿ ಪ್ರತಿಷ್ಠಾಪಿಸಿ, ವಿಸರ್ಜಿಸಿ ಎಂದು ತಿಳಿ ಹೇಳಿದರು.

ಎಎಸ್‌ಐ ರಮೇಶ್, ಸಿಬ್ಬಂದಿ ಅಶೋಕ್, ಅವಿನಾಶ್, ಪ್ರದೀಪ್, ಸುಭಾಷ್, ಮನುಕುಮಾರ್ ಭಾಗವಹಿಸಿದ್ದರು.

ಭುಜುವಳ್ಳಿ ರಾಮಚಂದ್ರ ನಿಧನ



ಭಾರತೀನಗರ.ಆ.31– ಇಲ್ಲಿಗೆ ಸಮೀಪದ ಭುಜುವಳ್ಳಿ ಗ್ರಾಮದ ಪ್ರಗತಿಪರ ಚಿಂತಕ ಭುಜುವಳ್ಳಿ ರಾಮಚಂದ್ರ (60) ನಿಧನರಾಗಿದ್ದಾರೆ.

ಮೃತರು ಪತ್ನಿ ಚಂಪಕಲಾ, ಪುತ್ರ, ಪುತ್ರಿಯನ್ನು ಅಗಲಿದ್ದಾರೆ. ಚಿತ್ರರಂಗದ ನಂಟನ್ನು ಹೊಂದಿದ್ದ ಇವರು ಮಗನನ್ನು ನಾಯಕನನ್ನಾಗಿಸಿ ಚಿತ್ರ ನಿರ್ಮಾಣದ ಕೆಲಸಕ್ಕೂ ಕೈ ಹಾಕಿದ್ದರು. 1998 ರಲ್ಲಿ ಜನಾಶಯ ಪತ್ರಿಕೆಯನ್ನು ಹುಟ್ಟು ಹಾಕಿ ರಾಜಕೀಯ ವಲಯದಲ್ಲಿ ಸಂಚಲನವನ್ನೇ ಮೂಡಿಸಿದ್ದರು.

ಕೆಲ ದಿನಗಳ ಹಿಂದೆ ಅನಾರೋಗ್ಯಕ್ಕೀಡಾಗಿ ಅಂಗಾಂಗ ವೈಫಲ್ಯದಿಂದ ಬಳಲುತ್ತಿದ್ದ, ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲು ಮಾಡಲಾಗಿದ್ದು, ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದಾರೆ.

ಮೂರನೇ ಪುಟದಿಂದ

ಛಾಪು ಮೂಡಿಸಿದ ಸಂದೇಶ್ ನಾಗರಾಜ್

ಪದವಿಯಲ್ಲಿ ಓದುತ್ತಿದ್ದರು. ವಯಸ್ಸಿನಲ್ಲಿ ನನಗಿಂತ ಹಿರಿಯರಾಗಿದ್ದಾರೆ. ಆದರೂ ಅವರ ಜೊತೆಗಿನ ಆತ್ಮೀಯತೆಯಿಂದ ಏಕವಚನದಲ್ಲಿ ಮಾತನಾಡಿಸುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಶತಾಯುಷಿ ಗಾಂಧಿಯನ್ನ ಆರ್‌ಎಸ್‌ಎಸ್‌ನವರು ಕೊಂದರು: ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರು ನೂರು ವರ್ಷಕ್ಕೂ ಹೆಚ್ಚು ಕಾಲ ಬದುಕಿ ನಮಗೆ ಮಾರ್ಗದರ್ಶಕರಾಗಲಿ ಎಂದು ಅಭಿಮಾನಿಗಳು ಹಾರೈಸಿದರೆ ಆರ್‌ಎಸ್‌ಎಸ್‌ನವರು ಗಾಂಧಿಯನ್ನು ಗುಂಡಿಟ್ಟು ಕೊಂದರು. ನೂರು ವರ್ಷಕ್ಕಿಂತ ಹೆಚ್ಚು ವರ್ಷ ನೀವು ಬದುಕಿ ದೇಶದ ಏಳ್ಗೆಗೆ ಮಾರ್ಗದರ್ಶನ ನೀಡಬೇಕು ಎಂದು ಅಭಿಮಾನಿಯೊಬ್ಬರು ಮಹಾತ್ಮ ಗಾಂಧಿಗೆ ಪತ್ರ ಬರೆದಿದ್ದರು. ದೇಶದ ಜನರಿಗೆ ಮಹಾತ್ಮ ಗಾಂಧಿ ಅವರ ಬಗ್ಗೆ ಅಪಾರ ಪ್ರೀತಿ ಗೌರವವಿತ್ತು. ಆದರೆ ಸಂಘ ಪರಿವಾರದವರು ಮಹಾತ್ಮ ಗಾಂಧಿ ಅವರನ್ನು ಗುಂಡಿಟ್ಟು ಕೊಂದರು ಎಂದು ಸಿದ್ದರಾಮಯ್ಯ ಹೇಳಿದರು.

ಗಣ್ಯರನ್ನು ಸ್ವಾಗತಿಸಿ ಮಾತನಾಡಿದ ಮಾಜಿ ಮೇಯರ್ ಸಂದೇಶ್ ಸ್ವಾಮಿ, ಸಿದ್ದರಾಮಯ್ಯ ಅವರು ಮೈಸೂರಿಗೆ ಬಹಳಷ್ಟು ಕೊಡುಗೆ ನೀಡಿದ್ದಾರೆ. ಇದರಿಂದ ಜನ ಬೆಂಬಲ ದೊರೆತು ರಾಜಕೀಯವಾಗಿ ಅವರು ಬಹಳ ಎತ್ತರಕ್ಕೆ ಬೆಳೆಯಲು ಕಾರಣವಾಯಿತು ಎಂದು ಹೇಳಿದರು. ಇದೇ ವೇಳೆ ಸಂದೇಶ್ ನಾಗರಾಜ್ ಅಭಿಮಾನಿಗಳ ಬಳಗದ ವತಿಯಿಂದ ಆಯೋಜಿಸಿದ್ದ ಹುಟ್ಟುಹಬ್ಬ ಸಮಾರಂಭದಲ್ಲಿ ಸಿದ್ದರಾಮಯ್ಯ ಅವರು ಸಂದೇಶ್ ನಾಗರಾಜ್ ಅವರನ್ನು ಸನ್ಮಾನಿಸಿದರು.

ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ಕೃಷಿ ಸಚಿವ ಎನ್.ಚಲುವರಾಯ ಸ್ವಾಮಿ, ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ವಸತಿ ಸಚಿವ ಜಮೀರ್ ಅಹಮ್ಮದ್, ಶಾಸಕರಾದ ತನ್ವೀರ್ ಸೇಠ್, ಅನಿಲ್ ಚಿಕ್ಕಮಾದು, ಕೆ.ಹರೀಶ್‌ಗೌಡ, ರಾಘವೇಂದ್ರ ಹಿಟ್ನಾಳ್, ಡಾ.ಯತೀಂದ್ರ, ಸಿ.ಎನ್.ಮಂಜೇಗೌಡ, ಮಾಜಿ ಸಚಿವ ರಾಮಚಂದ್ರೇಗೌಡ, ಚಲನಚಿತ್ರ ನಿರ್ದೇಶಕ ಹಂಸಲೇಖ, ಸಾದು ಕೋಕಿಲ, ಚಿತ್ರ ನಿರ್ಮಾಪಕ ಚಿನ್ನೇಗೌಡ, ಚಿತ್ರನಟರಾದ ಕಿಚ್ಚ ಸುದೀಪ್, ಡಾಲಿ ಧನಂಜಯ್, ಅರುಣ್ ಸಾಗರ್, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಸೇರಿದಂತೆ ಹಲವು ಗಣ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸೆ.28ರಂದು ತೆರೆ ಮೇಲೆ ಬರುವೆ: ಸುದೀಪ್

ಮೈಸೂರು: ಸೆಪ್ಟಂಬರ್ 28ರಂದು ಬಿಗ್ ಬಾಸ್ ಕಾರ್ಯಕ್ರಮದಲ್ಲಿ ತೆರೆಯ ಮೇಲೆ ಬರುತ್ತೇನೆ ಎಂದು ಚಿತ್ರನಟ ಕಿಚ್ಚ ಸುದೀಪ್ ತಿಳಿಸಿದರು. ನಗರದ ದಸರಾ ವಸ್ತು ಪ್ರದರ್ಶನದಲ್ಲಿ ಇಂದು ಮಾಜಿ ವಿಧಾನ ಪರಿಷತ್ ಸದಸ್ಯ ಸಂದೇಶ್ ನಾಗರಾಜ್ ಅವರ 80 ನೇ ಹುಟ್ಟುಹಬ್ಬಕ್ಕೆ ಶುಭಾಶಯ ಕೋರಿ ಮಾತನಾಡಿದ ಅವರು, ಬಿಗ್‌ಬಾಸ್ ತೆರೆಯ ಮೂಲಕ ಶೀಘ್ರವೇ ನಿಮಗೆ ಕಾಣಿಸುತ್ತೇನೆ ಎಂದರು.

ಚಿಕ್ಕ ವಯಸ್ಸಿನಿಂದ ಸಂದೇಶ್ ನಾಗರಾಜ್ ಅವರನ್ನು ನಾನು ನೋಡಿದ್ದೇನೆ. ಈಗ 80ನೇ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಸಂದೇಶ್ ನಾಗರಾಜ್ ಅವರಿಗೆ ಮತ್ತಷ್ಟು ಆಯಸ್ಸು ಆರೋಗ್ಯ ನೀಡಿಲಿ ಸುದೀಪ್ ಶುಭ ಹಾರೈಸಿದರು.

ಇದೇ ವೇಳೆ ಮಾತನಾಡಿದ ಚಿತ್ರನಟ ಡಾಲಿ ಧನಂಜಯ ಅವರು, ಸಂದೇಶ್ ನಾಗರಾಜ್ ಅವರಿಗೆ 100ಕ್ಕೂ ಹೆಚ್ಚು ವರ್ಷ ಆಯಸ್ಸು ಸಿಗಲಿ. ಮತ್ತಷ್ಟು ಸಿನಿಮಾ ನಿರ್ಮಾಣ ಮಾಡಿ ನಮಗೂ ಅವಕಾಶ ನೀಡಲಿ ಎಂದು ಕೋರಿದರು.

ನಂತರ ಮಾತನಾಡಿದ ಚಿತ್ರನಟ ಯುವ ರಾಜ್‌ಕುಮಾರ್, ಸಂದೇಶ್ ನಾಗರಾಜ್ ಅವರು ಮತ್ತಷ್ಟು ಸಿನಿಮಾ ಮಾಡಿ ಕಲಾವಿದರಿಗೆ ಅವಕಾಶ ನೀಡಲಿ ಎಂದರು.

ಜಂಬೂಸವಾರಿಯಂದೇ ಏರ್ ಶೋ

ವಿಜಯ ದಶಮಿ ದಿನದ ಮುನ್ನಾ ದಿನ ಎಂದು ಪ್ರತಿಕ್ರಿಯಿಸಿದರು. ಬಳಿಕ ಕ್ಷಣ ಮಾತ್ರದಲ್ಲಿಯೇ ವಿಜಯ ದಶಮಿ ದಿನದಂದು ಏರ್ ಶೋ ನಡೆಯುತ್ತದೆ ಎಂದು ತಿಳಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಹೊರ ನಡೆದರು.

ಗೊಂದಲವಾಗಬಹುದು: ವಿಜಯದಶಮಿ ದಿನದಂದೇ ಏರ್ ಶೋ ನಡೆದರೆ ಗೊಂದಲ ಉಂಟಾಗುವುದು ಖಚಿತ. ವಿಜಯ ದಶಮಿಯಂದ ಜಂಬೂಸವಾರಿ ಮೆರವಣಿಗೆಗೆ ಗಜಪಡೆಯನ್ನು ಸಜ್ಜುಗೊಳಿಸಲಾಗುತ್ತಿರುತ್ತದೆ. ಅಪಾರ ಸಂಖ್ಯೆಯ ಜನರೂ ಕಿಕ್ಕಿರಿದು ಮಾರ್ಗದುದ್ದಕ್ಕೂ ಸೇರಿರುತ್ತಾರೆ. ಈ ವೇಳೆ ವೈಮಾನಿಕ ಪ್ರದರ್ಶನ ನೀಡುವ ಲೋಹದ ಹಕ್ಕಿಗಳ ಶಬ್ದಕ್ಕೆ ಗಜಪಡೆ ಹೆದರುವ ಸಾಧ್ಯತೆ ಇದೆ.

ಅಲ್ಲದೆ, ಪಂಜಿನ ಕವಾಯತ್ ಮೈದಾನದಲ್ಲಿ ಏರ್ ಶೋ ನೋಡಲು ಬೆಳಗ್ಗೆಯೇ ಜನ ಸೇರಿದಂತೆ ಸಂಜೆ ನಡೆಯುವ ಪಂಜಿನ ಕವಾಯತ್ ವೀಕ್ಷಣೆಗಾಗಿ ಟಿಕೆಟ್ ಪಡೆದವರು ಹಾಗೂ ಪಾಸ್ ಪಡೆದವರು ಮೈದಾನ ಪ್ರವೇಶಿಸಲು ಕಷ್ಟವಾಗಲಿದೆ ಎಂಬ ಅಭಿಪ್ರಾಯ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗಿದೆ.

ಮೈಸೂರಿಗೆ ಇಂದು ರಾಷ್ಟ್ರಪತಿ ಆಗಮನ

ಆಯಿಷ್ ಸಂಸ್ಥೆ ಆವರಣಕ್ಕೆ ಆಗಮಿಸಲಿದ್ದಾರೆ. ಸಂಜೆ 4 ಗಂಟೆಗೆ ಆರಂಭವಾಗುವ ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆಯ(ಆಯಿಷ್) ವಜ್ರ ಮಹೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ವಜ್ರ ಮಹೋತ್ಸವದ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರದ ಆರೋಗ್ಯ ಮತ್ತು ಕುಟುಂಬ ಇಲಾಖೆಯ ರಾಜ್ಯ ಸಚಿವೆ ಅನುಪ್ರಿಯಾ ಪಟೇಲ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಆಯಿಷ್ ಹಿರಿಯ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ.

ಕಾರ್ಯಕ್ರಮ ಮುಗಿದ ನಂತರ ಸಂಜೆ 5 ಗಂಟೆಗೆ ಆಯಿಷ್ ಸಂಸ್ಥೆಯಿಂದ ನಿರ್ಗಮಿಸಲಿದ್ದಾರೆ. ನಂತರ ರ‍್ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಕೆಲಕಾಲ ವಿಶ್ರಾಂತಿ ಪಡೆಯಲಿದ್ದಾರೆ.

ಸಂಜೆ 6.30ಕ್ಕೆ ಚಾಮುಂಡಿಬೆಟ್ಟಕ್ಕೆ ತೆರಳಿ ದೇವಿ ದರ್ಶನ ಪಡೆಯಲಿದ್ದಾರೆ. ಬಳಿಕ ವಾಪಸ್ಸಾಗಿ ರ‍್ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಲಿದ್ದಾರೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು 2022ರಲ್ಲಿ ನಾಡಹಬ್ಬ ದಸರಾ ಮಹೋತ್ಸವ ಉದ್ಘಾಟಿಸಲು ಚಾಮುಂಡಿಬೆಟ್ಟಕ್ಕೆ ಆಗಮಿಸಿದ್ದು, ಇದೀಗ ಎರಡನೇ ಬಾರಿಗೆ ಚಾಮುಂಡಿಬೆಟ್ಟಕ್ಕೆ ಆಗಮಿಸುತ್ತಿದ್ದಾರೆ.

ಅರಮನೆಯಲ್ಲಿ ಉಪಹಾರ: ಸೆ.1ರಂದು ಮೈಸೂರಲ್ಲೇ ವಾಸ್ತವ್ಯ ಹೂಡಲಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮರು ದಿನ(ಸೆ.2) ಬೆಳಗ್ಗೆ 8.30ಕ್ಕೆ ರ‍್ಯಾಡಿಸನ್ ಬ್ಲೂ ಹೋಟೆಲ್‌ನಿಂದ ನಿರ್ಗಮಿಸಿ, 8.40ಕ್ಕೆ ಬಿ.ಎನ್.ರಸ್ತೆಯಿಂದ ಜಯ ಮಾರ್ತಾಂಡ ದ್ವಾರದ ಮೂಲಕ ಮೈಸೂರು ಅರಮನೆಗೆ ಆಗಮಿಸಲಿದ್ದಾರೆ. ಅರಮನೆಯಲ್ಲಿ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಉಪಹಾರ ಕೂಟ ಏರ್ಪಡಿಸಿದ್ದು, ಕೆಲ ಗಣ್ಯರು ಪಾಲ್ಗೊಳ್ಳಲಿದ್ದಾರೆ. ಉಪಹಾರದ ಬಳಿಕ ಅರಮನೆ ವೀಕ್ಷಿಸುವ ಸಾಧ್ಯತೆ ಇದ್ದು, ನಂತರ ಬೆಳಗ್ಗೆ 10 ಗಂಟೆಗೆ ಅರಮನೆಯಿಂದ ನಿರ್ಗಮಿಸಿ, 10.20ಕ್ಕೆ ಮಂಡಕಳ್ಳಿ ವಿಮಾನ ನಿಲ್ದಾಣ ತಲುಪಲಿದ್ದಾರೆ. ವಿಶೇಷ ವಿಮಾನದಲ್ಲಿ ಬೆಳಗ್ಗೆ 10.30ಕ್ಕೆ ಮಂಡಕಳ್ಳಿ ವಿಮಾನ ನಿಲ್ದಾಣದಿಂದ ನಿರ್ಗಮಿಸಿ, 11.50ಕ್ಕೆ ತಮಿಳುನಾಡಿನ ಚೆನ್ನೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ತಲುಪಿದ ಬಳಿಕ ವಿವಿಧ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ತೆರಳಲಿದ್ದಾರೆ.

ನೋ ಪಾರ್ಕಿಂಗ್ ಜೋನ್

ಆಯಿಷ್‌ನಿಂದ ರಾಮಸ್ವಾಮಿ ವೃತ್ತದ ಮಾರ್ಗವಾಗಿ ರ‍್ಯಾಡಿಸನ್ ಬ್ಲೂ ಹೋಟೆಲ್‌ಗೆ ರಾಷ್ಟ್ರಪತಿಗಳು ರಸ್ತೆ ಮಾರ್ಗವಾಗಿ ತಲುಪುವುದರಿಂದ ನಾಳೆ(ಸೆ.1) ಬೆಳಗ್ಗಿನಿಂದ ರಾತ್ರಿವರೆಗೂ ರಾಮಸ್ವಾಮಿ ವೃತ್ತದಿಂದ ಪಾಠಶಾಲೆ ವೃತ್ತದವರೆಗೂ ಚಾಮರಾಜ ಜೋಡಿ ರಸ್ತೆಯ ಎರಡೂ ಬದಿಯಲ್ಲೂ ವಾಹನ ನಿಲುಗಡೆ ನಿಷೇದಿಸಲಾಗಿದೆ. ಅಂಗಡಿ, ಹೋಟೆಲ್‌ಗಳು ಎಂದಿನಂತೆ ತೆರೆಯಲು ಅವಕಾಶ ನೀಡಿದ್ದು, ಅವುಗಳ ಮಾಲೀಕರು, ಗ್ರಾಹಕರು ರಸ್ತೆ ಬದಿಯಲ್ಲಿ ವಾಹನ ನಿಲ್ಲಿಸಲು ನಿರ್ಬಂಧ ಹೇರಲಾಗಿದೆ.

ಬದಲಿ ಮಾರ್ಗ, ವಾಹನ ಸಂಚಾರಕ್ಕೆ ನಿಷೇಧವಿಲ್ಲ

ರಾಷ್ಟ್ರಪತಿಗಳ ಆಗಮನದ ಹಿನ್ನೆಲೆಯಲ್ಲಿ ಮೈಸೂರಿನ ಯಾವುದೇ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ನಿಷೇಧ ಹೇರಿಲ್ಲ. ಬದಲಾಗಿ ನಾಳೆ ನಂಜನಗೂಡು, ಹೆಚ್.ಡಿ. ಕೋಟೆ ಹಾಗೂ ಗದ್ದಿಗೆ ರಸ್ತೆಯಲ್ಲಿ ಸಂಚರಿಸುವ ಸಾರಿಗೆ ಸಂಸ್ಥೆಯ ಬಸ್ ಹಾಗೂ ಭಾರಿ ವಾಹನಗಳ ಸಂಚಾರಕ್ಕೆ ಮಾರ್ಗ ಬದಲಿಸಲಾಗಿದೆ. ಉಳಿದಂತೆ ರಾಷ್ಟ್ರಪತಿಗಳ ಸಂಚರಿಸುವ ವೇಳೆ ಅವರ ವಾಹನಗಳು ಸಾಗಿದ ಕೆಲ ನಿಮಿಷದ ಬಳಿಕ ಎಂದಿನಂತೆ ಸಾರ್ವಜನಿಕ ವಾಹನ ಸಂಚಾರಕ್ಕೆ ಅವಕಾಶ ನೀಡಲಾಗುತ್ತದೆ. ರಾಷ್ಟ್ರಪತಿಗಳ ಸಂಚರಿಸುವ ವೇಳೆ 8ರಿಂದ 10 ನಿಮಿಷಗಳ ವಾಹನ ಸಂಚಾರಕ್ಕೆ ತಡೆಯೊಡ್ಡಲಾಗುತ್ತದೆ. ಸೆ.2ರಂದು ರ‍್ಯಾಡಿಸನ್ ಬ್ಲೂ ಹೋಟೆಲ್‌ನಿಂದ ನಂಜನಗೂಡು ರಸ್ತೆ, ಗನ್‌ಹೌಸ್, ಬಿ.ಎನ್.ರಸ್ತೆ ಹಾಗೂ ಹಾರ್ಡಿಂಗ್ ವೃತ್ತದವರೆಗೂ ಬೆಳಗ್ಗೆ 8ರಿಂದ 10.45ರವರೆಗೆ ವಾಹನ ಸಂಚಾರದಲ್ಲಿ ವ್ಯತ್ಯಯವಾಗಲಿದೆ.

ರಸ್ತೆಬದಿ ಫಾಸ್ಟ್‌ಫುಡ್ ತೆರವು ಮಾಡಲಾಗಿದೆ: ಪಾಲಿಕೆ ಸ್ಪಷ್ಟನೆ

ಮೈಸೂರಿನ ಲಲಿತಮಹಲ್ ಮೈದಾನದ ಬಳಿ ರಸ್ತೆಬದಿಯಲ್ಲಿದ್ದ 20ಕ್ಕೂ ಹೆಚ್ಚು ಫಾಸ್ಟ್‌ಫುಡ್‌ಗಳನ್ನು ಮೈಸೂರು ಪಾಲಿಕೆ ತೆರವು ಮಾಡಲಾಗಿದ್ದು, ಈ ಸಂಬಂಧ ಫಾಸ್ಟ್‌ಫುಡ್ ಮಾಲೀಕರು ಪಾಲಿಕೆ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದರು. ಈ ಹಿನ್ನೆಲೆಯಲ್ಲಿ ಪಾಲಿಕೆ ಸ್ಪಷ್ಟನೆ ನೀಡಿದ್ದು, ರಾಷ್ಟ್ರಪತಿಗಳ ಪ್ರವಾಸದ ಹಿನ್ನೆಲೆಯಲ್ಲಿ ಶಿಷ್ಟಾಚಾರದಂತೆ ಹಾಗೂ ಭದ್ರತಾ ದೃಷ್ಟಿಯಿಂದ ರಸ್ತೆಬದಿಯಲ್ಲಿರುವ ಫಾಸ್ಟ್‌ಫುಡ್ ಹಾಗೂ ಕೆಲ ಮಳಿಗೆಯನ್ನು ತೆರವು ಮಾಡಲಾಗಿದೆ ಎಂದು ತಿಳಿಸಿದೆ.

ಪೊಲೀಸರ ಬಿಗಿ ಭದ್ರತೆ

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮೈಸೂರಿಗೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಎಲ್ಲೆಡೆ ಕಟ್ಟೆಚ್ಚರ ವಹಿಸಲಾಗಿದ್ದು, ಬಿಗಿ ಭದ್ರತೆಗಾಗಿ 600ಕ್ಕೂ ಹೆಚ್ಚು ಪೊಲೀಸರನ್ನು ನಿಯೋಜಿಸಲಾಗಿದೆ.

ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಡಿಸಿಪಿ ಆರ್.ಎನ್.ಬಿಂದು ಮಣಿ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ.

ಮೈಸೂರು ವಿಮಾನ ನಿಲ್ದಾಣದಿಂದ ರಿಂಗ್ ರಸ್ತೆ ಜಂಕ್ಷನ್‌ವರೆಗೂ ಎಸ್ಪಿ ಡಾ.ವಿಷ್ಣುವರ್ಧನ್ ನೇತೃತ್ವದಲ್ಲಿ ದಕ್ಷಿಣ ಗ್ರಾಮಾಂತರ ಠಾಣೆ ಪೊಲೀಸರು ಬಿಗಿ ಭದ್ರತೆ ಒದಗಿಸಲಿದ್ದಾರೆ.

ನಗರ ಪೊಲೀಸ್ ವ್ಯಾಪ್ತಿಯೊಳಗೆ ನಗರ ಪೊಲೀಸರು ಭದ್ರತೆ ಮುಂದುವರೆಸಲಿದ್ದಾರೆ. ಎಸಿಪಿ ಹಾಗೂ ಪೊಲೀಸ್ ಇನ್ಸ್‌ಪೆಕ್ಟರ್‌ಗಳ ನೇತೃತ್ವದಲ್ಲಿ ಸಿಎಆರ್, ಕೆಎಸ್‌ಆರ್‌ಪಿ, ಸಶಸ್ತ್ರ ಮೀಸಲು ಪಡೆಯೊಂದಿಗೆ ನಗರ ಪೊಲೀಸರು, ಆಯಿಷ್, ಚಾಮುಂಡಿಬೆಟ್ಟ, ರ‍್ಯಾಡಿಸನ್ ಬ್ಲೂ ಹೋಟೆಲ್ ಹಾಗೂ ಅರಮನೆಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ರಕ್ಷಣೆ ನೀಡಲಿದ್ದಾರೆ.

ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಡಿಸಿಪಿ ಸುಂದರ್‌ರಾಜ್ ನೇತೃತ್ವದಲ್ಲಿ ಐವರು ಸಂಚಾರ ಠಾಣೆಯ ಇನ್ಸ್‌ಪೆಕ್ಟರ್, 11 ಸಬ್ ಇನ್ಸ್ ಪೆಕ್ಟರ್, 29 ಎಎಸ್‌ಐ, 300 ಪೇದೆ ಹಾಗೂ 90 ಮಂದಿ ಹೋಮ್‌ಗಾರ್ಡ್ ಸೇರಿದಂತೆ 435 ಸಿಬ್ಬಂದಿಗಳನ್ನು ರಾಷ್ಟ್ರಪತಿ ಗಳ ವಾಹನ ಸುಗಮ ಸಂಚಾರಕ್ಕೆ ಆಯ್ದ ಸ್ಥಳಗಳಲ್ಲಿ ಕರ್ತವ್ಯ ನಿರ್ವಹಿಸಲಿದ್ದಾರೆ.

ಈ ಸಂಚಾರ ಪೊಲೀಸ್ ಅಧಿಕಾರಿ ಮತ್ತು ಪೊಲೀಸರು ನಾಳೆ(ಸೆ.1) ಬೆಳಗ್ಗಿನಿಂದಲೇ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಿಂದ ಚಾಮರಾಜ ಜೋಡಿ ರಸ್ತೆಯಿಂದ ಮೈಸೂರಿನ ಆಯಿಷ್ ಸಂಸ್ಥೆವರೆಗೆ, ಆಯಿಷ್‌ನಿಂದ ರ‍್ಯಾಡಿಸನ್ ಬ್ಲೂ ಹೋಟೆಲ್ ಹಾಗೂ ಚಾಮುಂಡಿಬೆಟ್ಟದವರೆಗೆ ಕರ್ತವ್ಯ ನಿರ್ವಹಿಸಲಿದ್ದಾರೆ. ಸೆ.2ರಂದು ರ‍್ಯಾಡಿಸನ್ ಬ್ಲೂ ಹೋಟೆಲ್‌ನಿಂದ ಮೈಸೂರು ಅರಮನೆ ಹಾಗೂ ಮಂಡಕಳ್ಳಿ ವಿಮಾನ ನಿಲ್ದಾಣದವರೆಗೂ ಕಟ್ಟುನಿಟ್ಟಾಗಿ ಕರ್ತವ್ಯ ನಿರ್ವಹಿಸುವಂತೆ ಸ್ಥಳ ನಿಯೋಜನೆ ಮಾಡಲಾಗಿದೆ.

ಮೈಸೂರಿಗೆ ಅಗ್ರ ಸ್ಥಾನ

ಸೇರಿದಂತೆ ಒಟ್ಟು 51,682 ಇ–ಖಾತಾಗಳನ್ನು ನೀಡಲಾಗಿದೆ. ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ನೋಂದಣಿಯಾಗಿರುವ 1,50,671 ಆಸ್ತಿಗಳಲ್ಲಿ 1,22,268 ಎ–ಖಾತಾ ಹಾಗೂ 28,389 ಬಿ–ಖಾತಾಗಳಾಗಿವೆ ಎಂದು ಪಾಲಿಕೆ ಆಯುಕ್ತ ಎಸ್.ಜಿ.ಸೋಮಶೇಖರ್ ತಿಳಿಸಿದ್ದಾರೆ. ಇ–ಖಾತಾಗೆ ಸಂಬಂಧಿಸಿದ ಎಲ್ಲಾ ಅರ್ಜಿಗಳನ್ನು ನಗರ ವ್ಯಾಪ್ತಿಯಲ್ಲಿ ಕರ್ನಾಟಕ ಒನ್ ಕೇಂದ್ರಗಳಲ್ಲಿ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ಒನ್ ಕೇಂದ್ರಗಳಲ್ಲಿ ಸಲ್ಲಿಸಬಹುದು ಎಂದು ಸಲಹೆ ನೀಡಿದ್ದಾರೆ. ಮೈಸೂರಿನಲ್ಲಿ ಇ–ಖಾತಾ ಪ್ರಕ್ರಿಯೆಯನ್ನು ಸುಗುಮಗೊಳಿಸಲು ಪ್ರತಿ ಶುಕ್ರವಾರ ಇ–ಖಾತಾ ಜನ ಸ್ಪಂದನವನ್ನು ಆಯೋಜಿಸಲಾಗುತ್ತಿದೆ. ಇದರಿಂದ ಮೈಸೂರಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಇ–ಖಾತಾ ವಿತರಣೆಯಾಗುತ್ತಿದೆ ಎಂದು ಸೋಮಶೇಖರ್ ತಿಳಿಸಿದ್ದಾರೆ.

ನಗರ ಪ್ರದೇಶಗಳ ಆಸ್ತಿಗಳ ಅಕ್ರಮ ನೋಂದಣಿಯನ್ನು ತಡೆಗಟ್ಟುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಫೆಬ್ರವರಿಯಲ್ಲಿ ನಡೆದ ವಿಧಾನಸಭಾ ಅಧಿವೇಶನದಲ್ಲಿ ಆಸ್ತಿ ನೋಂದಣಿಗೆ ಸಂಬಂಧಿಸಿದಂತೆ (ಕರ್ನಾಟಕ ತಿದ್ದುಪಡಿ) ಮಸೂದೆ ಅಂಗೀಕರಿಸಿತು. ಇದರಿಂದ ಕಾಗದ ಅಥವಾ ಕೈ ಬರಹದ ಖಾತೆಯನ್ನು ಮುಕ್ತಗೊಳಿಸಿ ಇದನ್ನು ಎಲೆಕ್ಟ್ರಾನಿಕ್ ದಾಖಲೆ (ಡಿಜಿಟಲೀಕರಣ) ಗಳಾಗಿ ಮಾರ್ಪಡಿಸಲಾಯಿತು. ಇ–ಖಾತಾ ಇಲ್ಲದಿದ್ದರೆ ನಿವೇಶನ ಮತ್ತು ಮನೆಗಳನ್ನು ನೋಂದಣಿ ಮಾಡುವಂತಿಲ್ಲ ಎಂದು ಸರ್ಕಾರ ಉಪ ನೋಂದಣಿ ಕಚೇರಿಗಳಿಗೆ ಕಟ್ಟು ನಿಟ್ಟಿನ ಆದೇಶ ನೀಡಿತು. ಅಲ್ಲದೆ ಆಸ್ತಿಗಳ ಖರೀದಿದಾರರು ಹಾಗೂ ಮಾರಾಟಗಾರರ ಉಪಸ್ಥಿತಿ ಇಲ್ಲದೆ ಆಸ್ತಿಗಳ ನೋಂದಣಿ ಮಾಡುವಂತಿಲ್ಲ ಎಂದು ಕಾನೂನುಬದ್ಧವಾಗಿ ತಾಕೀತುಗೊಳಿಸಲಾಯಿತು. ಅಲ್ಲದೆ ಆಸ್ತಿಗಳ ನೋಂದಣಿಯನ್ನು ಸರಳಿಕರಣಗೊಳಿಸಲಾಯಿತು. ಮೈಸೂರು ನಗರ ವ್ಯಾಪ್ತಿಯಲ್ಲಿ ಆಸ್ತಿಗಳ ದಾಖಲೆಗಳನ್ನು ರಚನೆ ಮಾಡಲು ಹಾಗೂ ಹಕ್ಕುಗಳನ್ನು ವರ್ಗಾವಣೆ ಮಾಡಲು ಮೈಸೂರು ಪಾಲಿಕೆಯಲ್ಲಿ ಇ–ಆಸ್ತಿ ಸಾಫ್ಟ್‌ವೇರ್ ಬಳಕೆಯನ್ನು ಕಡ್ಡಾಯಗೊಳಿಸಲಾಗಿದೆ. ಮೈಸೂರು ನಗರಪಾಲಿಕೆಯ ಎಲ್ಲಾ ವಲಯ ಕಚೇರಿಗಳಲ್ಲಿ ಮೊದಲು ಅರ್ಜಿ ನೀಡಿದವರಿಗೆ ಆದ್ಯತೆ ನಿಯಮದಂತೆ ಇಆಸ್ತಿ ವಿಲೇವಾರಿ ಮಾಡಲು ಸಮಯ ನಿಗದಿ ಮಾಡಲಾಗಿದೆ. ಆಸ್ತಿ ಮಾಲೀಕರು ಇ–ಖಾತಾ ಪಡೆಯಲು ಕರ್ನಾಟಕ ಒನ್ ಹಾಗೂ ವಲಯ ಕಚೇರಿಯ ಸಹಾಯವಾಣಿಗಳಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

ಎಸ್‌ಟಿಗೆ ಸೇರಿಸಲು ಶೀಘ್ರವೇ ಕೇಂದ್ರಕ್ಕೆ ಶಿಫಾರಸು

ಉಪ್ಪಾರ ಸಮುದಾಯ ಭವನಕ್ಕೆ ಗುದ್ದಲಿ ಪೂಜೆ ನೆರವೇರಿಸಲಾಗಿದೆ. 6 ಕೋಟಿ ವೆಚ್ಚದಲ್ಲಿ ಸಮುದಾಯ ಭವನ ನಿರ್ಮಿಸಲು ಉದ್ದೇಶಿಸಲಾಗಿದೆ. ಅದನ್ನು ಪೂರ್ಣಗೊಳಿಸಲು ಅತಿಹೆಚ್ಚಿನ ಅನುದಾನವನ್ನು ನೀಡಬೇಕು ಎಂದು ಮನವಿ ಮಾಡಿದರು.

ಚಾಮರಾಜನಗರ ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಮಲ್ಲೆ ಮಹದೇಶ್ವರ ಬೆಟ್ಟದಲ್ಲಿ ಉಪ್ಪಾರ ಸಮುದಾಯವು ಎಣ್ಣೆ–ಮಜ್ಜನ ಸೇವೆಯನ್ನು ನಡೆಸಿಕೊಂಡು ಬರುತ್ತಿದ್ದರು, ಅಭಿವೃದ್ಧಿ ಪ್ರಾಧಿಕಾರ ರಚನೆ ನಂತರ ಈ ಸೇವೆಗೆ ನಿರ್ಬಂಧ ಹೇರಲಾಗಿದ್ದು, ಸರ್ಕಾರ ಸಮುದಾಯದ ಸೇವೆಗೆ ಅನುವು ಮಾಡಿಕೊಡಬೇಕು. ಜೊತೆಗೆ ನಾನು ಸಚಿವನಾಗಿದ್ದ ವೇಳೆ ಚಾಮರಾಜನಗರ ಮತ್ತು ಮೈಸೂರು ಜಿಲ್ಲಾದ್ಯಂತ ಉಪ್ಪಾರ ಸಮುದಾಯ ಭವನಗಳಿಗೆ ಅನುದಾನ ನೀಡಿದ್ದೆ. ಅದು ಒಂದು ಕಂತು ಮಾತ್ರ ಬಿಡುಗಡೆಗೊಂಡು ಕಾಮಗಾರಿ ಅಪೂರ್ಣಗೊಂಡಿದೆ ಅವುಗಳನ್ನು ಪೂರ್ಣಗೊಳಿಸಲು ಸರ್ಕಾರ ಅನುದಾನ ಬಿಡುಗಡೆ ಮಾಡಿ ಕೊಡಬೇಕೆಂದು ಮನವಿ ಮಾಡಿದರು.

ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಮಾತನಾಡಿ, ಉಪ್ಪರ ಸಮುದಾಯ ಕಾಂಗ್ರೆಸ್ ಸರ್ಕಾರಕ್ಕೆ ಅತಿ ಹೆಚ್ಚಿನ ಬೆಂಬಲ ನೀಡುತ್ತಾ ಬಂದಿದೆ, ಉಪ್ಪಾರ ಸಮುದಾಯದ ಅಭಿವೃದ್ಧಿಗೆ ನಮ್ಮ ಸರ್ಕಾರ ಆದ್ಯತೆ ನೀಡಲಾಗಿದ್ದು ಕಳೆದ ಎರಡುವರೆ ವರ್ಷಗಳಲ್ಲಿ ಉಪ್ಪಾರ ಸಮುದಾಯದ ಬೀದಿಗಳ ಅಭಿವೃದ್ಧಿಗಾಗಿ ನಮ್ಮ ಸರ್ಕಾರ 34 ಕೋಟಿ 24 ಲಕ್ಷ ಅನುದಾನ ಬಿಡುಗಡೆಗೊಳಿಸಿದೆ ಎಂದರು.

ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ 2.25 ಕೋಟಿ ವೆಚ್ಚದಲ್ಲಿ ಉಪ್ಪಾರ ಸಮುದಾಯ ಭವನದ ನಿರ್ಮಾಣ ಕಾಮಗಾರಿಗೆ ರಿಮೋಟ್ ಒತ್ತುವ ಮೂಲಕ ಶಂಕುಸ್ಥಾಪನೆ ನೆರವೇರಿಸಿದರು. ಪುರುಷೋತ್ತಮಾನಂದಪುರಿ ಸ್ವಾಮೀಜಿ ಆಶೀರ್ವಚನ ನೀಡಿದರು. ಸಮಾರಂಭದಲ್ಲಿ ಸಚಿವ ಕೆ.ವೆಂಕಟೇಶ್, ಶಾಸಕರಾದ ಗಣೇಶ್ ಪ್ರಸಾದ್, ಅನಿಲ್ ಚಿಕ್ಕಮಾದು, ಎ.ಆರ್.ಕೃಷ್ಣಮೂರ್ತಿ, ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ನಗರಸಭಾ ಅಧ್ಯಕ್ಷ ಶ್ರೀಕಂಠಸ್ವಾಮಿ, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ಕಾಡ ಅಧ್ಯಕ್ಷ ಮರಿಸ್ವಾಮಿ, ವಾಲ್ಮೀಕಿ ನಿಗಮ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕುರಹಟ್ಟಿ ಮಹೇಶ್, ಶಂಕರ್, ಶ್ರೀಕಂಠನಾಯಕ, ಉಪ್ಪಾರ ಸಮುದಾಯದ ಜಿಲ್ಲಾಧ್ಯಕ್ಷ ಕರಳಾಪುರ ನಾಗರಾಜು, ಮುಖಂಡರಾದ ಮೂಗಶೆಟ್ಟಿ, ಮಹದೇವು, ರಾಜು, ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ, ತಹಸಿಲ್ದಾರ್ ಶಿವಕುಮಾರ್ ಕಾಸ್ನೂರು, ತಾಪಂ ಇಓ ಜೆರಾಲ್ಡ್ ರಾಜೇಶ್, ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

ಡಿವೈಎಸ್‌ಪಿ ಕೆ.ಎನ್.ಯಶವಂತ್ ಕುಮಾರ್‌ಗೆ ರಾಷ್ಟ್ರಪತಿ ಪ್ರಶಸ್ತಿ ಪ್ರದಾನ


ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್‌ರಿಂದ ರಾಷ್ಟ್ರಪತಿ ಪದಕ ಸ್ವೀಕಾರ

ಬೆಂಗಳೂರು, ಆ.31– ರಾಜಭವನದಲ್ಲಿ ಶನಿವಾರ ನಡೆದ ಅದ್ದೂರಿ ಸಮಾರಂಭದಲ್ಲಿ ಸಿಐಡಿ ಸೈಬರ್ ವಿಭಾಗದ ಡಿವೈಎಸ್‌ಪಿ ಕೆಎನ್.ಯಶವಂತ್‌ಕುಮಾರ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಉಪಸ್ಥಿತಿಯಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ರಾಷ್ಟ್ರಪತಿ ಪದಕ ಪ್ರಧಾನ ಮಾಡಿದರು.

2001ನೇ ಸಾಲಿನಲ್ಲಿ ಪಿಎಸ್‌ಐ (ಸಿವಿಲ್) ಆಗಿ ಸೇವೆಗೆ ಸೇರಿದ ಕೆ.ಎನ್.ಯಶವಂತ್ ಕುಮಾರ್ ಅವರು ಕೊಡಗು ಜಿಲ್ಲೆಯ ವೀರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆ ಸಬ್ ಇನ್ಸ್‌ಪೆಕ್ಟರ್ ಆಗಿ ಕರ್ತವ್ಯದಲ್ಲಿದ್ದಾಗ ಬಿಳಗುಂದ ಗ್ರಾಮದ ಬಳಿಯ ಕಾಫಿ ತೋಟದ ಮಧ್ಯಭಾಗದಲ್ಲಿ ಅಕ್ರಮವಾಗಿ ಸುಮಾರು 8 ಎಕರೆ ವ್ಯಾಪ್ತಿಯಲ್ಲಿ ಬೆಳೆದಿದ್ದ ಗಾಂಜಾ ವಶಪಡಿಸಿಕೊಂಡು ಆರೋಪಿಗಳನ್ನು ಬಂಧಿಸುವುದರೊಂದಿಗೆ ಅವರ ಅಪರಾಧ ಬೇಟೆ ಆರಂಭವಾಯಿತು.

ಮೈಸೂರು ನಗರದ ಮಂಡಿ ಠಾಣಾ ವ್ಯಾಪ್ತಿಯಲ್ಲಿ ಕೆಲಸ ಮಾಡುವ ಅವಧಿಯಲ್ಲಿ ರಾತ್ರಿ ವೇಳೆ ಕರ್ತವ್ಯನಿರತ ಪೊಲೀಸರನ್ನು ಕೊಲೆಗೈಯ್ಯಲು ಯತ್ನಿಸಿದ ದರೋಡೆಕೋರರ ತಂಡವನ್ನು ಬೆನ್ನತ್ತಿ, ಹತ್ತು ಸುತ್ತು ಗುಂಡು ಹಾರಿಸಿ ಸಿನಿಮೀಯ ರೀತಿಯಲ್ಲಿ ಖದೀಮರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದರು. 2010ನೇ ಸಾಲಿನಲ್ಲಿ 72 ಆರೋಪಿಗಳನ್ನು ಬಂಧಿಸಿ 111 ಪ್ರಕರಣಗಳನ್ನು ಪತ್ತೆ ಹಚ್ಚಿ ರೂ. 1,58,30,500 ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡ ಹೆಗ್ಗಳಿಕೆ ಇವರದ್ದು. ಇದರ ಜೊತೆಗೆ ಸದರಿ ಮಾಲಿನ ಪೈಕಿ ರೂ. 1,45,00,000/– ಮೌಲ್ಯದ ವಸ್ತುಗಳನ್ನು ನ್ಯಾಯಾಲಯದ ಅನುಮತಿ ಪಡೆದು ವಾರಸುದಾರರಿಗೆ ಹಿಂದಿರುಗಿಸಿದ್ದರು. 2011ನೇ ಸಾಲಿನಲ್ಲಿ 35 ಆರೋಪಿಗಳನ್ನು ಬಂಧಿಸಿ, 46 ಪ್ರಕರಣಗಳನ್ನು ಪತ್ತೆ ಹಚ್ಚಿದ್ದರು. 97,73,000/– ಮೌಲ್ಯದ ಮಾಲನ್ನು ಅಮಾನತ್ತುಪಡಿಸಿಕೊಂಡು 26 ಪ್ರಕರಣಗಳಲ್ಲಿ ನ್ಯಾಯಾಲಯದ ಅನುಮತಿ ಪಡೆದು ವಾರಸುದಾರರಿಗೆ ಹಿಂದಿರುಗಿಸಿದ್ದರು.

ಸೈಬರ್ ಕ್ರೈಂನಲ್ಲಿ ಕ್ಲಿಷ್ಟ ಪ್ರಕರಣ ಭೇದಿಸಿದ ಹೆಗ್ಗಳಿಕೆ: ಯಶವಂತ್ ಅವರ ತೀಕ್ಷ್ಣ ಮತಿಗೆ ಸಾಕ್ಷಿ ಅವರು ಸೈಬರ್ ವಿಭಾಗದಲ್ಲಿ ಮಾಡಿದ ಕೆಲಸಗಳೇ ಸಾಕ್ಷಿ. ಮಾಹಿತಿ ತಂತ್ರಜ್ಞಾನ ಯುಗದ ಅಪರಾಧಗಳಾದ ಸೈಬರ್ ಅಪರಾಧ ಪ್ರಕರಣಗಳಲ್ಲಿ ದಸ್ತಗಿರಿ ಸೇರಿದಂತೆ ತನಿಖೆಯನ್ನು ನಿರ್ವಹಿಸಿ ಪ್ರಕರಣಗಳಲ್ಲಿ ನ್ಯಾಯಾಲಯದಿಂದ ಆರೋಪಿಗಳಿಗೆ ಶಿಕ್ಷೆಯಾಗುವಂತೆ, ಗುಣಾತ್ಮಕ ಫಲಿತಾಂಶವನ್ನು ದೊರಕಿಸುವಲ್ಲಿ ಹಾಗೂ ಸಾರ್ವಜನಿಕರಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ–ರಕ್ಷಣೆಯ ಸಂಕೇತ ಎಂಬ ಜನಸ್ನೇಹಿ ಅಭಿಪ್ರಾಯವನ್ನು ಮೂಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕೇಂದ್ರ ಗುಪ್ತಚರ ಇಲಾಖೆ ಹಾಗೂ ದೆಹಲಿ, ಉತ್ತರ ಪ್ರದೇಶ, ಮುಂಬೈನ ಭಯೋತ್ಪಾದನಾ ನಿಗ್ರಹ ದಳದೊಂದಿಗೆ ಕೆಲಸ ಮಾಡಿ ಉಗ್ರಗಾಮಿ ಸಂಘಟನೆಗಳಾದ ಅಲ್ ಖೈದಾ, ಐಎಸ್‌ಐಎಸ್, ಬೋಡೋ–ನಾಗಾ ಸಂಘಟನೆಯೊಂದಿಗೆ ಗುರುತಿಸಿಕೊಂಡು ದೇಶ ವಿರೋಧಿ ಕೃತ್ಯದಲ್ಲಿ ಭಾಗಿಯಾದ ಸುಮಾರು 20 ಆರೋಪಿಗಳನ್ನು ಬಂಧಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

Data Security Council of India (DSCI) Cyber Crime Investigation Manual (Third Edition) ಸಂಪುಟ ರಚನೆ ಮೂಲಕ ಗಮನ ಸೆಳೆದಿರುವ ಯಶವಂತ್, ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ, 2022ನೇ ಸಾಲಿನ ಗಣರಾಜ್ಯೋತ್ಸದ ದಿನಾಚರಣೆಯ ಶ್ಲಾಘನೀಯ ಸೇವಾ ಪದಕಕ್ಕೆ ಪಾತ್ರರಾಗಿದ್ದಾರೆ.

ಯಶವಂತ್‌ಕುಮಾರ್, ಅಪರೂಪ ವ್ಯಕ್ತಿತ್ವದ ಸ್ನೇಹಜೀವಿ ಹಾಗೂ ದಕ್ಷ ಅಧಿಕಾರಿ. ಅವರ ಸಾಧನೆಗೆ 'ಲಾ ಗೈಡ್' ಕನ್ನಡ ಕಾನೂನು ಪತ್ರಿಕೆ ಬಳಗ ಅಭಿನಂದನೆ ಸಲ್ಲಿಸಿದೆ.

ರೀಲ್ಸ್ ಸ್ಪಾಟ್ ಆಯಿತು ಮೈಸೂರು ನಗರ ಪೊಲೀಸ್ ಕಮಿಷನರ್ ಕಚೇರಿ ಆವರಣ

● ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ವೈರಲ್ ● ದಂಪತಿ ರೀಲ್ಸ್ ಶೂಟ್ ಮಾಡುವಾಗ ಪೊಲೀಸರು ಏನು ಮಾಡುತ್ತಿದ್ದರು? ● ನೆಟ್ಟಿಗರ ವ್ಯಾಪಕ ಆಕ್ರೋಶ

ಮೈಸೂರು, ಆ.31(ಎಂಟಿವೈ)–ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿ ಕಟ್ಟಡದಲ್ಲಿ ದಂಪತಿಯೊಬ್ಬರು ರೀಲ್ಸ್ ಮಾಡಿ, ಇನ್‌ಸ್ಟಾಗ್ರಾಂ ಸೇರಿದಂತೆ ವಿವಿಧ ಸಾಮಾಜಿಕ ಜಾಲ ತಾಣಗಳಲ್ಲಿ ಅಪ್‌ಲೋಡ್ ಮಾಡಿದ್ದು ಸಾರ್ವಜನಿಕ ವಲಯದಲ್ಲಿ ಟೀಕೆಗೆ ಗ್ರಾಸವಾಗಿದೆ.

ಮೈಸೂರಿನ ನಜರ್‌ಬಾದ್‌ನಲ್ಲಿರುವ ನಗರ ಪೊಲೀಸ್ ಆಯುಕ್ತರ ಹೊಸ ಕಚೇರಿಯ ಕಟ್ಟಡದಲ್ಲಿ ಸೀರೆ ಅಂಗಡಿ ಮಾಲೀಕರಾಗಿರುವ ಈ ದಂಪತಿ 'ಕಾಯಿಸುವ ಹುಡುಗಿ ಯಾರ ನೋಯಿಸಬಾರದು' ಗೀತೆಗೆ ವೀಡಿಯೋ ಚಿತ್ರೀಕರಣ ಮಾಡಿ ಇನ್‌ಸ್ಟಾಗ್ರಾಂ ಸೇರಿದಂತೆ ಸಾಮಾಜಿಕ ಜಾಲ ತಾಣಗಳಲ್ಲಿ ರೀಲ್ಸ್ ಅಪ್‌ಲೋಡ್ ಮಾಡಿದ್ದಾರೆ. ಇದರಿಂದ ನೆಟ್ಟಿಗರು ಕಿಡಿಕಾರಿದ್ದು ಆಕ್ರೋಶ ಹೊರ ಹಾಕಿದ್ದಾರೆ.

ಸಾರ್ವಜನಿಕ ಸ್ಥಳ, ಸರ್ಕಾರಿ ಕಚೇರಿ ಹಾಗೂ ಅರಮನೆ ಸೇರಿದಂತೆ ವಿವಿಧೆಡೆ ಅನುಮತಿ ಇಲ್ಲದೆ ವಿಡಿಯೋ ಚಿತ್ರೀಕರಣ ಮಾಡದಂತೆ ನಿಷೇಧವಿದ್ದರೂ ಈ ಜೋಡಿ ಪೊಲೀಸ್ ಆಯುಕ್ತರ ಕಚೇರಿ ಕಟ್ಟಡದ ಪ್ರಾಂಗಣದಲ್ಲಿ ನಿರ್ಭಯವಾಗಿ ರೀಲ್ಸ್‌ಗಾಗಿ ವಿಡಿಯೋ ಮಾಡಿದ್ದಾರೆ. ಪೊಲೀಸ್ ಆಯುಕ್ತರ ಕಟ್ಟಡವೇ ರೀಲ್ಸ್ ಸ್ಪಾಟ್ ಆಗಿ ಮಾರ್ಪಟ್ಟಿದೆಯಾ? ಈ ದಂಪತಿ ರೀಲ್ಸ್ ಶೂಟ್ ಮಾಡುವಾಗ ಪೊಲೀಸರು ಏನು ಮಾಡುತ್ತಿದ್ದರು? ಎಂದು ನೆಟ್ಟಿಗರು ಕಿಡಿಕಾರಿದ್ದು, ಪೊಲೀಸ್ ಇಲಾಖೆಯ ನಿರ್ಲಕ್ಷ್ಯದ ಬಗ್ಗೆ ಆಕ್ಷೇಪ ಎತ್ತಿದ್ದಾರೆ.

ಈ ಸಂಬಂಧ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಪೊಲೀಸ್ ಆಯುಕ್ತರ ಕಚೇರಿ ಆವರಣದಲ್ಲಿ ಕೆಲವರು ವಿಡಿಯೋ ಚಿತ್ರೀಕರಣ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ರೀಲ್ಸ್ ಆಗಿ ಅಪ್‌ಲೋಡ್ ಮಾಡಿರುವುದು ನನ್ನ ಗಮನಕ್ಕೆ ಬಂದಿದೆ. ನಾನು ಕಚೇರಿಯಲ್ಲಿ ಇಲ್ಲದ ಸಂದರ್ಭದಲ್ಲಿ ವಿಡಿಯೋ ಚಿತ್ರೀಕರಣ ಮಾಡಲಾಗಿದೆ. ಇಂದು ಮುಖ್ಯಮಂತ್ರಿಗಳ ಭದ್ರತಾ ಕಾರ್ಯದೊಂದಿಗೆ ಸೋಮವಾರ ಮತ್ತು ಮಂಗಳವಾರ ರಾಷ್ಟ್ರಪತಿಗಳ ಭದ್ರತಾ ಕಾರ್ಯದಲ್ಲಿ ತೊಡಗಿದ್ದು, ಆನಂತರ ವೈರಲ್ ಆಗಿರುವ ವಿಡಿಯೋ ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವುದರೊಂದಿಗೆ ಇಂತಹ ಘಟನೆ ಮರುಕಳಿಸದಂತೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.


ಮೈಸೂರಿನ ನಗರ ಪೊಲೀಸ್ ಆಯುಕ್ತರ ಕಚೇರಿ ಕಟ್ಟಡದಲ್ಲಿ ದಂಪತಿ ರೀಲ್ಸ್ ಮಾಡಿ ವೈರಲ್ ಆಗಿರುವ ಚಿತ್ರ

ವಿವಿಧ ಇಲಾಖೆಗಳಿಗೆ ಸಿಎ ನಿವೇಶನ ಮಂಜೂರಾತಿ ಪತ್ರ ಹಸ್ತಾಂತರ


ಮೈಸೂರು ಅಭಿವೃದ್ಧಿ ಪ್ರಾಧಿಕಾರ(ಎಂಡಿಎ)ದಿಂದ ಚೆಸ್ಕಾಂಗೆ ಹಂಚಿಕೆಯಾದ ಸಿಎ ನಿವೇಶನಗಳ ಮಂಜೂರಾತಿ ಪತ್ರಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಂದ ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ್ ರಾಜು ಸ್ವೀಕರಿಸಿದರು. ಈ ವೇಳೆ ಎಂಎಲ್‌ಸಿ ಡಾ.ಯತೀಂದ್ರ, ಚೆಸ್ಕಾಂ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ, ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ಎಂಡಿಎ ಆಯುಕ್ತ ಕೆ.ಆರ್.ರಕ್ಷಿತ್ ಇದ್ದರು.

ಮೈಸೂರು, ಆ.31– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಈಗಿನ ಮೈಸೂರು ಅಭಿವೃದ್ಧಿ ಪ್ರಾಧಿಕಾರ)ದಿಂದ 20 ವರ್ಷಗಳಿಂದ ಹಂಚಿಕೆಯಾಗದೆ ಬಾಕಿ ಇದ್ದ 63 ಸಾರ್ವಜನಿಕ ಸೌಲಭ್ಯ(ಸಿಎ) ನಿವೇಶನಗಳನ್ನು ಸರ್ಕಾರದ ವಿವಿಧ ಇಲಾಖೆಗಳಿಗೆ ಹಂಚಿಕೆ ಮಾಡಲಾಗಿದ್ದು, ಇವುಗಳ ಮಂಜೂರಾತಿ ಪತ್ರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮ್ಮ ಮೈಸೂರು ನಿವಾಸದಲ್ಲೇ ಭಾನುವಾರ ಸಂಬಂಧಪಟ್ಟ ಅಧಿಕಾರಿಗಳಿಗೆ ಹಸ್ತಾಂತರಿಸಿದರು.

ಚೆಸ್ಕಾಂಗೆ 23, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ತಲಾ 11, ಕೆಪಿಟಿಸಿಎಲ್‌ಗೆ 10, ಸಮಾಜ ಕಲ್ಯಾಣ ಇಲಾಖೆ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗೆ ತಲಾ 2, ಬೋಗಾದಿ ಪಟ್ಟಣ ಪಂಚಾಯ್ತಿ, ಸಣ್ಣ ನೀರಾವರಿ ಇಲಾಖೆ, ಮೈಸೂರು ಮಹಾನಗರ ಪಾಲಿಕೆ ಹಾಗೂ ಅಗ್ನಿ ಶಾಮಕ ಇಲಾಖೆಗೆ ತಲಾ 1 ನಿವೇಶನ ಸೇರಿ ಒಟ್ಟು 63 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಜೂರಾತಿ ಪತ್ರ ಹಸ್ತಾಂತರಿಸಿದ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಕೆ.ಆರ್.ರಕ್ಷಿತ್ ಮತ್ತಿತರರಿದ್ದರು.

ಹುಟ್ಟುಹಬ್ಬದ ಶುಭಾಶಯ



ಚಾಮರಾಜನಗರ ಲೋಕಸಭಾ ಕ್ಷೇತ್ರದ ಸಂಸದ ಸುನೀಲ್ ಬೋಸ್ ಅವರಿಗೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸಿ.ನರೇಂದ್ರ ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ಡಿಸಿಸಿ ಎಸ್‌ಟಿ ಘಟಕದ ಜಿಲ್ಲಾಧ್ಯಕ್ಷ ಮಹೇಶ್, ಗ್ರಾಮ ಪಂಚಾಯ್ತಿ ಸದಸ್ಯ ಸೀಗಳ್ಳಿ ಕುಮಾರ್, ಗ್ರಾಪಂ ಅಧ್ಯಕ್ಷ ಬಸವನಾಯಕ, ಇಲವಾಲ ಹೋಬಳಿ ಡಾ.ಬಿ.ಆರ್.ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಮಿತಿ ಅಧ್ಯಕ್ಷ ಚಿಕ್ಕನಳ್ಳಿ ಸಂತೋಷ್, ಚೆಲುವರಾಜು, ಮೋಗಣ್ಣ ಮತ್ತಿತರರಿದ್ದರು.

ವಿದ್ಯುತ್ ಕಂಬಕ್ಕೆ ಬೈಕ್ ಡಿಕ್ಕಿ; ಯುವಕ ಸಾವು




ಮೈಸೂರು, ಆ.31– ವಿದ್ಯುತ್ ಕಂಬಕ್ಕೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಯುವಕನೊಬ್ಬ ಸಾವನ್ನಪ್ಪಿರುವ ಘಟನೆ ಮೈಸೂರಿನ ರಿಂಗ್ ರಸ್ತೆಯಲ್ಲಿ ನಡೆದಿದೆ. ಹೆಬ್ಬಾಳು ನಿವಾಸಿ ಸಿದ್ದಪ್ಪ ಅವರ ಪುತ್ರ ಯೋಗೇಶ್(23) ಅಪಘಾತದಲ್ಲಿ ಮೃತಪಟ್ಟ ಯುವಕ. ಶನಿವಾರ ತಡರಾತ್ರಿ ಕೆಸರೆಯಿಂದ ಮನೆಗೆ ಹೋಗುವಾಗ ಉನ್ನತಿನಗರದ ಬಳಿ ರಿಂಗ್‌ರಸ್ತೆಯ ವಿದ್ಯುತ್ ಕಂಬಕ್ಕೆ ಬೈಕ್ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರವಾಗಿ ಗಾಯಗೊಂಡಿದ್ದ ಯೋಗೇಶ್‌ನನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ಬೆಳಗ್ಗೆ ಸಾವನ್ನಪ್ಪಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿ ಕೊಂಡು ಮುಂದಿನ ಕ್ರಮ ಕೈಗೊಂಡಿರುವುದಾಗಿ ಎನ್.ಆರ್.ಸಂಚಾರ ಠಾಣೆಗೆ ಇನ್ಸ್‌ಪೆಕ್ಟರ್ ರೇಖಾ ಬಾಯಿ ತಿಳಿಸಿದ್ದಾರೆ.

ಜಿಟಿಡಿ ನಿವಾಸಕ್ಕೆ ಸಚಿವ ಜಮೀರ್ ಭೇಟಿ


ವಸತಿ, ಹಜ್ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್ ಅವರು ಭಾನುವಾರ ಮಧ್ಯಾಹ್ನ ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ನಿವಾಸಕ್ಕೆ ಭೇಟಿ ನೀಡಿ, ಕುಶಲೋಪರಿ ವಿಚಾರಿಸಿದರು. ಈ ವೇಳೆ ಸಚಿವರನ್ನು ಜಿಟಿಡಿ ಆತ್ಮೀಯವಾಗಿ ಅಭಿನಂದಿಸಿದರು.

ಸಂಸದ ಸುನೀಲ್ ಬೋಸ್‌ರಿಗೆ ಜನ್ಮದಿನದ ಶುಭಾಶಯ


ಮೈಸೂರು ತಾಲೂಕು ಹುಯಿಲಾಳು ಗ್ರಾಮದ ಶ್ರೀ ಮನೆ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ವತಿಯಿಂದ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ, ಚಾಮರಾಜನಗರ ಸಂಸದ ಸುನೀಲ್ ಬೋಸ್ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ಎಳನೀರು ಜಯರಾಮ, ಹುಯಿಲಾಳು ಮಂಜುನಾಥ್, ಪ್ರಸಾದ್, ತೋಷಿತ್ ರಾಮಸ್ವಾಮಿ ಉಪಸ್ಥಿತರಿದ್ದರು.

ಸಿಎಂ ಅಭಿನಂದಿಸಿದ ನಟ ರಾಮಚರಣ್


'ಪೆದ್ದಿ' ಚಿತ್ರದ ಚಿತ್ರೀಕರಣಕ್ಕಾಗಿ ಮೈಸೂರಿನಲ್ಲಿರುವ ತೆಲುಗು ಚಿತ್ರರಂಗದ ಖ್ಯಾತ ನಟ ರಾಮಚರಣ್ ಭಾನುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಗೌರವಿಸಿದರು. ಈ ವೇಳೆ ಸಚಿವ ಸಂತೋಷ್ ಲಾಡ್, ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, ಶಾಸಕ ಅನಿಲ್ ಚಿಕ್ಕಮಾದು ಮತ್ತಿತರರಿದ್ದರು.

ಪಟಾಕಿ ಸಿಡಿಸುವಾಗ ಶ್ರೀರಾಮಸೇನೆ ಮುಖಂಡನ ಕಣ್ಣಿಗೆ ತೀವ್ರ ಗಾಯ

ಮೈಸೂರು, ಆ.31(ಪಿಎಂ)– ಗಣೇಶ ಮೂರ್ತಿಗಳ ಸಾಮೂಹಿಕ ವಿಸರ್ಜನಾ ಮೆರವಣಿಗೆ ವೇಳೆ ಪಟಾಕಿ ಸಿಡಿಸುತ್ತಿದ್ದ ವ್ಯಕ್ತಿಯೊಬ್ಬರ ಕಣ್ಣಿಗೆ ತೀವ್ರ ಗಾಯವಾಗಿರುವ ಘಟನೆ ನಡೆದಿದೆ.

ಶ್ರೀರಾಮ ಸೇನೆ ಮೈಸೂರು ಜಿಲ್ಲಾಧ್ಯಕ್ಷ ಸಂಜಯ್ (52) ಗಾಯಗೊಂಡವರು. ಮೈಸೂರು ಸಾರ್ವಜನಿಕ ಗಣೇಶ ವಿಸರ್ಜನಾ ಸಮಿತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಬೃಹತ್ ಮೆರವಣಿಗೆಯು ಡಿ.ದೇವರಾಜ ಅರಸು ರಸ್ತೆಯಲ್ಲಿ ಸಾಗುತ್ತಿದ್ದ ವೇಳೆ ಈ ದುರ್ಘಟನೆ ನಡೆದಿದೆ.



ಇದೇ ರಸ್ತೆಯಲ್ಲಿರುವ ಆಂಜನೇಯ ಸ್ವಾಮಿ ದೇವಸ್ಥಾನ ಮುಂಭಾಗ ಇವರು ಪಟಾಕಿ ಸಿಡಿಸುತ್ತಿದ್ದಾಗ, ಬೆಂಕಿಯ ಕಿಡಿ ತಗುಲಿದ ಪರಿಣಾಮ ಇವರ ಬಲಗಣ್ಣಿಗೆ ತೀವ್ರ ಗಾಯವಾಗಿದೆ. ಸ್ಥಳದಲ್ಲಿದ್ದ ಪೊಲೀಸರು, ಕೂಡಲೇ ಆಟೋ ವ್ಯವಸ್ಥೆ ಮಾಡಿ ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ಕಳುಹಿಸಿಕೊಟ್ಟರು. ಪ್ರಥಮ ಚಿಕಿತ್ಸೆ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಅವರನ್ನು ಬೆಂಗಳೂರಿನ ಆಸ್ಪತ್ರೆಗೆ ಕರೆದೊಯ್ಯಲಾಗಿದೆ ಎಂದು ತಿಳಿದುಬಂದಿದೆ.

ಒಳಮೀಸಲಾತಿ ಕಲ್ಪಿಸಿದ ಸಿಎಂ ಸಿದ್ದರಾಮಯ್ಯರಿಗೆ ಮಾದಿಗ ಸಮುದಾಯದಿಂದ ಅಭಿನಂದನೆ


ಮೈಸೂರು ವಿಮಾನ ನಿಲ್ದಾಣದ ಬಳಿ ಆಯೋಜಿಸಿದ್ದ ಸರಳ ಸಮಾರಂಭದಲ್ಲಿ ಎಂಎಲ್‌ಸಿ ಡಾ.ಡಿ. ತಿಮ್ಮಯ್ಯ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಭಿನಂದಿಸಲಾಯಿತು.

ಮೈಸೂರು, ಆ.31– ಪರಿಶಿಷ್ಟ ಜಾತಿಯ ಮಾದಿಗ ಸಮುದಾಯಕ್ಕೆ ಒಳಮೀಸಲಾತಿ ಕಲ್ಪಿಸಿದ ಹಿನ್ನೆಲೆಯಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಭಿನಂದಿಸಲಾಯಿತು.

ಮೈಸೂರು ವಿಮಾನ ನಿಲ್ದಾಣದ ಹೊರಗೆ ಆಯೋಜಿಸಿದ್ದ ಸರಳ ಸಮಾರಂಭದಲ್ಲಿ ಮುಖ್ಯಮಂತ್ರಿಗಳಿಗೆ ಹೂವಿನ ಸುರಿಮಳೆಗೈದು, ಮೈಸೂರು ಪೇಟ ತೊಡಿಸಿ, ನೆನಪಿನ ಕಾಣಿಕೆ ನೀಡಿ ಸನ್ಮಾನಿಸಲಾಯಿತು. ಇದೇ ವೇಳೆ ಮಾದಿಗ ಸಮುದಾಯಕ್ಕೆ ಸಾಮಾಜಿಕ ನ್ಯಾಯ ಕಲ್ಪಿಸಿದ ಸಿದ್ದರಾಮಯ್ಯ ಅವರಿಗೆ ಜಯವಾಗಲಿ ಎಂದು ಘೋಷಣೆ ಕೇಳಿಬಂದಿತು.

ಈ ವೇಳೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಾಮಾಜಿಕ ನ್ಯಾಯದ ರಕ್ಷಣೆ ನಮ್ಮ ಜವಾಬ್ದಾರಿಯಾಗಿದೆ. ಪರಿಶಿಷ್ಟ ಜಾತಿ ಸಮುದಾಯದಲ್ಲಿ ಯಾರಿಗೂ ಅನ್ಯಾಯವಾಗದಂತೆ ಒಳಮೀಸಲಾತಿ ಕಲ್ಪಿಸಲಾಗಿದೆ. ನಮ್ಮ ಸರ್ಕಾರ ಕೊಟ್ಟ ಮಾತಿನಂತೆ ನಡೆದಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಾತನಾಡಿ, ಮೂವತ್ತು ವರ್ಷಗಳಿಂದ ನಿರಂತರವಾಗಿ ಹೋರಾಟ ಮಾಡಿಕೊಂಡು ಬಂದಿದ್ದರೂ ನಮ್ಮ ಕೂಗಿಗೆ ಯಾರು ಸ್ಪಂದಿಸಿರಲಿಲ್ಲ. ಸಿದ್ದರಾಮಯ್ಯ ಅವರಿಂದಾಗಿ ಒಳಮೀಸಲಾತಿ ದೊರೆತಿದೆ ಎಂದರು.

ಇದೇ ವೇಳೆ ಅನೇಕ ಮುಖಂಡರು ಮುಂದಿನ ದಿನಗಳಲ್ಲಿ ಡಾ.ಡಿ.ತಿಮ್ಮಯ್ಯ ಅವರಿಗೆ ಸಚಿವ ಸ್ಥಾನ ಕಲ್ಪಿಸಬೇಕೆಂದು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದರು. ಜಿಪಂ ಮಾಜಿ ಸದಸ್ಯೆ ಸುಧಾ ಮಹದೇವಯ್ಯ, ತಿ.ನರಸೀಪುರ ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಉಪಾಧ್ಯಕ್ಷ ಹುಣಸೂರು ಬಸವಣ್ಣ, ಆದಿ ಜಾಂಬವ ಸಮಿತಿ ಅಧ್ಯಕ್ಷ ಎಡತೊರೆ ನಿಂಗರಾಜು, ಸುನಂದಕುಮಾರ್, ಎಸ್.ನಾರಾಯಣ, ಚಾಮರಾಜನಗರದ ಎಂ.ಶಿವಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

ಪಾರಂಪರಿಕ ಸಂಗೀತೋತ್ಸವದಲ್ಲಿ ಯುವ ಗಾಯಕ ರಾಹುಲ್ ವೆಲ್ಲಾಲ್ ಶಾಸ್ತ್ರೀಯ ಸಂಗೀತ ಮೋಡಿ


ಸಂಗೀತೋತ್ಸವದಲ್ಲಿ ರಾಹುಲ್ ವೆಲ್ಲಾಲ್ ಶಾಸ್ತ್ರೀಯ ಸಂಗೀತ ಗಾಯನ ಮಾಡುತ್ತಿರುವುದು

ರವಿಶಂಕರ್ ವೆಲ್ಲಲ್ ಮತ್ತು ಹೇಮಾ ಸೂರ್ಯನಾರಾಯಣ ಅವರ ಪುತ್ರ ರಾಹುಲ್ ವೆಲ್ಲಾಲ್. ಮೂಲತಃ ಬೆಂಗಳೂರಿನ ಈ 18 ವರ್ಷದ ಯುವಕ ತನ್ನ ಗಾಯನ ಮೋಡಿಯಿಂದ ಇಂದು ಪ್ರಪಂಚದಾದ್ಯಂತ ತನ್ನ ಛಾಪು ಮೂಡಿಸಿದ್ದಾನೆ. ಯುಎಸ್‌ಎ, ಯುಕೆ, ಆಸ್ಟ್ರೇಲಿಯಾ, ಯುಎಇ ಸೇರಿದಂತೆ 10 ದೇಶಗಳಲ್ಲಿ ತನ್ನ ಗಾಯನ ಪ್ರದರ್ಶನ ನೀಡಿದ ಅತ್ಯಂತ 'ಕಿರಿಯ ಕರ್ನಾಟಕ ಸಂಗೀತಗಾರ' ಎಂಬ ಬಿರುದು ಪಡೆದಿರುವ ಈ ಯುವಕನ ಸಾಧನೆಯನ್ನು ಇಂಡಿಯಾ ಬುಕ್ ಆಫ್ ರೆಕಾರ್ಡ್ ಗುರುತಿಸಿದೆ.

ರಾಹುಲ್ ಅವರು ಯುವ ಕಲಾ ರತ್ನ, ಷಣ್ಮುಖ ಸಂಗೀತ ಶಿರೋಮಣಿ, ಯುವ ಕಲಾ ಭಾರತಿ, ಡೆಕ್ಕನ್ ಹೆರಾಲ್ಡ್ ಚೇಂಜ್ ಮೇಕರ್, ಬೈಜೂಸ್ ಯಂಗ್ ಜೀನಿಯಸ್, ರೈಸಿಂಗ್ ಸ್ಟಾರ್, ಎಂಎಸ್ ಸುಬ್ಬುಲಕ್ಷ್ಮಿ ಫೆಲೋಶಿಪ್ ಮತ್ತು ಇನ್ನೂ ಅನೇಕ ಪ್ರತಿಷ್ಠಿತ ಪ್ರಶಸ್ತಿಗಳಿಂದ ಗುರುತಿಸಲ್ಪಟ್ಟಿದ್ದಾರೆ. 2024ರಲ್ಲಿ ಚೆನ್ನೈನಲ್ಲಿ ಸಚ್ಚಿದಾನಂದ ತೀರ್ಥ ಮಹಾಸ್ವಾಮಿಜಿ ಅವರ 'ಬಿಲಾಸ್ಪುರ' ಮಠದ ಆಸ್ಥಾನ ವಿದ್ವಾನ್ ಆಗಿ ಗೌರವಿಸಲ್ಪಟ್ಟ ಅತ್ಯಂತ ಕಿರಿಯ ವ್ಯಕಿ ಎಂಬ ಹೆಗ್ಗಳಿಕೆಯೂ ಇವರ ಪಾಲಾಗಿದೆ.

ಮೈಸೂರು, ಆ.31(ವಿವಿಹೆಚ್)– ರಾಹುಲ್ ವೆಲ್ಲಾಲ್ ಎಂಬ ಯುವಕನ ಮಧುರ ಕಂಠದಿಂದ ಸೂಸಿದ ಶಾಸ್ತ್ರೀಯ ಸಂಗೀತದ ಮೋಡಿಗೆ ಸಂಗೀತೋತ್ಸವದಲ್ಲಿ ನೆರೆದಿದ್ದವರು ತಲೆ ತೂಗಿದರು.

ಮೈಸೂರಿನ ವಾಣಿವಿಲಾಸ ಮೊಹಲ್ಲಾದ (ವಿವಿ ಮೊಹಲ್ಲಾ) 8ನೇ ಕ್ರಾಸ್‌ನಲ್ಲಿ ಶ್ರೀ ಪ್ರಸನ್ನ ವಿದ್ಯಾ ಗಣಪತಿ ಮಹೋತ್ಸವ ಚಾರಿಟೆಬಲ್ ಟ್ರಸ್ಟ್ (ಎಸ್‌ಪಿವಿಜಿಎಂಸಿ ಟ್ರಸ್ಟ್) ವತಿಯಿಂದ ಆಯೋಜಿಸಿರುವ 64ನೇ ಪಾರಂಪರಿಕ ಸಂಗೀತೋತ್ಸವದ ಐದನೇ ದಿನದಂದು (ಭಾನುವಾರ) ಕರ್ನಾಟಕ ಶಾಸ್ತ್ರೀಯ ಸಂಗೀತದ ಅಲೆಯಲ್ಲಿ ಕಲಾ ರಸಿಕರು ತೇಲುವಂತೆ ಮಾಡಿತು.

ವೆಲ್ಲಾಲ್ ಅವರು ಶ್ರೀ ತಿರುವಟ್ರಿಯೂರ್ ತ್ಯಾಗಯ್ಯರ್ ಅವರ 'ಸ್ವಾಮಿ ದಯಾ ಜೂಡಾ' ಹಾಡನ್ನು ಕೇದರಗೌಳವರ್ಣ ರಾಗದ ಆದಿ ತಾಳದಲ್ಲಿ ಪ್ರಸ್ತುತಪಡಿಸುವ ಮೂಲಕ ತಮ್ಮ ಗಾಯನ ಆರಂಭಿಸಿದರು. ಬಳಿಕ ಶ್ರೀ ಎನ್.ಎಸ್ ರಾಮಚಂದ್ರನ್ ಅವರ 'ಶ್ರೀ ಮಹಾ ಗಣಪತಿ'ಯನ್ನು ಅಭೋಗಿ ರಾಗದ ಖಂದ ಚಾಪು ತಾಳದಲ್ಲಿ, ಮುತ್ತುಸ್ವಾಮಿ ದೀಕ್ಷಿತರ 'ಪಂಚಶತ ಪೀಠ ರೂಪಿಣಿ'ವನ್ನು ಅಭೇರಿ ರಾಗದ ಆದಿ ತಾಳದಲ್ಲಿ, ಪಟ್ನಂ ಸುಬ್ರಹ್ಮಣ್ಯ ಅಯ್ಯರ್ ಅವರ 'ಧನ್ಯುದೇವ್ವಾದೋ'ವನ್ನು ಮಲಯಮಾರುತ ರಾಗದ ಆದಿ ತಾಳದಲ್ಲಿ, ಶ್ಯಾಮ ಶಾಸ್ತ್ರಿ ಅವರ 'ಮರಿವೆರೆ ಗತಿ'ಯನ್ನು ಆನಂದಭೈರವಿ ರಾಗದ ಮಿಶ್ರ ಚಾಪು ತಾಳದಲ್ಲಿ, ಮುತ್ತಯ್ಯ ಭಾಗವತರ 'ಭುವನೇಶ್ವರೀಯ' ಗಾಯನವನ್ನು ಮೊಹನ ಕಲ್ಯಾಣಿ ರಾಗದ ಆದಿ ತಾಳದಲ್ಲಿ, ತ್ಯಾಗರಾಜ ಸ್ವಾಮಿ ಅವರ 'ಲಲಿತೆ ಶ್ರೀ'ಯನ್ನು ಭೈರವಿ ರಾಗದ ಆದಿ ತಾಳದಲ್ಲಿ, ಪುರಂದರದಾಸರ 'ಇರಬೇಕು ಹರಿದಾಸರ ಸಂಘ' ಗಾಯನವನ್ನು ಬಹುದ್ರಿ ರಾಗದ ಆದಿ ತಾಳದಲ್ಲಿ ಹಾಡುವ ಮೂಲಕ ಎಲ್ಲರ ಹುಬ್ಬೇರುವಂತೆ ಮಾಡಿದರು.

ವಲ್ಲಾಲ್ ಅವರಿಗೆ ಎಚ್.ಎನ್.ಭಾಸ್ಕರ್ (ಪಿಟೀಲು), ಸಾಯಿ ಗಿರಿಧರ್(ಮೃದಂಗ), ಜಿ.ಎಸ್.ರಾಮಾನುಜಂ (ಘಟಂ) ಸಾಥ್ ನೀಡಿ ನೆರೆದಿದ್ದವರನ್ನು ಸಾಂಸ್ಕೃತಿಕ ಲೋಕಕ್ಕೆ ಕೊಂಡೊಯ್ದರು.

ಜಾನಪದ ಗೀತೆಗಳ ಮೋಡಿ: ಇದಕ್ಕೂ ಮೊದಲು ಸುನೀತ ಚಂದ್ರಕುಮಾರ್ ನೇತೃತ್ವದಲ್ಲಿ ಮೈಸೂರಿನ ರಘುಲೀಲಾ ಸಂಗೀತ ಮಂದಿರದ ವಿದ್ಯಾರ್ಥಿಗಳು ಕನ್ನಡ ನಾಡಿನ ಸೊಗಡುಗಳಲ್ಲಿ ಒಂದಾದ ಜಾನಪದ ಗೀತೆಗಳನ್ನು ಹಾಡಿದರು. ಆ ಮೂಲಕ ತಮ್ಮ ಗಾಯನ ಮೋಡಿಯಿಂದ ನೆರೆದಿದ್ದವರನ್ನು ರಂಜಿಸಿದರು.

'ಕಲ್ಲ ಕೊಟ್ಟವ್ವಾಗ', 'ಸೋಜುಗಾದ ಸೂಜಿಮಲ್ಲಿಗೆ', 'ಗೆಜ್ಜೆ ಗಲ್ಲೆಂದಾವೋ', 'ಗೀಯಾ–ಗೀಯಾ' ಸೇರಿದಂತೆ ಹಲವು ಜಾನಪದ ಹಾಡುಗಳನ್ನು ಸಾಮೂಹಿವಾಗಿ ಹಾಡಿದರು. 'ಮುಂಗೊಂಡದ ಮಾದೇಶ್ವರಗೆ ಶರಣು ಶರಣಯ್ಯ' ಹಾಡಿಗೆ ನೆರೆದಿದ್ದ ಜನಸಮೂಹವೆಲ್ಲಾ ಚಪ್ಪಾಳೆ ತಟ್ಟುತ್ತಾ ಜೊತೆಯಲ್ಲಿ ಹಾಡು ಹಾಡಿದ್ದು ಕಂಡುಬಂದಿತು. ವೇದಿಕೆ ಮುಂಭಾಗ ಮಹಿಳಾ ಮಣಿಯರು ಮಾದಪ್ಪನ ಹಾಡಿಗೆ ಮೈಮರೆತು ಹೆಜ್ಜೆ ಹಾಕಿದರು.

ವಸಂತಿ ಶ್ರೀವತ್ಸ ನಿಜವಾಗಿಯೂ ಬದುಕಿದ್ದಾರೆಯೇ? ಹಾಗಾದರೆ ಎಲ್ಲಿದ್ದಾರೆ?

ಸುಜಾತ ಭಟ್ ಹೇಳಿಕೆ ಉಲ್ಲೇಖಿಸಿ ಸಹೋದರ ಮಾಳೇಟಿರ ವಿಜಯ್ ಪ್ರಶ್ನೆ

ಮಡಿಕೇರಿ, ಆ.31– ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ 2003ರಲ್ಲಿ ನಾಪತ್ತೆಯಾಗಿದ್ದಾಳೆ ಎನ್ನಲಾದ ಅನನ್ಯ ಭಟ್ ಎಂಬ ಯುವತಿ ತನ್ನ ಮಗಳಾಗಿದ್ದು, ಆಕೆಯ ಅಸ್ಥಿ ಪಂಜರವನ್ನು ಹುಡುಕಿ ಕೊಡಿ ಎಂದು ಸುಜಾತಾ ಭಟ್ ಎಂಬಾಕೆ ಬಿಡುಗಡೆ ಮಾಡಿರುವ ಫೋಟೋ ಅನನ್ಯ ಭಟ್ ಎಂಬಾಕೆಯದಲ್ಲ. ವಿರಾಜಪೇಟೆಯ ಕೆದಮಳ್ಳೂರು ಗ್ರಾಮ ಬೊಯಿಕೇರಿ ನಿವಾಸಿ ಮಾಳೇಟಿರ ವಸಂತಿ ಶ್ರೀವತ್ಸ ಎಂಬುವರ ಫೋಟೋವಾಗಿದೆ. ಆಕೆ ಸತ್ತಿಲ್ಲ, ಇನ್ನೂ ಜೀವಂತವಾಗಿದ್ದಾಳೆ ಎಂದು ವಿಶೇಷ ತನಿಖಾ ತಂಡದ ಮುಂದೆ ಸುಜಾತ ಭಟ್ ನೀಡಿರುವ ಹೇಳಿಕೆ ಸಂಪೂರ್ಣ ತನಿಖೆಯ ಮಜಲುಗಳನ್ನೇ ಬದಲಿಸುತ್ತಿದೆ. ಮಾತ್ರವಲ್ಲದೇ ಇಲ್ಲಿ ಸತ್ಯ ಯಾವುದು? ಬದುಕಿರೋದು ಯಾರು? ಸತ್ತವರು ಯಾರು? ಎನ್ನುವ ಪ್ರಶ್ನೆಗಳ ಸುತ್ತ ಅನುಮಾನಗಳು ಗಿರಕಿ ಹೊಡೆಯುತ್ತಿವೆ.

ಅನನ್ಯ ಭಟ್ ಅವರದ್ದು ಎನ್ನಲಾದ ಫೋಟೋ ಬೆಳಕಿಗೆ ಬಂದ ಬಳಿಕ ವಿರಾಜಪೇಟೆ ಕೆದಮಳ್ಳೂರು ನಿವಾಸಿ ಮಾಳೇಟಿರ ವಿಜಯ್ ಅವರು ಮಾಧ್ಯಮಗಳ ಜೊತೆ ಮಾತನಾಡಿ ಸುಜಾತ ಭಟ್ ಬಿಡುಗಡೆ ಮಾಡಿರುವ ಫೋಟೋ ನನ್ನ ಸಹೋದರಿ 2007ರ ಆಗಸ್ಟ್ 24ರಂದು ಕೊಳೆತ ಸ್ಥಿತಿಯಲ್ಲಿ ಕೆದಮಳ್ಳೂರು ಗ್ರಾಮದ ಬೊಯಿಕೇರಿ ಬಳಿಯ ಕೊಟ್ಟೋಳಿ ನದಿಯಲ್ಲಿ ಪತ್ತೆಯಾಗಿದ್ದ ಮಾಳೇಟಿರ ವಸಂತಿ ಅವರದ್ದೇ


ವಸಂತಿ ಶ್ರೀವತ್ಸ

ಎಂದು ಈ ಹಿಂದೆಯೇ ಸ್ಪಷ್ಟಪಡಿಸಿದ್ದಾರೆ. ಈ ಹೇಳಿಕೆಗಳೇ ಇದೀಗ ಸಂಪೂರ್ಣ ಪ್ರಕರಣವನ್ನು ಗೊಂದಲಗಳ ಗೂಡಾಗಿಸಿದೆ.

ಪ್ರಶ್ನೆಗಳನ್ನು ಮುಂದಿಟ್ಟ ವಿಜಯ್: ಸುಜಾತ ಭಟ್ ಅವರು ಎಸ್‌ಐಟಿ ಅಧಿಕಾರಿಗಳ ಮುಂದೆ ವಸಂತಿ ಶ್ರೀವತ್ಸ ಎಂಬುವರು ಜೀವಂತ ಇದ್ದಾರೆ ಎಂಬ ಹೇಳಿಕೆ ನೀಡಿರುವ ಬೆನ್ನಲ್ಲೇ, 1 ನಿಮಿಷ 22 ಸೆಕೆಂಡ್‌ಗಳ ವಿಡಿಯೋ ಬಿಡುಗಡೆ ಮಾಡಿರುವ ಮಾಳೇಟಿರ ವಸಂತಿ ಶ್ರೀವತ್ಸ ಅವರ ಸಹೋದರ ಮಾಳೇಟಿರ ವಿಜಯ್, 'ನನ್ನ ತಂಗಿ ಬದುಕಿದ್ದರೆ ನನ್ನಷ್ಟು ಸಂತೋಷ ಪಡುವವರು ಯಾರು ಇಲ್ಲ' ಎಂದು ಹೇಳಿದ್ದಾರೆ. ಮಾತ್ರವಲ್ಲದೇ ಹಲವು ಪ್ರಶ್ನೆಗಳನ್ನು ಮುಂದಿಟ್ಟಿದ್ದು, 'ವಸಂತಿ ಬದುಕಿದ್ದರೆ ಯಾಕೆ ಹೊರಗಡೆ ಬರಲಿಲ್ಲ? ಅವಳನ್ನು ಗುಪ್ತವಾಗಿ ಇಟ್ಟವರು ಯಾರು? ಆಕೆಯನ್ನು ಗೃಹ ಬಂಧನದಲ್ಲಿ ಇಟ್ಟಿದ್ದಾರೋ? ಇದರಲ್ಲಿ ಯಾರ ಕೈವಾಡ ಇದೆ? ಇದರಲ್ಲಿ ಸುಜಾತ ಭಟ್ ಅವರ ಪಾತ್ರ ಏನು? ಸುಜಾತ ಭಟ್ ಹೇಳಿಕೆಯಂತೆ ನನ್ನ ತಂಗಿ ಬದುಕಿದ್ದೇ ಆದರೆ ನನ್ನ ತಂಗಿಯದ್ದೇ ಎಂದು ತೋರಿಸಲಾದ ಬಟ್ಟೆ ಹಾಗೂ ಇನ್ನಿತರ ವಸ್ತುಗಳನ್ನು ತೋರಿಸಿದ್ದರ ಹಿಂದೆ ಯಾರ ಕೈವಾಡವಿದೆ? ಎಂಬ ಪ್ರಶ್ನೆಗಳನ್ನು ಮುಂದಿಟ್ಟಿದ್ದಾರೆ.

ವಸಂತಿಯನ್ನು ನಮಗೊಪ್ಪಿಸಿ: ಸುಜಾತ ಭಟ್ ನೀಡಿರುವ ಹೇಳಿಕೆ ಹಾಗೂ ನನ್ನ ಪ್ರಶ್ನೆಗಳ ಸಹಿತ ಎಲ್ಲವನ್ನು ಕೂಲಂಕುಶವಾಗಿ ವಿಚಾರಣೆ ನಡೆಸಬೇಕು. 'ನನ್ನ ಸಹೋದರಿ ವಸಂತಿ ಬದುಕಿದ್ದರೆ ಆಕೆಯನ್ನು ನಮ್ಮ ವಶಕ್ಕೆ ಒಪ್ಪಿಸಬೇಕು' ಎಂದು ಸರ್ಕಾರ ಮತ್ತು ಎಸ್‌ಐಟಿ ಅಧಿಕಾರಿಗಳನ್ನು ಆಗ್ರಹಿಸಿದ್ದಾರೆ. ಸುಜಾತ ಭಟ್ ವಿಚಾರದಲ್ಲಿ ಸಂಪೂರ್ಣ ತನಿಖೆ ಮಾಡಿ ಇದರಲ್ಲಿ ಭಾಗಿಯಾದವರನ್ನು ಬಹಿರಂಗಪಡಿಸಬೇಕು. ಇದಕ್ಕೆ ಬೇಕಾದ ಎಲ್ಲಾ ಸಹಕಾರ ನೀಡುವುದಾಗಿ ಮಾಳೇಟಿರ ವಿಜಯ್ ಸ್ಪಷ್ಟಪಡಿಸಿದ್ದಾರೆ.

ಶವದ ಗುರುತು ಪತ್ತೆಯಾಗಿತ್ತು

2007ರ ಆಗಸ್ಟ್ 24ರಂದು ಕೊಳೆತ ಸ್ಥಿತಿಯಲ್ಲಿ ಕೆದಮಳ್ಳೂರು ಗ್ರಾಮದ ಬೊಯಿಕೇರಿ



ಬಳಿಯ ಕೊಟ್ಟೋಳಿ ನದಿಯಲ್ಲಿ 30ರಿಂದ 35 ವರ್ಷದ ಮಹಿಳೆಯ ಮೃತದೇಹ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ಆ ಸಂದರ್ಭ ಮೃತದೇಹದಲ್ಲಿ ಬಿಳಿ ಮಿಶ್ರಿತ ಹಸಿರು ಬಣ್ಣದ ಚೂಡಿದಾರ್ ಮತ್ತು ನೀಲಿ ಬಣ್ಣದ ಪ್ಯಾಂಟ್ ಇತ್ತು. ಕುತ್ತಿಗೆಯಲ್ಲಿ ತಾಳಿ ಮಾದರಿಯ ಚಿನ್ನದ ಸರ, ಓಲೆ, ಕಾಲುಂಗುರ ಇದ್ದವು. ಇದು ಪೊಲೀಸ್ ಮಹಜರಿನಲ್ಲೂ ದಾಖಲಾಗಿದೆ. ಆ ದಿನ ತನ್ನ ಸಹೋದರಿ ಘಟನಾ ಸ್ಥಳಕ್ಕೆ ತೆರಳಿ ನೋಡಿದಾಗ ಚೂಡಿದಾರದಲ್ಲಿ ವಜ್ರ ಎಂಬ ಟೈಲರ್ ಅಂಗಡಿಯ ಹೆಸರು ಮತ್ತು ಮೃತದೇಹದ ಕೈಯಲ್ಲಿದ್ದ ಸುಟ್ಟ ಗುರುತಿನ ಆಧಾರದಲ್ಲಿ ಮಹಿಳೆಯ ಮೃತದೇಹ ವಸಂತಿ ಎಂಬವರದ್ದೇ ಎಂದು ಗುರುತಿಸಲಾಗಿತ್ತು. ಸ್ಥಳೀಯ ಪಂಚಾಯಿತಿ ಕೂಡ ಮರಣ ಪ್ರಮಾಣ ಪತ್ರದಲ್ಲಿ ಎಂ.ಪಿ. ವಸಂತಿ ಎಂದು ನಮೂದಿಸಿ ಪ್ರಮಾಣ ಪತ್ರ ನೀಡಿದ್ದಾರೆ ಎಂದು ದಾಖಲಾತಿಗಳ ಸಹಿತ ಮಾಳೇಟಿರ ವಿಜಯ್ ಈ ಹಿಂದೆಯೇ ಸ್ಪಷ್ಟನೆ ನೀಡಿದ್ದಾರೆ.

ಕಾರುಗಳ ನಡುವೆ ಡಿಕ್ಕಿ : ಮಹಿಳೆ ಸಾವು

ಮಡಿಕೇರಿ/ ನಾಪೋಕ್ಲು, ಆ.31– ಕಾರುಗಳ ನಡುವೆ ಸಂಭವಿಸಿದ ಡಿಕ್ಕಿಯಿಂದ



ಮಹಿಳೆಯೊಬ್ಬರು ಸಾವನ್ನಪ್ಪಿ ಉಳಿದವರು ಗಾಯಗೊಂಡಿರುವ ಘಟನೆ ನಾಪೋಕ್ಲು ಮೂರ್ನಾಡು ಮುಖ್ಯ ರಸ್ತೆಯ ಹೊದವಾಡ ಗ್ರಾಮದ ಬೊಳಿಬಾಣೆ ಬಳಿ ಸಂಭವಿಸಿದೆ. ನಾಪೋಕ್ಲು ಬಳಿಯ ಕುಂಜಿಲ ಗ್ರಾಮದ ನಿವಾಸಿ ಚಿತ್ರಬಾನು ಎಂಬುವವರ ಪತ್ನಿ ವಿದ್ಯಾ(55) ಮೃತ ದುರ್ದೈವಿ.

ಆ.24ರಂದು ಪತಿ ಚಿತ್ರಬಾನು, ಪತ್ನಿ ವಿದ್ಯಾ ಹಾಗೂ ಇವರ ಮೊಮ್ಮಗಳು ತಮ್ಮ ಕಾರಿನಲ್ಲಿ ಮೂರ್ನಾಡು ಕಡೆಯಿಂದ ನಾಪೋಕ್ಲು ಕಡೆಗೆ ತೆರಳುತ್ತಿದ್ದಾಗ ಮೂರ್ನಾಡು ಕಡೆಗೆ ಮರಗೋಡು ಅಬ್ಯತ್‌ಮಂಗಲದ ನಿವಾಸಿಗಳು ತೆರಳುತ್ತಿದ್ದ ಕಾರಿನ ನಡುವೆ ನಾಪೋಕ್ಲು ಮೂರ್ನಾಡು ಮುಖ್ಯ ರಸ್ತೆಯ ಹೊದವಾಡ ಗ್ರಾಮದ ಬೊಳಿಬಾಣೆ ಬಳಿಯ ರಸ್ತೆ ತಿರುವಿನಲ್ಲಿ ಮುಖಾಮುಖಿ ಡಿಕ್ಕಿ ಸಂಭವಿಸಿತ್ತು.

ಅಪಘಾತದಲ್ಲಿ ಗಂಭೀರ ಗಾಯಗೊಂಡಿದ್ದ ವಿದ್ಯಾ ಅವರನ್ನು ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು. ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಸುಳ್ಯದ ಕೆವಿಜಿ ಆಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ವಿದ್ಯಾ ಅವರು ಭಾನುವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ. ನಾಪೋಕ್ಲು ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಸರಣಿ ಅಪಘಾತ; ಪ್ರಯಾಣಿಕರು ಪಾರು

ಸುಂಟಿಕೊಪ್ಪ,ಆ.31– ಕೆದಕಲ್ ಸಮೀಪದ 7ನೇ ಮೈಲ್ ಬಳಿಯಲ್ಲಿ ಸರಣಿ ಅಪಘಾತ ಸಂಭವಿಸಿದ್ದು ಪ್ರಯಾಣಿಕರು ಅಪಾಯದಿಂದ ಪಾರಾಗಿದ್ದಾರೆ.



ಸುಂಟಿಕೊಪ್ಪದಿಂದ ಮಡಿಕೇರಿ ಕಡೆಗೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಕೆದಕಲ್ 7ನೇ ಮೈಲ್ ಬಳಿಯಲ್ಲಿ ಪ್ರಯಾಣಿಕರನ್ನು ಇಳಿಸುತ್ತಿದ್ದ ಸಂದರ್ಭ ಹಿಂದಿನಿಂದ ಬರುತ್ತಿದ್ದ ಕಾರು ಬಸ್ಸಿನ ಹಿಂಬದಿಗೆ ಡಿಕ್ಕಿ ಹೊಡೆದಿದೆ. ಈ ಕಾರಿನ ಹಿಂಬದಿಯಲ್ಲಿ ಆಗಮಿಸುತ್ತಿದ್ದ ಮತ್ತೊಂದು ಕಾರು ಈ ಎರಡು ವಾಹನಗಳಿಗೆ ಡಿಕ್ಕಿ ಹೊಡೆದಿದ್ದು 2 ಕಾರು ಜಖಂಗೊಂಡಿದೆ. ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಪ್ರಯಾಣಿಕರು ಅಪಾಯದಿಂದ ಪಾರಾಗಿದ್ದಾರೆ.

ದಕ್ಷಿಣ ಕಾಶ್ಮೀರ ಮಡಿಕೇರಿಯಲ್ಲಿ ಹೊಂಡ–ಗುಂಡಿಗಳ ರಂಗೋಲಿ

ಸಕಾಲದಲ್ಲಿ ದುರಸ್ತಿ ಕಾಣದೆ ಉತ್ತಮ ರಸ್ತೆಗೆ ಹುಡುಕಾಟ ನಡೆಸಬೇಕಾದ ಪರಿಸ್ಥಿತಿ


ಮಡಿಕೇರಿಯಲ್ಲಿ ಸಂಪೂರ್ಣವಾಗಿ ಹದಗೆಟ್ಟಿರುವ ರಸ್ತೆಗಳ ಸ್ಥಿತಿ.

ಮಡಿಕೇರಿ,ಆ.31– ದಕ್ಷಿಣದ ಕಾಶ್ಮೀರ, ಮಂಜಿನ ನಗರಿ ಪ್ರಸಿದ್ಧ ಪ್ರವಾಸಿ ತಾಣಗಳ ಬೀಡು ಎಂಬಿತ್ಯಾದಿ ವಿಶೇಷತೆಗಳೊಂದಿಗೆ ಲಕ್ಷಾಂತರ ಜನರನ್ನು ಸೆಳೆಯುವ ಮಡಿಕೇರಿ ನಗರದ ಬಹುತೇಕ ರಸ್ತೆಗಳಲ್ಲಿ ನಡೆದಾಡಿದರೆ 'ಈ ರಸ್ತೆಗಳಿಗೆ ಕ್ಷುದ್ರ ಗ್ರಹಗಳು ಅಪ್ಪಳಿಸಿದೆಯೋ? ನಿಧಿಗಾಗಿ ರಸ್ತೆಗಳಲ್ಲಿ ಶೋಧ ನಡೆಸಲಾಗಿದೆಯೋ? ಎನ್ನುವ ಪ್ರಶ್ನೆಗಳು ಸಾರ್ವಜನಿಕರನ್ನು ಕಾಡುತ್ತವೆ. ಮಾತ್ರವಲ್ಲದೇ ಮಡಿಕೇರಿ ಹೊಂಡ ಗುಂಡಿಗಳ ರಂಗೋಲಿಯನ್ನೇ ಮೈಮೇಲೆ ಬರೆದುಕೊಂಡ ನಗರಿ ಎನ್ನುವ ಸತ್ಯವೂ ಅರಿವಾಗುತ್ತವೆ. ವರ್ಷದ ಅರ್ಧ ಭಾಗ ಮಳೆ ಇಲ್ಲಿ ಆವರಿಸಿಕೊಂಡಿರುತ್ತದೆ. ಈ ಅವಧಿಯಲ್ಲಿ ನಗರದ ಯಾವುದೇ ರಸ್ತೆ ಕಾಮಗಾರಿಗಳನ್ನು ನಡೆಸುವುದು ಅಸಾಧ್ಯ ಎನ್ನುವ ಸತ್ಯ ಆಡಳಿತ ವ್ಯವಸ್ಥೆಗೆ ತಿಳಿದಿದ್ದರೂ ಸಕಾಲದಲ್ಲಿ ರಸ್ತೆ ದುರಸ್ಥಿ ಮಾಡದ ಪರಿಣಾಮ ನಗರದ ಬಹುತೇಕ ರಸ್ತೆಗಳು ಹದಗೆಟ್ಟು ಹೋಗಿವೆ.

ಉತ್ತಮ ರಸ್ತೆ ಹುಡುಕಬೇಕು: ನಗರಕ್ಕೆ ಒಂದು ಪ್ರದಕ್ಷಿಣೆ ಹಾಕಿದರೆ ಹೊಂಡ ಗುಂಡಿಗಳಿಂದಲೇ ತುಂಬಿರುವ ಹದಗೆಟ್ಟ ರಸ್ತೆಗಳೇ ಕಣ್ಣಿಗೆ ಕಾಣುತ್ತವೆ. ಇದರ ನಡುವೆ ಉತ್ತಮ ರಸ್ತೆಯನ್ನು ಹುಡುಕುವುದೇ ಒಂದು ದೊಡ್ಡ ಸವಾಲಾಗಿ ಪರಿಣಮಿಸಿದರೆ ಆಶ್ಚರ್ಯವಿಲ್ಲ. ಸ್ಥಳೀಯ ನಿವಾಸಿಗಳು ಹದಗೆಟ್ಟ ರಸ್ತೆಗಳ ದುರಸ್ತಿಗೆ ಅದೆಷ್ಟೋ ಮನವಿಗಳನ್ನು ಮಾಡಿ ಬೇಸತ್ತು ಹೋಗಿದ್ದಾರೆ. ತಮ್ಮ ಮನೆಗಳು ಹಾಗೂ ವಾರ್ಡ್‌ಗಳಿಗೆ ತೆರಳುವ ರಸ್ತೆಗಳಲ್ಲಿ ಎಷ್ಟು ಗುಂಡಿಗಳಿವೆ ಎನ್ನುವ ಪಕ್ಕಾ ಲೆಕ್ಕವಿದೆ. ರಸ್ತೆಗಳ ಉದ್ದಕ್ಕೂ ಮೂಡಿರುವ ಗುಂಡಿಗಳಲ್ಲಿ ಮಳೆಯ ಕೆಸರಿನ ನೀರು ತುಂಬಿಕೊಂಡಿದ್ದು ಇಂತಹ ಹಾದಿಗಳಲ್ಲಿ ಪಾದಚಾರಿಗಳ ಸಂಚಾರದ ಪರಿಸ್ಥಿತಿಯನ್ನು ಹೇಳಲಾಗದು. ಯಾವುದೇ ವಾಹನ ಸಂಚರಿಸುವ ಸಂದರ್ಭ ಗುಂಡಿಗಳಿಂದ ಹಾರುವ ಕೆಸರು ನೀರನ್ನು ತಪ್ಪಿಸಿಕೊಂಡು ಸಾಗುವುದೇ ಒಂದು ದೊಡ್ಡ ಸಾಹಸ ಎಂಬಂತಾಗಿದೆ. ಕೆಲವು ದಿನಗಳ ಹಿಂದೆ ತಾತ್ಕಾಲಿಕವಾಗಿ ಗುಂಡಿಗಳನ್ನು ಮುಚ್ಚುವ ಪ್ರಯತ್ನ ನಡೆದಿದೆಯಾದರೂ ಕೆಲವೇ ದಿನಗಳಲ್ಲಿ ಮಳೆಗೆ ಮತ್ತೆ ಗುಂಡಿಗಳು ನಿರ್ಮಾಣವಾಗಿದೆ.

ದಸರಾಕ್ಕೆ ರಸ್ತೆ ದುರಸ್ತಿಯಾದೀತೆ?: ಐತಿಹಾಸಿಕ ಮಡಿಕೇರಿ ದಸರಾ ಉತ್ಸವಕ್ಕೆ ದಿನ ಗಣನೆ ಆರಂಭವಾಗಿದೆ. ದಶ ಮಂಟಪ ಸಮಿತಿಗಳು ಈಗಾಗಲೇ ಶೋಭಾಯಾತ್ರೆಗೆ ಮಂಟಪಗಳ ಸಿದ್ದತೆಯಲ್ಲಿ ತೊಡಗಿದ್ದಾರೆ. ವಿವಿಧ ಸಮಿತಿಗಳು ಪೌರಾಣಿಕ ಕಥಾ ಸಾರಾಂಶಕ್ಕೆ ತಕ್ಕಂತೆ ಅಲಂಕೃತ ಮಂಟಪ ಹೊರತರಲು ಎಲ್ಲಾ ತಯಾರಿ ನಡೆಸುತ್ತಿದ್ದಾರೆ. ಈ ನಡುವೆ ಅತ್ತ ಮಳೆಯೂ ನಿಲ್ಲುತ್ತಿಲ್ಲ, ಮಳೆ ನಿಲ್ಲದೆ ರಸ್ತೆಯ ಕನಿಷ್ಠ ತಾತ್ಕಾಲಿಕ ದುರಸ್ತಿಯೂ ಕಷ್ಟಸಾಧ್ಯವಾಗಿದೆ. ವಾತಾವರಣ ಇದೇ ರೀತಿ ಮುಂದುವರೆದಲ್ಲಿ ಹೊಂಡ ಗುಂಡಿಗಳ ನಡುವೆಯೇ ದಸರಾ ಉತ್ಸವ ಆಚರಣೆ ಆಗಲಿದೆಯೇ ಎಂಬ ಪ್ರಶ್ನೆ ದಶ ಮಂಟಪ ಸಮಿತಿ ಹಾಗೂ ನಗರ ನಿವಾಸಿಗಳನ್ನು ಕಾಡುತ್ತಿದೆ.

ದೂರದೃಷ್ಟಿಯ ಕೊರತೆ: ಕೊಡಗು ಆಡಳಿತ ವ್ಯವಸ್ಥೆಗೆ ಜಿಲ್ಲೆಯ ವಾತಾವರಣ, ಮಳೆಗಾಲದ ಪರಿಸ್ಥಿತಿಗಳ ಸ್ಪಷ್ಟ ಅರಿವಿದೆ. ಹೀಗಿದ್ದರೂ ಮುಂಗಾರು ಆರಂಭಕ್ಕೂ ಮೊದಲೇ ನಗರದ ರಸ್ತೆಗಳ ದುರಸ್ತಿ ಕಾರ್ಯ, ಮಳೆ ನೀರು ಸರಾಗವಾಗಿ ಹರಿಯಲು ಅನುಕೂಲವಾಗುವಂತಹ ಚರಂಡಿ ವ್ಯವಸ್ಥೆ, ಅಗತ್ಯವಿರುವ ಕಡೆಗಳಲ್ಲಿ ಹೊಸ ರಸ್ತೆಗಳ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲು ಆಡಳಿತ ವ್ಯವಸ್ಥೆ ಮುಂದಾಗುತ್ತಿಲ್ಲ. ಮುಂಗಾರಿನ ಅವಧಿಯಲ್ಲಿ ಚರಂಡಿಗಳ ವ್ಯವಸ್ಥಿತ ನಿರ್ವಹಣೆಗೆ ಹೆಚ್ಚಿನ ಒತ್ತು ನೀಡುವ ಅಗತ್ಯವನ್ನು ಸರಕಾರಿ ಆಡಳಿತ ಮನಗಾಣುತ್ತಿಲ್ಲ. ಬಹುತೇಕ ಸಂದರ್ಭಗಳಲ್ಲಿ ಚರಂಡಿ ನಿರ್ವಹಣೆ ಇಲ್ಲದೆ ಮಳೆಯ ನೀರು ಮುಖ್ಯ ರಸ್ತೆಯಲ್ಲೇ ಹರಿಯುವ ಮೂಲಕ ಇರುವ ರಸ್ತೆ ಮತ್ತಷ್ಟು ಹದಗೆಟ್ಟು ಹೋಗಿದೆ.

ಮಡಿಕೇರಿ–ಮೇಕೇರಿ ಕಾಂಕ್ರೀಟ್ ರಸ್ತೆಯ ಮೇಲೆ ಮಳೆ ನೀರು ಹರಿದು ವಾಹನ ಸಂಚಾರಕ್ಕೆ ಕಂಟಕವಾದ ಪ್ರಕರಣ ಆಡಳಿತ ವ್ಯವಸ್ಥೆಗೆ ದೂರ ದೃಷಿಯ ಕೊರತೆ ಇದೆ ಎನ್ನುವುದನ್ನು ಸಾಬೀತುಪಡಿಸಿದೆ. ದೂರದೃಷ್ಟಿಯ ಚಿಂತನೆಯ ಯೋಜನೆಗಳ ಮೂಲಕ ಭವಿಷ್ಯದಲ್ಲಿ ನಗರದ ರಸ್ತೆಗಳು ಈ ಪ್ರಮಾಣದಲ್ಲಿ ಹದಗೆಡದಂತೆ ಮುನ್ನೆಚ್ಚರಿಕೆ ವಹಿಸುವ ಅಗತ್ಯವಿದೆ.

ರಸ್ತೆಗೆ ನಿಯಮ ಏಕಿಲ್ಲ?

ವರ್ಷಕ್ಕೊಮ್ಮೆ ಅತ್ಯಂತ ವಿಜೃಂಭಣೆಯಿಂದ ಆಚರಿಸುವ ಐತಿಹಾಸಿಕ ಮಡಿಕೇರಿ ದಸರಾ ಜನೋತ್ಸವದಲ್ಲಿ ಲಕ್ಷಾಂತರ ಮಂದಿ ಪಾಲ್ಗೊಳ್ಳುತ್ತಾರೆ. ಹದಗೆಟ್ಟ ಹಾಗೂ ಇಕ್ಕಟ್ಟಿನ ರಸ್ತೆಯಲ್ಲಿ 2023ರಲ್ಲಿ ನಡೆದ ಮಂಟಪ ಅವಘಡದ ಒಂದು ಘಟನೆಯನ್ನು ಮುಂದಿಟ್ಟುಕೊಂಡು ದಶ ಮಂಟಪ ಸಮಿತಿಗಳ ಮೇಲೆ ಈ ಬಾರಿ ಕಠಿಣ ನಿಯಮಗಳನ್ನು ಆಡಳಿತ ವ್ಯವಸ್ಥೆ ಹೇರಲು ಮುಂದಾಗಿದೆ. ದಶ ಮಂಟಪಗಳ ನಿರ್ಮಾಣ, ಅಳತೆ, ಎತ್ತರ, ಭಾರ ಹೊರುವ ಸಾಮರ್ಥ್ಯ, ಶೋಭಾಯಾತ್ರೆಗೆ ತೆರಳುವ ಮಾರ್ಗ, ಧ್ವನಿವರ್ಧಕಗಳ ಬಳಕೆ, ಸಿಡಿಮದ್ದು ನಿಷೇಧ ಹೀಗೆ ಹತ್ತಾರು ನಿಯಮಗಳನ್ನು ಹೇರಲಾಗಿದೆ. ಮಡಿಕೇರಿ ಕ್ಷೇತ್ರ ಶಾಸಕರ ಸಮ್ಮುಖದಲ್ಲಿ ಜಿಲ್ಲಾಡಳಿತ ನಡೆಸಿದ ದಶ ಮಂಟಪ ಸಮಿತಿ ಸಭೆಯ ಮುಂದಿಡಲಾದ ಕೆಲವೊಂದು ನಿಯಮಗಳಿಗೆ ಮಂಟಪ ಸಮಿತಿಗಳು ಬಹಿರಂಗವಾಗಿಯೇ ಸಭೆಯಲ್ಲಿಯೇ ಆಕ್ಷೇಪ ಎತ್ತಿವೆ. ಶೋಭಾಯಾತ್ರೆ ಸಾಗುವ ಮಂಟಪಗಳಿಗೆ ಹೇರುವ ನಿಯಮಗಳು ಸಾರ್ವಜನಿಕರ ತೆರಿಗೆಯಿಂದ ನಿರ್ಮಿಸಲಾದ ರಸ್ತೆಗಳಿಗೆ ಏಕೆ ಅನ್ವಯ ಆಗುವುದಿಲ್ಲ ಎಂಬ ಪ್ರಶ್ನೆಗಳು ಮಂಟಪ ಸಮಿತಿಗಳನ್ನು ಕಾಡುತ್ತಿದೆ.

'ಅಥೆನ್ಸಿನ ಪಾರಿವಾಳ', 'ಗಾಂಧಿ ಜೋಡಿನ ಮಳಿಗೆ' ಕೃತಿ ಬಿಡುಗಡೆ

ಪ್ರಶಸ್ತಿಗಳು ಶ್ರೇಷ್ಠ ಬರವಣಿಗೆಯ ಮಾನದಂಡವಲ್ಲ : ಹನೂರು ಕೃಷ್ಣಮೂರ್ತಿ


ಚಾಮರಾಜನಗರದ ಡಾ. ರಾಜಕುಮಾರ್ ರಂಗಮಂದಿರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಕಾಶ್ ಪುಟ್ಟಪ್ಪ ಅವರ ಅಥೆನ್ಸಿನ ಪಾರಿವಾಳ ಮತ್ತು ಗಾಂಧಿ ಜೋಡಿನ ಮಳಿಗೆ ಪುಸ್ತಕಗಳನ್ನು ಸಾಹಿತಿ ಹನೂರು ಕೃಷ್ಣಮೂರ್ತಿ ಲೋಕಾರ್ಪಣೆ ಮಾಡಿದರು.

ಚಾಮರಾಜನಗರ, ಆ.31– ಪ್ರಶಸ್ತಿಗಳು ಶ್ರೇಷ್ಠ ಬರವಣಿಗೆಯ ಮಾನದಂಡವಲ್ಲ. ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಜಗತ್ತಿನ ಸರ್ವ ಶ್ರೇಷ್ಠ ಮಹಾಕಾವ್ಯ. ಆದರೆ ಅದಕ್ಕೆ ಯಾವ ಪ್ರಶಸ್ತಿಯೂ ಬರಲಿಲ್ಲ ಎಂದು ಹಿರಿಯ ಸಾಹಿತಿ ಡಾ. ಕೃಷ್ಣಮೂರ್ತಿ ಹನೂರು ಅಭಿಪ್ರಾಯಪಟ್ಟರು.

ನಗರದ ಡಾ. ರಾಜ್‌ಕುಮಾರ್ ರಂಗಮಂದಿರದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಪ್ರಕಾಶ್ ಪುಟ್ಟಪ್ಪ ಅವರ 'ಗಾಂಧಿ ಜೋಡಿನ ಮಳಿಗೆ' ಮತ್ತು 'ಅಥೆನ್ಸಿನ ಪಾರಿವಾಳ' ಪುಸ್ತಕಗಳನ್ನು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಇಂದು ಸಾಹಿತಿಗಳಿಗೆ ಪ್ರಶಸ್ತಿಗಳು ಜಾಸ್ತಿಯಾಗಿವೆ. ಬರವಣಿಗೆಯ ಸತ್ವ ಕಡಿಮೆಯಾಗಿದೆ. ಕುವೆಂಪು, ಕಾರಂತ, ಬೇಂದ್ರೆಯವರಂಥ ಲೇಖಕರನ್ನು ಈಗ ಕಾಣುತ್ತಿದ್ದೇವೆಯೇ? ಬರವಣಿಗೆಯ ಶಕ್ತಿಗೆ ಕೊನೆಯಿಲ್ಲ. ವರನಟ ಡಾ. ರಾಜ್‌ಕುಮಾರ್ ಅವರು ಎಷ್ಟು ಶ್ರೇಷ್ಠ ನಟರಾಗಿದ್ದರೂ, ನಾನು ಇನ್ನೂ ಚೆನ್ನಾಗಿ ಅಭಿನಯಿಸಬೇಕು ಎಂದು ಹೇಳುತ್ತಿದ್ದರು. ಹಾಗೆಯೇ ಲೇಖಕನಿಗೆ ಇನ್ನೂ ಚೆನ್ನಾಗಿ ಬರೆಯಬೇಕೆಂಬ ತುಡಿತ ಇರಬೇಕು ಎಂದರು.

ಪಂಪನಿಗೆ ರಾಜಾಶ್ರಯ, ಪ್ರಶಸ್ತಿ ದೊರೆತವು. ಆದರೆ ಅಲ್ಲಮ, ಕುಮಾರವ್ಯಾಸರಿಗೆ ಯಾರು ಪ್ರಶಸ್ತಿ ಕೊಟ್ಟರು? ಅಲ್ಲಮ ಪ್ರಭು ತನ್ನ ವಚನಗಳ ಮೂಲಕ ಶ್ರೇಷ್ಠ ತುತ್ತತುದಿ ತಲುಪಿದಾತ. ನಾನು ಮಾವ, ಗುಹೇಶ್ವರ ಅಳಿಯ ಎಂದ ಆತನ ದಿಟ್ಟತನ ಯಾರಿಗಿದೆ? ಎಂದು ಅವರು ಪ್ರಶ್ನಿಸಿದರು.

ಚಾಮರಾಜನಗರ ಸೀಮೆಯವರಾದ ನಿಜಗುಣ ಶಿವಯೋಗಿಗಳು, ಮಂಟೇಸ್ವಾಮಿ ಅವರು ಹಚ್ಚಿದ ಅರಿವಿನ ಬೆಳಕು ಆರಿಲ್ಲ. ಅದು ಮುಂದುವರೆಯುತ್ತಿದೆ ಎಂಬುದಕ್ಕೆ ದಿಲೀಪ್‌ಕುಮಾರ್, ಸ್ವಾಮಿ ಪೊನ್ನಾಚಿ, ಪ್ರಕಾಶ್ ಪುಟ್ಟಪ್ಪ ಅವರಂಥ ಲೇಖಕರು ನಿದರ್ಶನ. ಇಲ್ಲಿನ ಜನಪದಕ್ಕೂ, ಹಾಡುಗಾರಿಕೆಗೂ, ಬರವಣಿಗೆಗೂ ಬಹಳ ಸಂಬಂಧವಿದೆ. ಬರಹಕ್ಕೆ ಅಂತ್ಯವಿಲ್ಲ, ಎಲ್ಲೆಯಿಲ್ಲ. ಅದು ಅಂತರಂಗದಲ್ಲಿ ನಿರಂತರವಾಗಿ ಪ್ರವಹಿಸುತ್ತಿದೆ. ಇದಕ್ಕೆ ನಮ್ಮ ಹಿರಿಯರು ಹಾಕಿಕೊಟ್ಟ ಮಾರ್ಗ ಕಾರಣ ಎಂದು ಹನೂರು ಕೃಷ್ಣಮೂರ್ತಿ ಹೇಳಿದರು.

ವಿಮರ್ಶಕ, ಸಾಹಿತಿ ಜಿ.ಪಿ. ಬಸವರಾಜು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಅಳಿವಿನಂಚಿನ ಪ್ರಾಣಿ ಎಂಬ ರೀತಿಯಲ್ಲಿ ಸಾಹಿತ್ಯ, ಸಾಹಿತಿಗಳಿದ್ದಾರೆ. ತನ್ನ ಸಾಹಿತ್ಯವನ್ನು ಬಿತ್ತರಗೊಳಿಸಲು ಸೂಕ್ತ ವೇದಿಕೆ ಸಿಗದಂತಾಗಿದೆ. ಸೋಷಿಯಲ್ ಮೀಡಿಯಗಳಲ್ಲಿ ಕತೆ, ಕವನ ಹಾಕಿ, ಓದಿಸಿಕೊಳ್ಳುವಂತಹ ಪರಿಸ್ಥಿತಿ ಬಂದೊದಗಿದೆ ಎಂದು ವಿಷಾದಿಸಿದರು. ಸಾಹಿತ್ಯ ಎಂದಿಗೂ ಹಿಂಸೆಯನ್ನು ಪ್ರತಿಪಾದಿಸುವುದಿಲ್ಲ. ಸಾಹಿತ್ಯಕ್ಕೆ ಬಾಲ್ಯದ ಅಡಿಪಾಯ ಮುಖ್ಯ. ಪ್ರಾಥಮಿಕ ಶಾಲಾ ಹಂತದಲ್ಲಿ ಶಿಕ್ಷಕರು ಸರಿಯಾದ ಶಿಕ್ಷಣ ಕಲ್ಪಿಸಿಕೊಟ್ಟರೆ ಅಂಥವರು ಸಾಹಿತ್ಯ ದಿಂದಾಚೆಗೆ ಹೋಗುವುದಿಲ್ಲ ಎಂದರು.

ಲೇಖಕ ಪ್ರಕಾಶ್ ಪುಟ್ಟಪ್ಪ ಮಾತನಾಡಿ, ನನ್ನ ವಿದ್ಯಾಗುರುಗಳು, ಜನ್ಮ ಕೊಟ್ಟ ಊರು ಪೊನ್ನಾಚಿ, ನನ್ನ ಸಾಹಿತ್ಯದ ಮೂಲ ಪ್ರೇರಣೆ ಎಂದರು.

ಸಾಹಿತಿ ಪ್ರೊ. ಜಿ.ಎಸ್. ಜಯದೇವ ಅಧ್ಯಕ್ಷತೆ ವಹಿಸಿದ್ದರು. ಲೇಖಕಿ ಕುಸುಮಾ ಆಯರಹಳ್ಳಿ ಪುಸ್ತಕ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ಪ್ರಕಾಶ್ ಅವರ ಮಕ್ಕಳಾದ ಅಭಿನವ್ ಮತ್ತು ಅಭಿಜ್ಞಾ ಗಾಂಧಿ, ಪಾರಿವಾಳದ ವೇಷದಲ್ಲಿ ಪುಸ್ತಕ ತಂದು ಬಿಡುಗಡೆ ಮಾಡಿದ್ದು ವಿಶೇಷವಾಗಿತ್ತು. ಜಾನಪದ ವಿದ್ವಾಂಸ, ಸಾಹಿತಿ ಮಹದೇವ ಶಂಕನಪುರ, ಪುಸ್ತಕ ಪ್ರಕಾಶಕರಾದ ಕೃಷ್ಣ ಚಂಗಡಿ, ಸಾಹಿತಿ ಸ್ವಾಮಿ ಪೊನ್ನಾಚಿ, ರಂಗನಾಥ್, ಅನುಪಮಾ ಉಪಸ್ಥಿತರಿದ್ದರು.

ವಿಜೃಂಭಣೆಯಿಂದ ನಡೆದ ಶಂಕರೇಶ್ವರಸ್ವಾಮಿ ಬೆಟ್ಟದ ಜಾತ್ರೆ



ಚಾಮರಾಜನಗರ : ತಾಲೂಕಿನ ಯಡಿಯೂರು ಮಂಗಲ ಗ್ರಾಮದ ಬಳಿ ಇರುವ ಶಂಕರೇಶ್ವರಸ್ವಾಮಿ ಬೆಟ್ಟದಲ್ಲಿ ಭಾನುವಾರ ವಿಜೃಂಭಣೆಯಿಂದ ಜಾತ್ರೆ ನಡೆಯಿತು.

ಜಾತ್ರೆ ಪ್ರಯುಕ್ತ ಸ್ವಾಮಿಗೆ ಮುಂಜಾನೆ ರುದ್ರಾಭಿಷೇಕ, ಬಿಲ್ವಪತ್ರೆ ಅರ್ಚನೆ, ಪಂಚಾಮೃತ ಅಭಿಷೇಕ ಹಾಗೂ ವಿವಿಧ ಪೂಜಾ ಕಾರ್ಯಕ್ರಮ ನೆರವೇರಿಸಲಾಯಿತು. ನಂತರ ದೇವರಿಗೆ ವಿವಿಧ ಹೂವುಗಳಿಂದ ಅಲಂಕಾರ ಮಾಡಿ ಮಹಾ ಮಂಗಳಾರತಿ ನಡೆಯಿತು ಹಾಗೂ ಬೆಟ್ಟದ ತಪ್ಪಲಿನಲ್ಲಿರುವ ಗಣೇಶ. ಬಸವೇಶ್ವರ.ವೀರಭದ್ರೇಶ್ವರ ದೇವರುಗಳಿಗೆ ಪೂಜೆ ನೆರವೇರಿಸಲಾಯಿತು.

ನಂತರ ಯಡಿಯೂರು ಗ್ರಾಮಸ್ಥರು ಶಂಕರೇಶ್ವರ ಉತ್ಸವ ಮೂರ್ತಿಯನ್ನು ತಮ್ಮ ಗ್ರಾಮದಿಂದ ಬೆಟ್ಟದ ತಪ್ಪಲಿನಲ್ಲಿರುವ ವೀರಭದ್ರೇಶ್ವರ ದೇವಾಲಯದ ಮುಂಭಾಗದಲ್ಲಿ ಬಸವ ವಾಹನದ ಮೇಲೆ ಉತ್ಸವ ಮೂರ್ತಿಯನ್ನು ಕೂರಿಸಿ ವಿವಿಧ ಬಗೆಯ ಹೂವುಗಳಿಂದ ಅಲಂಕಾರ ಮಾಡಿ ಪೂಜೆ ಸಲ್ಲಿಸಿ, ನಂದಿಧ್ವಜದೊಂದಿಗೆ ತಮ್ಮ ಗ್ರಾಮಕ್ಕೆ ತೆರಳಿ ಸಂಜೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸುತ್ತಾರೆ ಮತ್ತು ಇದೆ ರೀತಿ ಮುಂಗಲ ಗ್ರಾಮಸ್ಥರು ತಮ್ಮ ಗ್ರಾಮದಿಂದ ಶಂಕರೇಶ್ವರಸ್ವಾಮಿ ಮತ್ತು ಬೀರೇಶ್ವರ ಸ್ವಾಮಿ ಉತ್ಸವ ಮೂರ್ತಿಗಳನ್ನು ವೀರಭದ್ರೇಶ್ವರ ದೇವಾಲಯದಲ್ಲಿ ಹೂವುಗಳಿಂದ ಅಲಂಕಾರ ಮಾಡಿ ಪೂಜೆ ಸಲ್ಲಿಸಿದ ನಂತರ ವೀರಭದ್ರೇಶ್ವರ ದೇವಾಲಯ ಮುಂಭಾಗದಲ್ಲಿ ಬೀರೇಶ್ವರ ದೇವರನ್ನು ತಲೆಯ ಮೇಲೆ ಹೊತ್ತು ಕುಣಿಯುವ ದೃಶ್ಯ ಭಕ್ತರಿಗೆ ಆಕರ್ಷಣೆಯಾಗಿತ್ತು. ನಂತರ ಮಂಗಲ ಗ್ರಾಮಸ್ಥರು ಉತ್ಸವ ಮೂರ್ತಿಗಳೊಂದಿಗೆ ತಮ್ಮ ಗ್ರಾಮಕ್ಕೆ ತೆರಳಿ ಸಂಜೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಗಣೇಶ ಮೂರ್ತಿ ಮತ್ತು ಶಂಕರೇಶ್ವರ, ಬೀರೇಶ್ವರ ದೇವರುಗಳನ್ನು ಮಂಗಳವಾದ್ಯಗಳೊಂದಿಗೆ ಮೆರವಣಿಗೆ ನಡೆಸಿ ನಂತರ ಗಣೇಶಮೂರ್ತಿಯನ್ನು ಗ್ರಾಮದ ಕೆರೆಯಲ್ಲಿ ವಿಸರ್ಜನೆ ಮಾಡುತ್ತಾರೆ.

ಗ್ರಾಹಕರ ಸೋಗಿನಲ್ಲಿ ಮಹಿಳೆಯಿಂದ ಚಿನ್ನದ ಸರ ಕಳವು

ಚಾಮರಾಜನಗರ: ಗ್ರಾಹಕರ ಸೋಗಿನಲ್ಲಿ ಬಂದ ಮಹಿಳೆಯೋರ್ವಳು ಚಿನ್ನದ ಅಂಗಡಿಯಲ್ಲಿ ಸುಮಾರು 9 ಗ್ರಾಂ ತೂಕದ ಚಿನ್ನದ ಸರ ಕಳವು ಮಾಡಿರುವ ಘಟನೆ ನಗರದ ಅಂಗಡಿಯೊಂದರಲ್ಲಿ ನಡೆದಿದೆ.

ನಗರದ ದೊಡ್ಡ ಅಂಗಡಿ ಬೀದಿಯಲ್ಲಿರುವ ಶ್ರೀಬಸವೇಶ್ವರ ಜ್ಯೂಯಲರ್ಸ್ ಅಂಗಡಿಯಲ್ಲಿ ಘಟನೆ ನಡೆದಿದ್ದು, ಮಹಿಳೆಯೋರ್ವಳು ಚಿನ್ನದ ಸರ ಖರೀದಿಸುವ ನೆಪದಲ್ಲಿ ಅಂಗಡಿಗೆ ಬಂದಿದ್ದಾಳೆ. ಈ ವೇಳೆ ತನ್ನ ಮೊಬೈಲ್ನಲ್ಲಿ ಬೇರೆ ಡಿಸೈನ್ ಸರಗಳ ಬಗ್ಗೆ ತೋರಿಸುವ ಮೂಲಕ ಅಂಗಡಿಯವರ ಗಮನ ಬೇರೆಡೆ ಸೆಳೆದು 9 ಗ್ರಾಂ ಚಿನ್ನದ ಸರವನ್ನು ಕಳ್ಳತನ ಮಾಡಿ ಪರಾರಿಯಾಗಿದ್ದಾಳೆ.

ಚಿನ್ನದ ಸರ ಕಳವು ಮಾಡಿರುವುದು ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದು, ವಿಷಯ ತಿಳಿದ ಕೂಡಲೇ ಅಂಗಡಿ ಮಾಲೀಕರು ಪಟ್ಟಣ ಠಾಣೆಗೆ ದೂರು ನೀಡಿದ್ದಾರೆ. ಸ್ಥಳಕ್ಕೆ ಬಂದ ಪೊಲೀಸರು ಸಿಸಿ ಕ್ಯಾಮರಾ ಪರಿಶೀಲಿಸಿದಾಗ ಆಕೆ ಪಿರಿಯಾಪಟ್ಟಣದ ಚಿನ್ನದ ಅಂಗಡಿಯೊಂದರಲ್ಲಿ ಇದೇ ರೀತಿ ಕಳ್ಳತನ ಮಾಡಿರುವುದು ಬೆಳಕಿಗೆ ಬಂದಿದೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಚಿನ್ನದ ಸರ ಕಳವು ಮಾಡಿರುವ ಮಹಿಳೆಯ ಹುಡುಕಾಟ ನಡೆಸಿದ್ದು, ಬಂಧನಕ್ಕೆ ಬಲೆ ಬೀಸಿದ್ದಾರೆ.

ಪೂಜೆ ನೆಪದಲ್ಲಿ ಹಣ, ಮಾಂಗಲ್ಯ ಸರ ದೋಚಿದ್ದವನ ಬಂಧನ

ಚಾಮರಾಜನಗರ: ತಾಲೂಕಿನ ಸಂತೇಮರಹಳ್ಳಿ ಸಮೀಪದ ಯಲಕ್ಕೂರು ಗ್ರಾಮದಲ್ಲಿ ಪೂಜೆ ನೆಪದಲ್ಲಿ ಮಹಿಳೆಯೊಬ್ಬರನ್ನು ವಂಚಿಸಿ ಚಿನ್ನದ ಸರ ದೋಚಿದ್ದ ಆರೋಪಿಯನ್ನು ಕುದೇರು ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಗುಂಡ್ಲುಪೇಟೆ ಪಟ್ಟಣದ ಮುತ್ತಣ್ಣ ಅಲಿಯಾಸ್ ಚಂದ್ರು ಬಂಧಿತ ಆರೋಪಿ. ಕುದೇರು ಗ್ರಾಮದ ಕಲ್ಯಾಣಕುಮಾರಿ ಮಾಂಗಲ್ಯ ಸರ ಕಳೆದುಕೊಂಡವರು.

ಘಟನೆಯ ವಿವರ: ಗುಂಡ್ಲುಪೇಟೆ ಪಟ್ಟಣದ ಮುತ್ತಣ್ಣ ಅಲಿಯಾಸ್ ಚಂದ್ರು ಶಾಸ್ತ್ರ ಹೇಳುವ ನೆಪದಲ್ಲಿ ಕುದೇರು ಗ್ರಾಮದ ಕಲ್ಯಾಣಕುಮಾರಿ ಅವರನ್ನು ಪರಿಚಯ ಮಾಡಿಕೊಂಡಿದ್ದ. ಬಳಿಕ ನಿಮ್ಮ ಕುಟುಂಬಕ್ಕೆ ಒಳ್ಳೆಯದು ಮಾಡಿಕೊಡುತ್ತೇನೆ ಎಂದು ನಂಬಿಸಿ 15 ಸಾವಿರ ಪಡೆದುಕೊಂಡ ನಂತರ ಮನೆಯಲ್ಲಿ ಪೂಜೆ ಮಾಡಬೇಕು. ಅದಕ್ಕೆ ಮಾಂಗಲ್ಯ ಸರವನ್ನು ಪೂಜೆಯಲ್ಲಿ ಇಡಬೇಕೆಂದು ತಿಳಿಸಿದ್ದ. ಈತನ ಮಾತು ನಂಬಿದ ಕಲ್ಯಾಣಕುಮಾರಿ 33 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರವನ್ನು ಪೂಜೆಯಲ್ಲಿ ಇಟ್ಟಿದ್ದರು. ಬಳಿಕ ಆಕೆ ಮೂರ್ಛೆ ಹೋಗುವ ಔಷಧಿಯನ್ನು ಸಿಂಪಡಿಸಿದ ಆರೋಪಿ ಮಾಂಗಲ್ಯ ಸರ ದೋಚಿ ಪರಾರಿಯಾಗಿದ್ದ. ಈ ಸಂಬಂಧ ಕುದೇರು ಠಾಣೆಯಲ್ಲಿ ದೂರು ದಾಖಲಾಗಿತ್ತು. ಈ ಸಂಬಂಧವಾಗಿ ಎಎಸ್‌ಐ ಎಸ್.ಚಂದ್ರಶೇಖರ್, ಅಲಿಖಾನ್, ಉಮೇಶ್ ನೇತೃತ್ವದ ತಂಡ ಎಚ್.ಡಿ.ಕೋಟೆಯಲ್ಲಿ ಆರೋಪಿಯನ್ನು ಬಂಧಿಸಿದೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಕುದೇರು ಠಾಣೆ ಪಿಎಸ್‌ಐ ಕುಮುದಾ ಮಾಹಿತಿ ನೀಡಿದ್ದಾರೆ.

ಸಂಸದ ಸುನಿಲ್ ಬೋಸ್ ಜನ್ಮ ದಿನ ಆಚರಣೆ


ಬ್ಲಾಕ್ ಕಾಂಗ್ರೆಸ್ ಕಚೇರಿ ಮುಂಭಾಗ ಅನ್ನ ದಾಸೋಹ ಮಾಡುತ್ತಿರುವುದು.

ಯಳಂದೂರು, ಆ.31– ಚಾಮರಾಜನಗರ ಲೋಕಸಭಾ ಸಂಸದ ಸುನಿಲ್ ಬೋಸ್ ಅವರ ಜನ್ಮ ದಿನಾಚರಣೆ ಪ್ರಯುಕ್ತ ಪಟ್ಟಣದ ಬ್ಲಾಕ್ ಕಾಂಗ್ರೆಸ್ ಕಚೇರಿ ಮುಂಭಾಗ ಕಾಂಗ್ರೆಸ್ ಮುಖಂಡರಿಂದ ಅನ್ನ ದಾಸೋಹ ಮತ್ತು ಕೇಕ್ ಕಟ್ ಮಾಡುವ ಮೂಲಕ ಸಂಸದರ ಜನ್ಮದಿನಾಚರಣೆಯನ್ನು ಆಚರಿಸಲಾಯಿತು.

ಮುಖಂಡ ಕಿನಕಹಳ್ಳಿ ರಾಚಯ್ಯ ಮಾತನಾಡಿ, ಸಮಸ್ಯೆಗಳಿಗೆ ಸ್ಥಳದಲ್ಲಿ ಪರಿಹಾರ ಕಲ್ಪಿಸುವ ಜನನಾಯಕ ಸುನಿಲ್ ಬೋಸ್ ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು. ಸಾಮಾಜಿಕ ಚಿಂತನೆ, ರಾಜಕೀಯ ಚತುರತೆ, ಸಾಮಾಜಿಕ ಕಾಳಜಿ, ಸರ್ವರನ್ನು ಸಮಾನರಾಗಿ ಕಾಣುವ ಹೃದಯವಂತಿಕೆ ಮೈಗೂಡಿಸಿಕೊಂಡಿದ್ದು ತಾಯಿ ಚಾಮುಂಡೇಶ್ವರಿ ಸಂಸದರಿಗೆ ಹಾಗೂ ಅವರ ಕುಟುಂಬಕ್ಕೆ ಇನ್ನೂ ಹೆಚ್ಚಿನ ಅಭಿವೃದ್ಧಿಯನ್ನು ಕೊಡಲಿ ಮತ್ತು ಆಯಸ್ಸು ನೀಡಲಿ ಎಂದು ಶುಭ ಕೋರಿದರು.

ಮುಖಂಡ ಮದ್ದೂರು ನಾರಾಯಣಸ್ವಾಮಿ ಮಾತನಾಡಿ, ಚಾಮರಾಜನಗರ ಲೋಕಸಭಾ ಕ್ಷೇತ್ರದ ಜನಪ್ರಿಯ ಸಂಸದರು, ಯುವಕರ ಕಣ್ಮಣಿ ಸುನಿಲ್ ಬೋಸ್ ಅವರಿಗೆ ರಾಷ್ಟ್ರೀಯ ಮಟ್ಟದಲ್ಲಿ ಇನ್ನೂ ಹೆಚ್ಚಿನ ಹುದ್ದೆ ದೊರಕಲಿ ಮತ್ತು ಚಾಮರಾಜನಗರ ಲೋಕಸಭಾ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿ ಮಾಡಲಿ ಎಂದರು.

ಇದೇ ವೇಳೆ ನೂರಾರು ಜನರಿಗೆ ಅನ್ನ ಸಂತರ್ಪಣೆ ಮಾಡಲಾಯಿತು. ಮುಖಂಡರಾದ ಜನಾರ್ದನ್, ಇರಸವಾಡಿ ಸೋಮಣ್ಣ, ಚಕ್ರವರ್ತಿ ಮದ್ದೂರು, ವೈ.ಕೆ.ಮೋಳೆ ದೊಡ್ಡಯ್ಯ, ಶಿವನಂಜಯ ಮಸಣಾಪುರ, ಮಲ್ಲು, ಗೋವಿಂದು, ಸಿದ್ದರಾಜು ಕೆಸ್ತೂರು, ನಾಗಶೆಟ್ಟರು, ಸುಗಂಧರಾಜು, ಗುಂಬಳ್ಳಿ ಮಹದೇವು, ಪುಟ್ಟಸ್ವಾಮಿ ಹೊಂಗನೂರು, ಹೊಂಗನೂರು ನವೀನ್, ಶ್ರೀಕಂಠ ಸ್ವಾಮಿ ಯರಿಯೂರು ಸೇರಿದಂತೆ ನೂರಾರು ಕಾಂಗ್ರೆಸ್ ಮುಖಂಡರು ಹಾಜರಿದ್ದರು.

ಕೃಷಿ ಹೊಂಡದಲ್ಲಿ ಮಹಿಳೆ, ಯುವಕನ ಶವ ಪತ್ತೆ

ಹನೂರು: ಕೃಷಿ ಹೊಂಡದಲ್ಲಿ ಮಹಿಳೆ ಹಾಗೂ ಯುವಕನ ಶವ ಪತ್ತೆಯಾಗಿದೆ. ಹನೂರು ತಾಲೂಕಿನ ಒಡೆಯರಪಾಳ್ಯ ಸಮೀಪದ ಗುಳ್ಯದ ಬಯಲು ಗ್ರಾಮದಲ್ಲಿ ಈ ಅನುಮಾನಸ್ಪದ ಘಟನೆ ಸಂಭವಿಸಿದ್ದು, ಹನೂರು ತಾಲೂಕಿನ ಗುಳ್ಯದ ಬಯಲು ಗ್ರಾಮದ ಮೀನಾಕ್ಷಮ್ಮ (32) ಹಾಗೂ ರವಿ (30) ಮೃತಪಟ್ಟವರಾಗಿದ್ದಾರೆ.

ಘಟನೆಯ ವಿವರ: ಮೀನಾಕ್ಷಮ್ಮ ವಿವಾಹಿತೆಯಾಗಿದ್ದು, ಎರಡು ಮಕ್ಕಳು ಕೂಡ ಇದ್ದಾರೆ. ರವಿ ಅವಿವಾಹಿತನಾಗಿದ್ದು, ತಂದೆ ಸಾವಿನ ಬಳಿಕ ಕೃಷಿ ಚಟುವಟಿಕೆಯನ್ನು ನೋಡಿಕೊಳ್ಳುತ್ತಿದ್ದರು. ಕಳೆದ 10 ವರ್ಷಗಳಿಂದ ಮೀನಾಕ್ಷಮ್ಮ ರವಿ ಜಮೀನಿನಲ್ಲಿ ಕೂಲಿ ಕೆಲಸಕ್ಕೆ ತೆರಳುತ್ತಿದ್ದರು.

ಹನೂರು ಬಳಿ ಅನುಮಾನಸ್ಪದ ಘಟನೆ



ಶನಿವಾರ ಸಂಜೆ 5ರ ತನಕವೂ ಕೂಡ ಜಮೀನಿನಲ್ಲಿ ಬೆಳ್ಳುಳ್ಳಿ ಕಟಾವು ಮಾಡಿ ಬಳಿಕ ಮನೆಗೆ ತೆರಳಿದ್ದ ಮೀನಾಕ್ಷಮ್ಮ ಮನೆಯಲ್ಲಿ ನೀರಿಲ್ಲ, ರವಿ ತೋಟದಲ್ಲಿ ಮೋಟಾರ್ ಚಾಲು ಮಾಡಿ ಬರುತ್ತೇನೆಂದು ಹೋದವರು ಕೃಷಿ ಹೊಂಡದಲ್ಲಿ ಪತ್ತೆಯಾಗಿದ್ದಾರೆ. ಇವರಿಬ್ಬರು ಕೃಷಿ ಹೊಂಡದಲ್ಲಿ ಬಿದ್ದು ಸಾಯಲು ಕಾರಣವೇನು? ಎಂಬ ಅನುಮಾನ ವ್ಯಕ್ತವಾಗಿದೆ.

ಇನ್ಸ್‌ಪೆಕ್ಟರ್ ಭೇಟಿ: ಹನೂರು ತಾಲೂಕಿನ ಒಡೆಯರ ಪಾಳ್ಯ ಸಮೀಪದ ಗುಳ್ಯದ ಬಯಲು ಗ್ರಾಮದ ತೋಟದ ಜಮೀನೊಂದರ ಕೃಷಿ ಹೊಂಡದಲ್ಲಿ ಇಬ್ಬರ ಶವಗಳು ತೇಲಾಡುತ್ತಿರುವ ಬಗ್ಗೆ ಮಾಹಿತಿ ತಿಳಿಯುತ್ತಿದ್ದಂತೆ ಹನೂರು ಠಾಣೆಯ ಇನ್ಸ್‌ಪೆಕ್ಟರ್ ಆನಂದಮೂರ್ತಿ ಹಾಗೂ ಸಿಬ್ಬಂದಿವರ್ಗದವರು ಭೇಟಿ ನೀಡಿ ಪರಿಶೀಲನೆ ನಡೆಸಿ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ.

ಸಂದೇಶ್ ನಾಗರಾಜ್ ಅವರಿಗೆ ಹುಟ್ಟುಹಬ್ಬದ ಶುಭಾಶಯ



ವಿಧಾನಪರಿಷತ್ ಮಾಜಿ ಸದಸ್ಯರು ಹಾಗೂ ಉದ್ಯಮಿಗಳಾದ ಸಂದೇಶ್ ನಾಗರಾಜ್ ಅವರಿಗೆ ಹುಟ್ಟುಹಬ್ಬದ ಅಂಗವಾಗಿ ಹಿರಿಯ ಗಾಯಕ ಕಲಾವಿದರಾದ ಚಾರ್ಜ್ ಪ್ರಭಾಕರ್, ಚಿತ್ರ ನಿರ್ಮಾಪಕ ಕುಮಾರಸ್ವಾಮಿ, ಬಿಜೆಪಿ ಮುಖಂಡರಾದ ವಿ.ಗಿರಿಧರ್, ಸತೀಶ್, ಸನ್ಮಾನಿಸಿ, ಶುಭಾಶಯ ಕೋರಿದರು.

ಎ.ಎಸ್.ಮಧುಗೆ ಪಿಎಚ್.ಡಿ



ಮೈಸೂರು: ಡಾ.ಕೆ.ಜಾನಕಿ ರಾಮನ್, ಡಾ.ಕೆ.ತೆನ್ನರಸು ಮತ್ತು ಡಾ.ಅಜಿತ್ ಬಿ. ದಹಲೆ ಅವರ ಮಾರ್ಗದರ್ಶನದಲ್ಲಿ ಎ.ಎಸ್. ಮಧು ಅವರು ಕೋವಿಡ್‌ನಿಂದ ಮಾನಸಿಕ ಪರಿಣಾಮ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಬೆಂಗಳೂರಿನ ನಿಮ್ಹಾನ್ಸ್ ಸಂಸ್ಥೆ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ನಿರ್ಮಲಧಾರೆ ಸಲ್ಯೂಷನ್ಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
Mob: 9740893554

PG. ಯಲ್ಲಿ ವಾರ್ಡನ್ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. ಕಡ್ಡಾಯವಾಗಿ PGಯಲ್ಲೆ ಉಳಿಯಬೇಕು, ಊಟ, ವಸತಿ ಇರುತ್ತದೆ, ಆಕರ್ಷಕ ಸಂಬಳ
9900944982, 9535744143

Life Partner
ಆಗಲು, Govt Job ವಿಚ್ಛೇದಿತೆಗೆ 2ನೇ ಸಂಬಂಧಕ್ಕೆ ವರಬೇಕಾಗಿದ್ದಾರೆ.
ಹಿಂದು ನಾಯಕ age 36/5.4/ M.com (FDA) Judicial Department Govt Job Salary 65000/- ಇರುವಂತಹ. ವಿದ್ಯಾವಂತ ವಿಚ್ಛೇದಿತೆಗೆ 2ನೇ ಸಂಬಂಧಕ್ಕೆ ನೌಕರಸ್ಥ, ವ್ಯಾಪಾರಸ್ಥ, ವಿಧುರ, ವಿಚ್ಛೇದಿತ ಹಾಗೂ ವಿದ್ಯಾವಂತ ವರ ಬೇಕಾಗಿದ್ದಾರೆ. ಮಕ್ಕಳಿದ್ದರೂ ಪರವಾಗಿಲ್ಲ. (ಸರಳ ವಿವಾಹಕ್ಕೆ ಮೊದಲ ಆದ್ಯತೆ), ಮೈಸೂರು
9742458242

ರವಿ ಮೆಲೊಡೀಸ್ ಆರ್ಕೆಸ್ಟ್ರಾ
ಗೌರಿ-ಗಣೇಶ ಹಬ್ಬದ ಅಂಗವಾಗಿ ಆರ್ಕೆಸ್ಟ್ರಾ ಕಾರ್ಯಕ್ರಮಗಳನ್ನು ಬುಕ್ಕಿಂಗ್ ಮಾಡಲು ಸಂಪರ್ಕಿಸಿ.
ಮೊ: 9964587655, 8553602626

ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ
ಮಹಿಳೆಯರಿಗೆ ಆದ್ಯತೆ (ಬ್ರಾಹ್ಮಣರಿಗೆ ಮಾತ್ರ) ಚಾಮುಂಡಿಪುರಂ ಅಥವಾ ಅಗ್ರಹಾರದ ಸುತ್ತಮುತ್ತ ವಾಸಿಸುವವರು. ಸಂಪರ್ಕಿಸಿ
9900520298

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಕಂಪನಿಗಳಲ್ಲಿ ಕೆಲಸ ಮಾಡಲು ಅನುಭವವುಳ್ಳ ಅಕೌಂಟೆಂಟ್‌ಗಳು, CNC ಮೆಷಿನ್ ಆಪರೇಟರ್‌ಗಳು, ವೆಲ್‌ಡರ್‌ಗಳು, ಟೈಲರ್‌ಗಳು ಹಾಗೂ ಡ್ರೈವರ್ ಕಂ ಮಾರ್ಕೆಟಿಂಗ್‌ಗೆ ಬೇಕಾಗಿದ್ದಾರೆ.
8105249880, 7795285485

ಬೇಕಾಗಿದ್ದಾರೆ
ಹೋಟೆಲ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಕೌಂಟರ್, ಸಪ್ಲೇಯರ್ ಮತ್ತು ದೋಸೆ ಭಟ್ಟರು
9606238790, 9986998606

BHADRAKALI GIFTS N PRINTS
Shivrampete, Mysuru
ಹಬ್ಬ, ಕಾರ್ಯಕ್ರಮಗಳು ಮತ್ತು ತಂಡಗಳ ಕಸ್ಟಮೈಸ್ ಟೀ-ಶರ್ಟ್‌ಗಳಿಗಾಗಿ ಸಂಪರ್ಕಿಸಿ!
Contact for Customized T-Shirts for Events, Festivals & Teams



0821 4535303, 7996487655

ಬೇಕಾಗಿದ್ದಾರೆ
ಕೊಡಗು ಜಿಲ್ಲೆಯ ಹೋಟೆಲ್‌ವೊಂದಕ್ಕೆ ಸಪ್ಲೈಯರ್ಸ್ ಬೇಕಾಗಿದ್ದಾರೆ
9986669892
6362610799

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ನೈಟ್ ಶಿಫ್ಟ್ ಕೆಲಸಕ್ಕಾಗಿ ಪುರುಷರು/ಹುಡುಗರು ಬೇಕಾಗಿದ್ದಾರೆ.
ಸಂಬಳ : 15000/–
7899754149

ಮನೆ ಮಾರಾಟಕ್ಕೆ /ಭೋಗ್ಯಕ್ಕೆ
30x40 ಸೌತ್‌ಈಸ್ಟ್, ಗ್ರೌಂಡ್ ಫ್ಲೋರ್, 1st and 2nd ಡ್ಯುಪ್ಲೆಕ್ಸ್, D ಬ್ಲಾಕ್, ಜೆ.ಪಿ.ನಗರ, ಪೊಲೀಸ್ ಬೂತ್ ಹತ್ತಿರ, ಮೈಸೂರು
9632023090

ಶ್ರೀ ಸಂಜೀವಿನಿ ಗೋಲ್ಡ್
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ಬಿಡಿಸಿ ಉಳಿದ ಹಣವನ್ನು ತಕ್ಷಣ, ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ. ಒಂದು ಗ್ರಾಂ ಚಿನ್ನಕ್ಕೆ : 9400(24CT)
9108146123

HOUSE FOR SALE
MUDA, 30x40 South Facing, Near Triveni Circle, Dr. Rajkumar Road, Triplex Home, "Own Construction House". Brokers Excuse.
8095583671, 8497049555

30x40 ಅಳತೆಯ ನಿವೇಶನಗಳು ದೊರೆಯುತ್ತವೆ
ರಮಣಶ್ರೀ ಸೆರೇನ್ ವಸತಿ ಬಡಾವಣೆ (ವರುಣ) ಟಿ.ನರಸೀಪುರ ರಸ್ತೆ, ಸುತ್ತೂರು ರಾಜ್ಯ ಹೆದ್ದಾರಿಯಲ್ಲಿ ನೋಂದಾವಣೆಗೆ ಮತ್ತು ಮನೆ ನಿರ್ಮಿಸಲು ಸಿದ್ಧವಿರುತ್ತದೆ, ಬ್ಯಾಂಕ್ ಸಾಲ ಸೌಲಭ್ಯವಿರುತ್ತದೆ.
ಶ್ರೀ ರಮಣಶ್ರೀ ಡೆವಲಪರ್ಸ್
7411914135

ಸೈಟ್ ಮಾರಾಟಕ್ಕಿದೆ
30x40 ಅಳತೆಯ ಸೈಟ್‌ನಂ. 50, ಜೆ.ಪಿ.ನಗರದ ಕಾಮಾಕ್ಷಿ ಆಸ್ಪತ್ರೆ ಹತ್ತಿರ, ಎಸ್‌ಆರ್‌ಎಸ್ ಪ್ರಕೃತಿನಗರ, ಮೈಸೂರು ಹೆಚ್.ಡಿ.ಕೋಟೆ ಮುಖ್ಯರಸ್ತೆಯಲ್ಲಿ
9880808458

ಬಸವ ಮಾರ್ಗ ವ್ಯಸನಮುಕ್ತ ಕೇಂದ್ರ (ರಿ)
54ನೇ ಉಚಿತ ಕುಡಿತ ಬಿಡಿಸುವ ಶಿಬಿರ.
ಸೆಪ್ಟೆಂಬರ್ 7 ರಿಂದ 16ರ ವರೆಗೆ.
8803344999
9742559999

ಸೈಟ್/ಮನೆ ಮಾರಾಟಕ್ಕಿದೆ
20x30 Duplex 3 BHK 30x40 3 BHK G/F Floor ಲಲಿತಾದ್ರಿನಗರ Near Ring Road, 50x80, 40x60, 30x50 Site ಪರಶುರಾಮನಗರ ಭುಗತಗಳ್ಳಿ ಗೇಟ್, ಬನ್ನೂರು ರಸ್ತೆ 30x40 Site MUDA ಸಾತಗಳ್ಳಿ 2ನೇ ಹಂತ, Clear Title Deed
9448938989, 7892035789

ನಿವೇಶನ ಮಾರಾಟಕ್ಕಿದೆ
ಮೈಸೂರು ಸಿಟಿ ರಿಂಗ್ ರಸ್ತೆ (ಲಿಂಗಾಂಬುದಿ ಗ್ರಾಮ) ಮಾಲಗಾಲಮ್ಮ ದೇವಸ್ಥಾನ ಮತ್ತು LOC ಪೆಟ್ರೋಲ್ ಬಂಕ್ ಮಧ್ಯ ಬರುವ MARS ಗೋಲ್ಡನ್ ರೆಸ್ಟೋರೆಂಟ್ ಹಿಂಭಾಗ ಸೈಟ್ ನಂ 80 ದಕ್ಷಿಣಾಭಿಮುಖ, 50 ಅಡಿ ರಸ್ತೆಯುಳ್ಳ 30x40 ಅಡಿ ಉಳ್ಳ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮತ್ತು ಇತರೆ ಬ್ಯಾಂಕ್ ನೌಕರರ ಬಡಾವಣೆಗೆ ಸೇರಿದ ನಿವೇಶನ
9686379169

House for Sale
New 3 BHK independent house, East face @ Lalithadri Nagar (South) near Ring Road, Behind Indian Oil Petrol Bunk.
9110696752, 9663452259

SBIT ಟ್ರಾವೆಲ್ಸ್
ಚಾರ್‌ಧಾಮ್ ಯಾತ್ರೆ 2025
18 ಸೆಪ್ಟೆಂಬರ್
ವಿಮಾನ ಟಿಕೇಟ್‌ಗಳು / ಹೋಟೆಲ್ / ಊಟ / ಪ್ರವೇಶ ಟಿಕೇಟ್‌ಗಳು / ಎಲ್ಲಾ ಪ್ರವಾಸಗಳು
Mob: 9343524127
(ಸರಸ್ವತಿಪುರಂ, ಮೈಸೂರು)

ದಸರಾ ಹಬ್ಬದ ಪ್ರಯುಕ್ತ ಎಲ್ಲ ಪ್ರವಾಸಗಳು ಎಸಿ ಬಸ್ಸಿನಲ್ಲಿ ಇರುತ್ತದೆ
6 ದಿನಗಳ ಶಿರಡಿ ಪ್ರವಾಸ ಪಂಢರಪುರ, ತ್ರಯಂಬಕೇಶ್ವರ, ಗೃಷ್ಣೇಶ್ವರ, ಭೀಮಾಶಂಕರ, ಮಿನಿ ಬಾಲಾಜಿ, ಕೊಲ್ಲಾಪುರ, ಸವದತ್ತಿ 3/10/25 7 ದಿನಗಳ ಕೇರಳ ಪ್ರವಾಸ ಗುರುವಾಯುರ್, ಮುನ್ನಾರ್, ಕಾಲಡಿ, ತೇಕಾಡಿ, ಅಲೆಪ್ಪಿ 3/10/25, 6 ದಿನಗಳ ಗೋವಾ ಮತ್ತು ಗೋಕರ್ಣ ಪ್ರವಾಸ, ದಾಂಡೇಲಿ, ದೂಧ್ ಸಾಗರ್, ಸಹಸ್ರಲಿಂಗ 3/10/25, 5 ದಿನಗಳ ಆಂಧ್ರ ಪ್ರದೇಶ ಪ್ರವಾಸ ಮಂತ್ರಾಲಯ, ಹೈದರಾಬಾದ್, ಶ್ರೀ ಶೈಲಂ, ಅಹೋಬಲಂ, ಮಹಾ ನಂದಿ 3/10/25 ಸುವರ್ಣ ಯಾತ್ರಾ
9480843945 / 9019462508

ತಕ್ಷಣ ಬೇಕಾಗಿದ್ದಾರೆ
ಅನುಭವಸ್ಥ ಅಕೌಂಟ್, ಕಂಪ್ಯೂಟರ್ ಬಗ್ಗೆ ತಿಳಿದ ಮಹಿಳಾ ಬಿಕಾಂ ಪದವೀಧರರು ಕೂಡಲೇ ದಾಖಲೆಗಳನ್ನು ಕಳುಹಿಸಿರಿ.
Email: globalagribiotech2014@gmail.com
7996035215

ತಕ್ಷಣ ಬೇಕಾಗಿದ್ದಾರೆ
RBI ಮತ್ತು ಮೇಟಗಳ್ಳಿ ಸುತ್ತಮುತ್ತಾ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು
ಸಂಬಳ : 20,000 + W/o (8hrs)
ಊಟ ತಿಂಡಿ ವ್ಯವಸ್ಥೆ ಇರುತ್ತದೆ.
ಸಂಪರ್ಕಿಸಿ
9880727819, 9620667819

SITE FOR SALE
40x60 at Saraswathipuram & Dattagalli, 30x40 at Ramakrishna Nagar Dattagalli and Rajeev Nagar (Tippu Nagar), 20x30 at Ganganagar(Hale Kasare)
7353430309

ತಕ್ಷಣ ಬೇಕಾಗಿದ್ದಾರೆ
ವಯಸ್ಸು : 25 ರಿಂದ 40
ವಿದ್ಯಾರ್ಹತೆ : ಪಿಯುಸಿ/ಡಿಗ್ರಿ
ಬೇಸಿಕ್ ಕಂಪ್ಯೂಟರ್ ತಿಳಿದಿರುವ ಮಹಿಳಾ ಅಭ್ಯರ್ಥಿಗಳು ಮಾತ್ರ.
ಸಂಪರ್ಕಿಸಿ
9353291954
(ಸ್ಥಳ : ವಿದ್ಯಾರಣ್ಯಪುರಂ/ಸರಸ್ವತಿಪುರಂ, ಮೈಸೂರು)

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : ಎಸ್‌ಎಸ್‌ಎಲ್‌ಸಿ ಮತ್ತು ಮೇಲ್ಪಟ್ಟು
ಸಂಬಳ : 18000 +W/o (8hrs)
ವಯೋಮಿತಿ 50 ವರ್ಷದ ಒಳಗಿರಬೇಕು
ಊಟ, ತಿಂಡಿ ವಸತಿ ಸೌಲಭ್ಯವಿರುತ್ತದೆ.
9620777819, 9620667819

Solar Water Heaters
Built for Modern Living
20 ವರ್ಷಗಳ ವ್ಯಾರಂಟಿ



SUNZONE SOLAR SYSTEM
VM Double Road, Kuvempunagar, Mysuru
9845175443

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ನಿವೇಶನ ಮಾರಾಟಕ್ಕಿದೆ
3340 sq.ft ಖಾಲಿ ಜಾಗ ಮಾರಾಟಕ್ಕಿದೆ
Build Residential House, or Godown, Garage. A Khata Mysore City Corporation Limit.
ಬ್ಯಾಂಕಿನಿಂದ ಸಾಲ ಸೌಲಭ್ಯವಿದೆ
Rs.4500/- Per Sq Ft
ಸ್ಥಳ: ಹೊಸ ಕಾಮಾಕ್ಷಿ ಆಸ್ಪತ್ರೆ ಹತ್ತಿರ. ಜೆ.ಪಿ. ನಗರ, ಮೈಸೂರು
ಕೊಳ್ಳುವವರು ಮಾತ್ರ ಸಂಪರ್ಕಿಸಿ:
9900299714

MUDA APPROVED SITE'S FOR SALE @ S.S. LAYOUT
30X40, EAST FACING @ 25 LAKH'S, 40X27, NORTH FACING @ 26.5 LAKHS NEXT TO LALBAHADUR SHASHTRI NAGAR OFF T-NARSIPURA MAIN ROAD
7795609173

ಮನೆ ಮಾರಾಟಕ್ಕಿದೆ
20x30 MUDA 2 BHK ಮನೆ 40 ಲಕ್ಷ ಕೆಸರೆ 3ನೇ ಹಂತ
35x40 ಸೈಟ್ ನಮೂನೆ 3 ಖಾತೆ – 17 ಲಕ್ಷ
20x40 ಸೈಟ್ – 12 ಲಕ್ಷ
K.S. ಹುಂಡಿ, ಮೈಸೂರು
S.B.R. -9900840025

ಕಛೇರಿ ಕೆಲಸಕ್ಕೆ ಬೇಕಾಗಿದ್ದಾರೆ
ವಯಸ್ಸು : 21–32
ವಿದ್ಯಾಭ್ಯಾಸ : PUC ಅಥವಾ ಯಾವುದೇ ಪದವಿ
ಸಂಬಳ : 10,000 to 20,000, ಸ್ಥಳ : ಹುಣಸೂರು, ಹೆಚ್.ಡಿ.ಕೋಟೆ, ಗದ್ದಿಗೆ
8904341417, 7411122619

ಜಾಗ ಅಥವಾ ಸೈಟು ಬೇಕಾಗಿದೆ
ಜನ್‌ಧನ್ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಮೈಸೂರಿನಿಂದ ಸುಮಾರು ಹದಿನೈದು ಕಿಲೋಮೀಟರ್ ವ್ಯಾಪ್ತಿ ಒಳಗಡೆ ಸೈಟುಗಳು ಮತ್ತು ಜಾಗ ಬೇಕಾಗಿದೆ. ಆಸಕ್ತರು ಸಂಪರ್ಕಿಸಿ:
80500-52444 / 99809-59598
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

WANTED
- Telecallers
- Marketing Manager
- TV Anchors
- PigMe Collection Boy
- Office Assistant

9980 95 95 98

Filing Income Tax Returns (AY 25-26)
Dear Taxpayers, Kindly file your Income Tax returns on or before Sept 15, 2025 for FY 2024-25.
Contact: 6360706747
Email: paauditoffice@gmail.com

AFFIDAVIT
I, Likhitha Patel H.R., D/o Ravikumar H.M., residiing at #980, 7th Main, Hebbal 1st Stage, Mysore, my correct name is Likhitha Patel H.R. on my Aadhar Card & other documents. In my Kotak Mahendra Bank (A/c No. 8850843471), Kumbarakoppalu Branch, Mysuru, my name was mentioned as Likitha Patel & H.R. is missing. Hence I make this affidavit that both names belongs to me, swear in before Notary C. Mangala on 6-8-2025.
Sd/- Likhitha Patel H.R.

REQUIRED
HOSTEL WARDENS
MALE Graduate with relevant experience in a Residential PU College.
Remuneration as per industry norms. Accommodation with PF & ESI facilities.
Contact:
9108481695

SALES GIRLS NEEDED
Required a basic Degree and basic Computer skills, Staying in Chamundipuram, Vidyaranyapuram only Preferred
9900520298, 8762139455

---

4 BHK, 40x60 North Facing 10 Years Old Building 2Cr at Vijayanagar 1st Stage, Mysore
9036665888

ಶ್ರೀ ಮಣಿಕಂಠ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7022059340

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8296341145

ಅತ್ಯುತ್ತಮವಾದ ಮನೆ ಕಟ್ಟಿಕೊಡಲಾಗುವುದು
ಒಂದು ಚದುರಕ್ಕೆ 1,80,000/– ರೂ.ನಂತೆ ಉತ್ತಮ ಗುಣಮಟ್ಟದಲ್ಲಿ ಎಲ್ಲಾ ಸಿಟಿ ಹಾಗೂ ಹಳ್ಳಿಗಳಲ್ಲಿ ಮನೆ ಕಟ್ಟಿಕೊಡಲಾಗುವುದು.
Mob: 9620377533

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

HOUSE FOR LEASE/RENT
30X40 EAST FACING 2 BHK Ground Floor (with Parking) Bramapura Layout, Mysore-Bangalore Main Road, Mysore-77
9902298286

---

3 BHK, HOUSE FOR SALE
NORTH FACING 30X45 9 Years old Building 1.05 Cr (Slightly Negotiable) at Vijayanagar 1st Stage, Near Union bank, Mysore
9036665888

Wanted Vacant site for Lease / Rent
Vacant site measuring 4500 sq.ft. and above attached to Ring Road, from Bogadi Circle to Infosys Circle for lease / rent. Interested persons may contact:
9538883911, 9480198212

ಹೌಸ್‌ಕೀಪಿಂಗ್ & ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ
ಜೆ.ಪಿ. ನಗರ, ಸಿದ್ದಾರ್ಥ ಲೇಔಟ್ ಮತ್ತು ಶಿವರಾಂಪೇಟೆ. PF + ESI ಸೌಲಭ್ಯವಿರುತ್ತದೆ. ಸಂಬಳ: 12,000.
9901607889, 8710040058

SITE FOR SALE
40x60 North Roopa Nagar.
Call: 9880273834

ಮನೆ ಭೋಗ್ಯಕ್ಕೆ ಇದೆ
2 BHK (30x40 Ground floor), ರಾಜೀವ್‌ನಗರ, ರಿಂಗ್ ರಸ್ತೆ, ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಹತ್ತಿರ, ಮೈಸೂರು
8762101799, 8431946515

PRAKRUTHI PROPERTIES
FOR SALE
30x40@ 22 lakhs Near RT Nagar
BSNL Lyt Sites Also Avl.
Apartments @ Ramakrishna Nagar
Residential & Commercial Plots in & around Mysore
20x30 New 2BHK House, As Per your Plan With Interiors @ Just 42 Lakh in Bogadi
95386 90359, 90359 90359

JOBS
Kadkola Industrial Area
1) Machine Operators -5no B.E. Mech/ I.P, Diploma, ITI
2) Electrical Executive -1no B.E Elec/Diploma
3) Electrical Helper -1no
4) Accounts Executive -1no
Email : job.btcmysore@gmail.com
whatsapp resume
9019323999

WANTED
Delivery Drivers
Salary 30000 to 35000
8310381391
7892156457

ಉದ್ಯೋಗ ಅವಕಾಶ
ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್/ಫೇಲ್ ಆದ ಯುವಕ ಯುವತಿಯರು ಇಂದೇ ಬೇಕಾಗಿದ್ದಾರೆ
ESI / PFನೊಂದಿಗೆ ಊಟ ವಸತಿಯಿರುತ್ತದೆ
ಸಂಬಳ+ಓಟಿ 15200–86000
7892046990

ತಾರಸಿ ಸೋರುವಿಕೆ & ಸಂಪ್ ಲೀಕೇಜ್ ಬಣ್ಣದ ಕೆಲಸ ಮಾಡಿ ಕೊಡಲಾಗುವುದು
9591830124

ಸೈಟು ಬೇಕಾಗಿದೆ
ಚಿಕ್ಕಹಳ್ಳಿ / ವಾಜಮಂಗಲ / ವರುಣ / ಜೆಎಸ್‌ಎಸ್ 2ನೇ ಹಂತ / ವರುಣ ಬಸವೇಶ್ವರ / ನಿರ್ಮಾಣ್‌ನಗರ / ಲಲಿತಾದ್ರಿನಗರ / ಪೊಲೀಸ್ ಲೇಔಟ್ ಹಾಗೂ ಅಕ್ಕಪಕ್ಕದ ಬಡಾವಣೆಗಳಲ್ಲಿ, ಟಿ.ನರಸೀಪುರ ರಸ್ತೆ / ಬನ್ನೂರು ರಸ್ತೆ.
9686071750

WANTED
Office Assistant In Siddhartha Layout (Computer Knowledge & Kannada Typing)
8904780185

ಕೆಲಸಕ್ಕೆ ಬೇಕಾಗಿದ್ದಾರೆ
ಯುವತಿಯರು ಮತ್ತು ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ. ಸಮಯ : full time (ಉಚಿತ ಊಟ, ವಸತಿಯೊಂದಿಗೆ). Day : 8am to 6pm, Night : 7Pm TO 7am
ಸೌಲಭ್ಯಗಳು : ESI, PF and ATTENDANCE BONUS
ಸಂಪರ್ಕಿಸಿ : 9606514441, 08214242351, 9606714441.

ಸೈಟ್ ಮಾರಾಟಕ್ಕಿದೆ
40x60 ಅಳತೆಯ ಉತ್ತರ ದಿಕ್ಕಿನ ಖಾಲಿ ನಿವೇಶನ ಮಾನಸಿನಗರ (V.T.U) ಕಾಲೇಜ್ ಹತ್ತಿರ, ಬನ್ನೂರು ರಸ್ತೆ, ಮೈಸೂರು.
9739703467, 9686895205

ಬೇಕಾಗಿದ್ದಾರೆ
ಹೆಸರಾಂತ ಕೊರಿಯರ್ ಸಂಸ್ಥೆಗೆ ಆಫೀಸ್ ಕೆಲಸಕ್ಕೆ ಹುಡುಗಿಯರು ಮತ್ತು ಬೆಳಗ್ಗೆ Part Time ಕೆಲಸಕ್ಕೆ (9 Am to 2 Pm) ಹುಡುಗರು ಬೇಕಾಗಿದ್ದಾರೆ. ಕಂಪ್ಯೂಟರ್ ಜ್ಞಾನ ಹೊಂದಿರತಕ್ಕದ್ದು
ಸಂಪರ್ಕಿಸುವ ಸಮಯ : ಬೆ. 10.30 Am to 6 Pm
9449871790, 9449870909

ಮನೆಯಿಂದಲೇ ಕೆಲಸ
ಗೃಹಿಣಿಯರು ವಿದ್ಯಾರ್ಥಿಗಳು, ವಯಸ್ಕರು ನಿಮ್ಮ ಬಿಡುವಿನ ವೇಳೆಯಲ್ಲಿ ಕುಳಿತು ಬುಕ್ ರೈಟಿಂಗ್ ಫಾರಂ ಫಿಲ್ಲಿಂಗ್, ಡಾಟಾ ಎಂಟ್ರಿ ವಾಟ್ಸಾಪ್ ಟೈಪಿಂಗ್, ಜ್ಯುವೆಲ್ಲರಿ ಪ್ಯಾಕಿಂಗ್ ಹಾಗೂ ಇನ್ನಿತರ ಕರಕುಶಲ ವಸ್ತುಗಳ ಪ್ಯಾಕಿಂಗ್ ಕೆಲಸಗಳು ಲಭ್ಯ. ವಯಸ್ಸಿನ ಮಿತಿ ಇಲ್ಲಾ ಬಿಡುವಿನ ವೇಳೆಯಲ್ಲಿ ಕೆಲಸ ಮಾಡಿ ಗಳಿಸಿ ತಿಂಗಳಿಗೆ 25000– ರಿಂದ 35000 ರವರೆಗೆ
ದಿವ್ಯ : 7829762983

ಬೇಕಾಗಿದ್ದಾರೆ
ಮೈಸೂರಿನ ಸುತ್ತ ಮುತ್ತ ಹೆಸರಾಂತ ಕಂಪೆನಿಗಳಲ್ಲಿ ಕೆಲಸ ಮಾಡಲು ಅನುಭವವುಳ್ಳ ಹೌಸ್ ಕೀಪಿಂಗ್ ಕೆಲಸ ಮಾಡಲು ಪುರುಷರು (MALE) ಬೇಕಾಗಿದ್ದಾರೆ ಕೆಲಸದ ಸ್ಥಳ: BMH(Easyday), ಇನ್ಫೋಸಿಸ್, ಹೆಬ್ಬಾಳ ಹತ್ತಿರ. ಮತ್ತು ವಿರಾಜಪೇಟೆ ರೆಸಾರ್ಟ್‌ನಲ್ಲಿ ಊಟ/ರೂಮ್ ವ್ಯವಸ್ಥೆಯಿರುತ್ತದೆ. ವಯೋಮಿತಿ 40 ವರ್ಷದ ಒಳಗೆ.
9900212487
9035050651

ಬೇಕಾಗಿದ್ದಾರೆ
PG ಯಲ್ಲಿ ಉಳಿದು ಅಡುಗೆ ಮಾಡಲು ಮತ್ತು ಸಹಾಯಕ ಮಹಿಳೆಯರು ಬೇಕಾಗಿದ್ದಾರೆ
ಸಂಪರ್ಕಿಸಿ
9845367333

ಮ್ಯಾಟ್ರಿಮೋನಿಯಲ್
ಸರ್ಕಾರಿ ಕೆಲಸದಲ್ಲಿರುವ, ಒಂದು ಮಗುವಿರುವ, 35 ವರ್ಷದ ವಿಚ್ಛೇದಿತ ಹುಡುಗಿಗೆ, ಸರ್ಕಾರಿ ಕೆಲಸದಲ್ಲಿರುವ ನಾಯಕ ಜಾತಿಯ ಒಳ್ಳೆಯ ಗುಣವಿರುವ, ಸಂಸ್ಕಾರಸ್ಥ ಹುಡುಗ ಬೇಕಾಗಿರುತ್ತಾರೆ.
Mob: 9513263681

ಮಾರಾಟಕ್ಕಿದೆ
ಮೈಸೂರು ಮಹಾನಗರ ಪಾಲಿಕೆ, ಶ್ರೀರಾಂಪುರ 1ನೇ ಹಂತ, ವಾರ್ಡ್ ನಂ. 64, 11ನೇ ಅಡ್ಡ ರಸ್ತೆಯಲ್ಲಿ ಉತ್ತರ ದಿಕ್ಕಿಗಿರುವ 30x40 ಅಡಿಯಲ್ಲಿ 3 ಅಂತಸ್ತಿನಲ್ಲಿ 1 ರೂಮ್, 1 ಬೆಡ್ ರೂಮ್, 2 ಬೆಡ್ ರೂಮ್ ಹಾಗೂ 3 ಬೆಡ್ ರೂಮಿನ ಡ್ಯುಪ್ಲೆಕ್ಸ್ ಮನೆಗಳನ್ನು ನಿರ್ಮಿಸಲಾದ ನಿವೇಶನ ಸಂಖ್ಯೆ 1617 ಮಾರಾಟಕ್ಕಿದೆ. ಆಸಕ್ತರು ಮೊಬೈಲ್ ಸಂಖ್ಯೆ ಸಂಪರ್ಕಿಸಿ
Mob: 8971476711

WANTED
Lady Receptionist - 1 Post
Lady Helper - 1 Post
Age Between - 18- 50 Years
Turn Style Hair Fixing
#40 Opp IDBI Bank, Double Road, Kuvempunagar, Mysore -23
Mobile
9845034559

WANTED
FOR DELIVARY ತಿಲಕ್‌ನಗರ, ಮೈಸೂರು
JOB ROLE DELIVERY EXECUTIVE (DELIVERY BOY) ಸಂಬಳ : ಮಾಸಿಕ ಪಾವತಿ ಮತ್ತು ಪರ್ ಶಿಪ್‌ಮೆಂಟ್ ಪಾವತಿ 18000–25000 ರೂ + ಪೆಟ್ರೋಲ್ ಭತ್ಯೆ ಮೊಬೈಲ್ ರೀಚಾರ್ಜ್ ಮತ್ತು ESI+PF ಸೌಲಭ್ಯಗಳು.
ಅಗತ್ಯ : ಬೈಕ್ ಮತ್ತು ಸ್ಮಾರ್ಟ್ ಮೊಬೈಲ್
HURRY UP & JOIN TODAY
8073831098, 8618396811

ತಕ್ಷಣ ಬೇಕಾಗಿದ್ದಾರೆ
ತಕ್ಷಣ ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ (ಸಂಬಳ 10,000 + Incentive). ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್. ಮೊಹಲ್ಲಾ. Field Executives ಬೇಕಾಗಿದ್ದಾರೆ (ಸಂಬಳ 15,000). ಸ್ಥಳ: ಮಂಡ್ಯ ಮತ್ತು ಹಾಸನ ಮತ್ತು ಮೈಸೂರು.
Mob: 8150005111

WANTED
Electrical Engineer
Qualification: Diploma / BE in Electrical Engineering (02 Male & 01 Female) (2 years+ experience in handling ESCOM, GK,WS and Linkline works) Driver (M) (Min 2-3yrs Exp. As Driver)
Contact
6366366388/9620624999
Call between: 10AM to 5PM
Mail your C.V to: acpltd123@gmail.com

WANTED
1. OFFICE EXECUTIVES & OFFICE STAFFS (M/F)
(Practical knowledge in Computer knowledge is must)
Part -time Job is also available
Salary – based on Experience
Place : Gokulam 3rd Stage, Mysuru.
Contact
9448031964/ 7795301535

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ತಿ.ನರಸೀಪುರ ತಾಲೂಕಿನಾದ್ಯಂತ ಸಂಸದ ಸುನೀಲ್ ಬೋಸ್ ಹುಟ್ಟುಹಬ್ಬ ಆಚರಣೆ

ವಿದ್ಯಾರ್ಥಿಗಳ ಭವಿಷ್ಯ ರೂಪಿಸಲಿವೆ ಉದ್ಯೋಗ ಮೇಳಗಳು

ತಿ.ನರಸೀಪುರ, ಆ.31– ಉದ್ಯೋಗ ಮೇಳಗಳು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಲಿದ್ದು ಮೇಳದ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಚಾಮರಾಜನಗರ ಕ್ಷೇತ್ರದ ಲೋಕಸಭಾ ಸದಸ್ಯ ಸುನೀಲ್ ಬೋಸ್ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ತಾಲೂಕಿನ ಬನ್ನೂರು ಪಟ್ಟಣದ ಫುಟ್ಬಾಲ್ ಮೈದಾನದಲ್ಲಿ ತಮ್ಮದೇ ಜನ್ಮದಿನದ ಅಂಗವಾಗಿ ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಸಾರಥ್ಯದಲ್ಲಿ ಆಯೋಜಿಸಲಾಗಿದ್ದ ಬೃಹತ್ ಉದ್ಯೋಗ ಮೇಳಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ವಿದ್ಯಾಭ್ಯಾಸ ಮುಗಿದ ನಂತರ ಉದ್ಯೋಗವನ್ನು ಹುಡುಕುವ ಉದ್ಯೋಗಾಕಾಂಕ್ಷಿಗಳಿಗೆ ಇಂತಹ ಉದ್ಯೋಗ ಮೇಳಗಳು ವರವಾಗಿ ಪರಿಣಮಿಸುತ್ತವೆ. ಎಷ್ಟೋ ವಿದ್ಯಾರ್ಥಿಗಳಿಗೆ ಕೆಲಸ ಹೇಗೆ ಗಿಟ್ಟಿಸಿಕೊಳ್ಳಬೇಕು, ಅದನ್ನು ಪಡೆಯಲು ಎಲ್ಲಿ ಅರ್ಜಿ ಸಲ್ಲಿಸಬೇಕೆಂಬ ಗೊಂದಲ ಇರುತ್ತದೆ ಅಂತಹ ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ಮೇಳಗಳು ದಾರಿ ದೀಪದಂತಾಗುತ್ತವೆ ಎಂದರು

ಅರ್ಜಿ ಸಲ್ಲಿಸುವ ಎಲ್ಲರಿಗೂ ಉದ್ಯೋಗ ಸಿಗುತ್ತದೆಂಬ ಭರವಸೆ ಇರುವುದಿಲ್ಲ. ಉದ್ಯೋಗಾವಕಾಶಗಳು ಸಾಕಷ್ಟಿದ್ದು, ನಿರಂತರ ಪ್ರಯತ್ನದಿಂದ ಉದ್ಯೋಗ ಗಿಟ್ಟಿಸಿಕೊಂಡು ತಮ್ಮ ಜೀವನ ರೂಪಿಸಿಕೊಳ್ಳಬಹುದಾಗಿದೆ. ಉದ್ಯೋಗ ಸಿಗಲಿಲ್ಲ ಎಂದು ಯಾರೂ ನಿರಾಶರಾಗದೇ ಮರಳಿ ಪ್ರಯತ್ನ ಮಾಡುತ್ತಿರಬೇಕು. ಪ್ರಯತ್ನಕ್ಕೆ ಫಲ ಸಿಕ್ಕೇ ಸಿಗುತ್ತದೆ



ತಿ.ನರಸೀಪುರ ತಾಲೂಕು ಬನ್ನೂರು ಪಟ್ಟಣದ ಫುಟ್ಬಾಲ್ ಮೈದಾನದಲ್ಲಿ ಭಾನುವಾರ ಆಯೋಜಿಸಿದ್ದ ಬೃಹತ್ ಉದ್ಯೋಗ ಮೇಳವನ್ನು ಸಂಸದ ಸುನೀಲ್ ಬೋಸ್ ಉದ್ಘಾಟಿಸಿದರು.

> ಯಾರೇ ಹುಟ್ಟುಹಬ್ಬ ಮಾಡಿಕೊಂಡರೂ ಅದನ್ನು ಅರ್ಥಪೂರ್ಣವನ್ನಾಗಿಸಲು ಮುಂದಾಗಬೇಕು, ಆಡಂಬರದ ಜನ್ಮ ದಿನ ಮಾಡಿ ಹಣ ವ್ಯರ್ಥ ಮಾಡುವ ಬದಲು ಸೇವಾ ಕಾರ್ಯಗಳೊಂದಿಗೆ ಆಚರಣೆ ಮಾಡಿಕೊಳ್ಳಬೇಕು, ಉದ್ಯೋಗ ಮೇಳ, ಆರೋಗ್ಯ ಶಿಬಿರ, ನಿರಾಶ್ರಿತರಿಗೆ ಸಹಾಯ ಮಾಡುವುದು, ರೋಗಿಗಳಿಗೆ ಹಣ್ಣು ಹಂಪಲು, ಮಕ್ಕಳಿಗೆ ಬಟ್ಟೆ ಕೊಡಿಸುವುದು ಸೇರಿದಂತೆ ಮತ್ತಿತರೆ ಸೇವಾ ಕಾರ್ಯದ ಮೂಲಕ ಹುಟ್ಟುಹಬ್ಬ ಆಚರಿಸಿಕೊಂಡು ಅದನ್ನು ಅರ್ಥಪೂರ್ಣವಾಗಿಸುವ ನಿಟ್ಟಿನಲ್ಲಿ ಪ್ರಯತ್ನ ಮಾಡಬೇಕು – **ಸುನೀಲ್ ಬೋಸ್**

ಎಂದು ವಿದ್ಯಾರ್ಥಿಗಳಲ್ಲಿ ಸ್ಫೂರ್ತಿ ತುಂಬಿದರು.

ಮೆಡಿಕಲ್, ಎಂಜಿನಿಯರಿಂಗ್ ಶಿಕ್ಷಣದಲ್ಲಿ ವಿದ್ಯಾರ್ಥಿಗಳಿಗೆ ಅವಕಾಶಗಳು ಸಾಕಷ್ಟಿವೆ. ಪದವಿ ಪಡೆದರೂ ಕೆಲಸ ಸಿಕ್ತಿಲ್ಲ. ನಮ್ಮ ರಾಜ್ಯದಲ್ಲಿ, ದೇಶದಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳು ಇವೆ. ಆದರೆ ಎಲ್ಲರಿಗೂ ಅಲ್ಲಿ ಉದ್ಯೋಗ ಸಿಗೋದಿಲ್ಲ. ನಾವು ನಿರೀಕ್ಷೆ ಮಾಡಿದಷ್ಟು ಉದ್ಯೋಗ ಸೃಷ್ಟಿ ಆಗಿಲ್ಲ. ಹೀಗಾಗಿ ಹೊಸ ಹೊಸ ಕೋರ್ಸ್‌ಗಳು ನಮ್ಮ ಮುಂದೆ ಇವೆ. ಇದಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದ ಸಂಸದರು ಅಚ್ಚುಕಟ್ಟಾಗಿ ಉದ್ಯೋಗಮೇಳ ಆಯೋಜನೆ ಮಾಡಿದ ಚೆಲುವರಾಜು ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತ ಪಡಿಸಿದರು. ಈ ವೇಳೆ ಕೆಲ ವಿದ್ಯಾರ್ಥಿಗಳಿಗೆ ನೇಮಕಾತಿ ಆದೇಶದ ಪತ್ರವನ್ನು ವಿತರಿಸಿದರು.

ಉದ್ಯೋಗ ಮೇಳದ ಆಯೋಜಕರಾದ ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಮಾತನಾಡಿ, ಸಂಸದರು ಹಾಗೂ ಸ್ನೇಹಜೀವಿಯಾದ ಸುನೀಲ್ ಬೋಸ್ ರವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಈ ಹಿಂದೆ ತಿ.ನರಸೀಪುರದಲ್ಲಿ ಉದ್ಯೋಗ ಮೇಳ ಆಯೋಜಿಸಿ ನೂರಾರು ವಿದ್ಯಾರ್ಥಿಗಳಿಗೆ ಉದ್ಯೋಗ ದೊರಕಿಸಿಕೊಡಲಾಗಿತ್ತು. ಈ ಬಾರಿ ಬನ್ನೂರು ಪಟ್ಟಣದಲ್ಲಿ ಮೊದಲ ಬಾರಿಗೆ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ. ಉದ್ಯೋಗ ಮೇಳ ಒಂದು ರೀತಿ ಸಂತೆ ಇದ್ದಂತೆ. ಎಷ್ಟೋ ಕಂಪನಿಗೆ ಕೆಲಸಗಾರರು ಬೇಕಿರುತ್ತಾರೆ ಆದರೆ ಅವರಿಗೆ ಸರಿಯಾದ ಅರ್ಹತೆ ಇರುವವರು ಸಿಕ್ಕಿರುವುದಿಲ್ಲ. ಅದೇ ರೀತಿ ವಿದ್ಯಾರ್ಥಿಗಳಿಗೆ ತಮ್ಮವಿದ್ಯಾರ್ಹತೆಗೆ ತಕ್ಕಂತೆ ಉದ್ಯೋಗ ಸಿಕ್ಕಿರುವುದಿಲ್ಲ. ಅವರಿಬ್ಬರನ್ನೂ ಒಟ್ಟಾಗಿ ಸೇರಿಸಿ ಉದ್ಯೋಗ ಕೊಡಿಸುವ ಪ್ರಯತ್ನ ಮಾಡಲಾಗುತ್ತದೆ.ಉದ್ಯೋಗ ಮೇಳದಲ್ಲಿ 99 ಕಂಪನಿಗಳು ಭಾಗವಹಿಸಿದ್ದು,ಅನೇಕ ಉದ್ಯೋಗಾಕಾಂಕ್ಷಿಗಳಿಗೆ ಕೆಲಸ ಕೊಡಿಸುವ ಮೂಲಕ ಸುನೀಲ್ ಬೋಸ್‌ರವರ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿಸಲು ಯೋಜನೆ ರೂಪಿಸಲಾಗಿದೆ ಎಂದರು.

> ಸದಾ ಕ್ರಿಯಾಶೀಲರಾಗಿರುವ ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಅವರ ಸಾರಥ್ಯದಲ್ಲಿ ಆಯೋಜಿಸಿರುವ ಉದ್ಯೋಗ ಮೇಳ ನಿಜಕ್ಕೂ ಯಶಸ್ವಿಯಾಗಿ ನಡೆದಿದೆ. ಮೇಳದ ಹಿಂದಿನ ಯಶಸ್ಸಿಗೆ ಹಲವಾರು ಮಂದಿ ಶ್ರಮಿಸಿದ್ದಾರೆ. ಎಲ್ಲರೂ ಇಂತಹ ಕಾರ್ಯಕ್ರಮ ಮಾಡಲು ಸಾಧ್ಯವಿಲ್ಲ. ಹಾಗಾಗಿ ತಾಲೂಕಿನಾದ್ಯಂತ ತಮ್ಮದೇ ರೀತಿಯಲ್ಲಿ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಎಲ್ಲರ ವಿಶ್ವಾಸ ಗಳಿಸಿರುವ ಚೆಲುವರಾಜು ರವರು ಶಾಸಕರಾಗಿ ಕ್ಷೇತ್ರದ ಜನಸೇವೆಯಲ್ಲಿ ತಮ್ಮನ್ನು ಮತ್ತಷ್ಟು ಹೆಚ್ಚಿನ ರೀತಿ ತೊಡಗಿಸಿಕೊಳ್ಳಲಿ
>
> **–ಸುಧಾ ಮಹದೇವಯ್ಯ, ಜಿಪಂ ಮಾಜಿ ಸದಸ್ಯೆ**

ಮಾಜಿ ಶಾಸಕಿ ಜೆ.ಸುನೀತಾ ವೀರಪ್ಪಗೌಡ ಮಾತನಾಡಿದರು.

ಮಾಜಿ ಶಾಸಕರಾದ ಡಾ.ಎನ್.ಎಲ್.ಭಾರತಿ ಶಂಕರ್, ಧರ್ಮಸೇನಾ,ಮಾಜಿ ಜಿ.ಪಂ ಸದಸ್ಯರಾದ ಮಂಜುನಾಥ್, ತಿ.ನರಸೀಪುರ ಪುರಸಭೆಯ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್, ಎಂ.ಸುಧೀರ್, ಹಿರಿಯ ಸಹಕಾರಿ ವೈ.ಎನ್.ಶಂಕರೇಗೌಡ, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ರಾಜಣ್ಣ, ಹಿಂದುಳಿದ ವರ್ಗಗಳ ಜಿಲ್ಲಾಧ್ಯಕ್ಷ ಎ.ಎನ್.ಸ್ವಾಮಿ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ತುರುಗನೂರು ಪ್ರಸನ್ನ,ಸಾಮಿಲ್ ಇಂದ್ರೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚನ್ನಕೇಶವ, ಯಾಚೇನಹಳ್ಳಿ ಅಶೋಕ್,, ಅತ್ತಹಳ್ಳಿ ಗ್ರಾಪಂ ಅಧ್ಯಕ್ಷ ಮಹೇಶ್, ಪುರಸಭೆ ಮಾಜಿ ಅಧ್ಯಕ್ಷ ಮುನಾವರ್ ಪಾಷ, ಡಿ.ಪದ್ಮನಾಭ, ಮಾಜಿ ಉಪಾಧ್ಯಕ್ಷ ರಾಮಲಿಂಗೇಗೌಡ,ಪ್ರೊ.ಬಿ. ಕೆ.ಜ್ಞಾನಪ್ರಕಾಶ್, ಮಹಿಳಾ ಘಟಕದ ಅಧ್ಯಕ್ಷೆ ವೀಣಾ ಶಿವಕುಮಾರ್, ಡೈರಿ ಅಧ್ಯಕ್ಷ ಮರಿಗೌಡ, ಪುರಸಭಾ ಸದಸ್ಯ ಶಿವು, ಸೇರಿದಂತೆ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು, ಸುನಿಲ್ ಬೋಸ್ ಅಭಿಮಾನಿಗಳು ಹಾಜರಿದ್ದರು.

ಯಶಸ್ವಿಯಾದ ಉದ್ಯೋಗ ಮೇಳ...

ತಿ.ನರಸೀಪುರ: ಸಂಸದ ಸುನೀಲ್ ಬೋಸ್ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಆಯೋಜಿಸಲಾಗಿದ್ದ ಬೃಹತ್ ಉದ್ಯೋಗ ಮೇಳ ಯಶಸ್ವಿಯಾಯಿತು.

ಮೇಳಕ್ಕೆ ಜಿಲ್ಲೆಯ ವಿವಿಧೆಡೆಯಿಂದ ಪದವೀಧರರು ಹಾಗೂ ವಿದ್ಯಾರ್ಥಿಗಳ ದಂಡು ಹರಿದು ಬಂದಿತ್ತು. ಸ್ಥಳದಲ್ಲೇ ನೋಂದಣಿ ಮಾಡಿಕೊಳ್ಳಲಾಯಿತು. ಪಿಯುಸಿ, ಐಟಿಐ, ಡಿಪ್ಲೊಮಾ ತೇರ್ಗಡೆಯಾದವರು ಮತ್ತು ಪದವೀಧರರು ಸೇರಿದಂತೆ ನೂರಾರು ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗಿ, ವಿವಿಧ ಕಂಪನಿಗಳಲ್ಲಿ ಉದ್ಯೋಗವಕಾಶ ಗಿಟ್ಟಿಸಿಕೊಂಡರು. ಉದ್ಯೋಗ ಮೇಳದಲ್ಲಿ 99 ಕಂಪನಿಗಳು ಭಾಗವಹಿಸಿದ್ದವು. ಆಯಾ ಕಂಪನಿಗಳ ಮುಖ್ಯಸ್ಥರು ಮತ್ತು ಸಿಬ್ಬಂದಿ ಸಂದರ್ಶನ ನಡೆಸಿ, ಪ್ರತಿಭಾವಂತರನ್ನು ನೇಮಕ ಮಾಡಿಕೊಂಡರು. ಬೆಳಿಗ್ಗೆ 11ಕ್ಕೆ ಆರಂಭಗೊಂಡ ನೇಮಕ ಪ್ರಕ್ರಿಯೆ ಮಧ್ಯಾಹ್ನ 4ಕ್ಕೆ ಮುಕ್ತಾಯವಾಯಿತು. ನಿರೀಕ್ಷೆಗೂ ಮೀರಿ ಉದ್ಯೋಗ ಮೇಳವನ್ನು ಅಚ್ಚುಕಟ್ಟಾಗಿ ಆಯೋಜಿಸಿದ್ದ ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಅವರ ಕ್ರಿಯಾಶೀಲ ನಡೆಗೆ ವೇದಿಕೆಯಲ್ಲಿ ಹಲವಾರು ಮುಖಂಡರು ಮೆಚ್ಚುಗೆ ಸೂಚಿಸಿದರು.

ತಿ.ನರಸೀಪುರ: ದಾಖಲೆ ಮಾಡಿದ ಅಭಿಮಾನಿಯ ಅಭಿಮಾನದ ಕಟೌಟ್



ಚಾಮರಾಜನಗರ ಲೋಕಸಭಾ ಸಂಸದರಾದ ಸುನೀಲ್ ಬೋಸ್ ಅವರ 44 ನೇ ವರ್ಷದ ಹುಟ್ಟುಹಬ್ಬದ ಪ್ರಯುಕ್ತ ಅವರ ಅಭಿಮಾನಿ ಕನ್ನಾಯಕನಹಳ್ಳಿ ಕುಮಾರ್ ರಾಮೇಗೌಡ ಅವರು ಪಟ್ಟಣದ ಸರ್ಕಾರಿ ಬಸ್ ನಿಲ್ದಾಣದ ಮುಂಭಾಗ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿ ಬೋಸ್ ಅವರ 40 ಅಡಿ ಎತ್ತರದ ಬೃಹತ್ ಕಟೌಟ್ ಹಾಕಿಸಿದ್ದು ಎಲ್ಲರ ಗಮನ ಸೆಳೆಯಿತು.

2023ರಲ್ಲಿ ಪಟ್ಟಣದ ಖಾಸಗಿ ಬಸ್ ನಿಲ್ದಾಣದ ಬಳಿ 35 ಅಡಿ ಎತ್ತರದ ಬೃಹತ್ ಕಟೌಟ್ ಎಲ್ಲರ ಗಮನ ಸೆಳೆದಿತ್ತು ಸ್ವತ: ಬೋಸ್ ಅವರೇ ಸಂತೋಷಪಟ್ಟಿದ್ದರು ಈ ಬಾರಿ 5 ಅಡಿ ಎತ್ತರ ಹೆಚ್ಚಿಸಿದ್ದು ಸುನೀಲ್ ಬೋಸ್ ಅವರ ಅಭಿಮಾನಿಗಳಲ್ಲಿ ಸಂತಸ ಹೆಚ್ಚಿಸಿದೆ

ಈ ಸಂದರ್ಭದಲ್ಲಿ ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಟಿ.ಪಿ.ರಮೇಶ್, ಉಕ್ಕಲಗೆರೆ ಬಸವಣ್ಣ, ಕೆಪಿಸಿಸಿ ಸದಸ್ಯರಾದ ತಲಕಾಡು ಸುಂದರ ನಾಯಕ, ಸುನಿಲ್ ಬೋಸ್ ಯುವ ಬ್ರಿಗೇಡ್ ಅಧ್ಯಕ್ಷ ಕನ್ನಾಯಕನಹಳ್ಳಿ ಕುಮಾರ್ ರಾಮೇಗೌಡ, ರಾಷ್ಟ್ರೀಯ ಅಹಿಂದ ಒಕ್ಕೂಟ ತಾಲೂಕು ಘಟಕದ ಅಧ್ಯಕ್ಷರಾದ ಸೋಸಲೆ ದೇವರಾಜ್, ತಾಲೂಕು ಗ್ಯಾರಂಟಿ ಯೋಜನೆಗಳ ಅಧ್ಯಕ್ಷರಾದ ಶಂಭುದೇವನಪುರ ಪ್ರಭು, ಸಾಮಾಜಿಕ ಹೋರಾಟಗಾರ ತಲಕಾಡು ಆನಂದ್, ಸುನಿಲ್ ಬೋಸ್ ಯುವ ಬ್ರಿಗೇಡ್ ಸದಸ್ಯರಾದ ದೊಡ್ಡಪುರ ಚರಣ್, ಬೆನಕನಹಳ್ಳಿ ಅರುಣ್, ಹಸುವಟ್ಟಿ ಸುದರ್ಶನ್, ಕೈಯಂಬಳ್ಳಿ ಲೋಹಿತ್, ವಾಟಾಳ್ ಚಿನ್ನಸ್ವಾಮಿ, ಕೇತಹಳ್ಳಿ ಹರೀಶ್, ತಲಕಾಡು ಮನೋಜ್, ತಲಕಾಡು ಭರತ್, ಬನ್ನಹಳ್ಳಿಹುಂಡಿ ಸಂಪತ್, ಕೆಬ್ಬೆ ಸಂದೀಪ್, ಹಿರಿಯ ಮುಖಂಡರಾದ ಕೋಣಗಹಳ್ಳಿ ನಾಗಣ್ಣ ಹಾಗೂ ಇತರ ಮುಖಂಡರುಗಳು ಸುನಿಲ್ ಬೋಸ್ ಅಭಿಮಾನಿಗಳು ಹಾಜರಿದ್ದರು.

ಶ್ರೀ ಗುಂಜಾನರಸಿಂಹಸ್ವಾಮಿಗೆ ವಿಶೇಷ ಪೂಜೆ



ತಿ.ನರಸೀಪುರ ಪಟ್ಟಣದ ಶ್ರೀ ಗುಂಜಾ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಸಂಸದ ಸುನೀಲ್ ಬೋಸ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ತಿ.ನರಸೀಪುರ, ಆ.31– ಚಾಮರಾಜನಗರ ಲೋಕಸಭಾ ಕ್ಷೇತ್ರದ ಜನಪ್ರಿಯ ಸಂಸದ ಸುನೀಲ್ ಬೋಸ್ ಅವರ ಹುಟ್ಟುಹಬ್ಬದ ಅಂಗವಾಗಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು, ಮುಂಚೂಣಿ ನಾಯಕರು, ಮುಖಂಡರುಗಳು ಪಟ್ಟಣದ ಶ್ರೀ ಗುಂಜಾ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಸಂಸದರ ಆಯಸ್ಸು ವೃದ್ಧಿಗೆ ಪ್ರಾರ್ಥನೆ ಸಲ್ಲಿಸಿದರು.

ಬೆಳಿಗ್ಗೆ ಪಟ್ಟಣದ ಮಹಾಲಕ್ಷ್ಮಿ ಸಮೇತ ಶ್ರೀ ಗುಂಜಾನರಸಿಂಹಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಹಾಗೂ ಸಂಸದ ಸುನೀಲ್ ಬೋಸ್ ಆಪ್ತ ಸಹಾಯಕ ಬಸವರಾಜು ನೇತೃತ್ವದಲ್ಲಿ ಜಮಾವಣೆಗೊಂಡ ನೂರಾರು ಮಂದಿ ಕಾಂಗ್ರೆಸ್ ಕಾರ್ಯಕರ್ತರು ದೇವಸ್ಥಾನಕ್ಕೆ ತೆರಳಿ ಸಂಸದರ ಹೆಸರಲ್ಲಿ ವಿಶೇಷ ಅರ್ಚನೆ ಸಲ್ಲಿಸಿ ಅವರ ಆಯಸ್ಸು ಯಶಸ್ಸಿಗಾಗಿ ಪ್ರಾರ್ಥಿಸಿದರು.

ಬಳಿಕ ಮಾತನಾಡಿದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು ಸರಳ, ಸಜ್ಜನಿಕೆಯ ವ್ಯಕ್ತಿತ್ವ ಹೊಂದಿರುವ ಸುನೀಲ್ ಬೋಸ್ ಅವರಿಗೆ ದೀರ್ಘಾಯುಷ್ಯ ಲಭಿಸುವ ಜೊತೆಗೆ ರಾಜಕೀಯ ಕ್ಷೇತ್ರದಲ್ಲಿ ಇನ್ನಷ್ಟು ಉನ್ನತ ಮಟ್ಟದಲ್ಲಿ ಬೆಳೆದು ಸರ್ವಜನತೆಗೂ ಸೌಕರ್ಯ ಒದಗಿಸುವಂತಾಗಲಿ ಎಂದು ಆಶಿಸಿದರು.

ಕೇಂದ್ರದಲ್ಲಿ ಸರ್ಕಾರ ರಚನೆಗೊಂಡು ವರ್ಷ ಪೂರೈಸಿರುವ ವೇಳೆಯಲ್ಲಿ ಸಂಸದರು ಕ್ಷೇತ್ರಕ್ಕೆ ಸಾಕಷ್ಟು ಅನುದಾನವನ್ನು ತಂದು ಕ್ಷೇತ್ರ ಅಭಿವೃದ್ಧಿಪಡಿಸಿದ್ದಾರೆ. ಶಾಂತಿ, ಸೌಹಾರ್ದತೆ ಹಾಗೂ ಸಹೋದರತೆಯ ಮೂಲ ಮಂತ್ರವಾಗಿಸಿಕೊಂಡಿರುವ ಸಂಸದರು ಮುಂಬರುವ ದಿನಗಳಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುವಂತಾಗಲಿ ಎಂದು ಶುಭ ಕೋರಿದರು.

ತಾ.ಪಂ. ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಕುಕ್ಕೂರು ಗಣೇಶ್ ಮಾತನಾಡಿ, ಜಾತ್ಯಾತೀತ ನಿಲುವು ಹೊಂದಿರುವ ಸಂಸದರು ಬಡವ, ಮಧ್ಯಮ ಹಾಗೂ ದೀನದಲಿತರ ಶ್ರೇಯೋಭಿವೃದ್ಧಿಗೆ ಪಣತೊಟ್ಟಿರುವ ನಾಯಕರಾಗಿದ್ದಾರೆ ಎಂದರು.

ನಂತರ ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ತೆರಳಿ ಅಲ್ಲಿ ರೋಗಿಗಳಿಗೆ ಹಣ್ಣು–ಬ್ರೆಡ್ ವಿತರಿಸಿ ಸಂಸದರ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಿದರು. ಕೊಳ್ಳೇಗಾಲ ರಸ್ತೆಯಲ್ಲಿರುವ ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ಬೃಹತ್ ಗಾತ್ರದ ಕೇಕ್ ಕತ್ತರಿಸಿದ ಕಾರ್ಯಕರ್ತರು ನೃತ್ಯ ಮಾಡುವ ಮೂಲಕ ಸಂಭ್ರಮಿಸಿದರು.

ಇದೇ ರೀತಿ ತಾಲೂಕಿನಾದ್ಯಂತ ಅಲ್ಲಲ್ಲಿ ಸುನೀಲ್ ಬೋಸ್ ಅವರ ಹುಟ್ಟುಹಬ್ಬವನ್ನು ಸಿಹಿ ವಿತರಿಸಿ, ಹಣ್ಣು ಹಂಪಲು ಹಂಚಿ, ಅನ್ನ ಸಂತರ್ಪಣೆಯಂತಹ ಕಾರ್ಯಕ್ರಮಗಳ ಮೂಲಕ ಸಂಭ್ರಮ ಮತ್ತು ಸಡಗರದಿಂದ ಆಚರಿಸಿದ್ದು ಕಂಡು ಬಂದಿತು.

ಮಹರ್ಷಿ ಭಗೀರಥ ಜಯಂತಿ ಆಕರ್ಷಕ ಮೆರವಣಿಗೆ

ನಂಜನಗೂಡು: ಮಹರ್ಷಿ ಭಗೀರಥ ಜಯಂತಿ ಮಹೋತ್ಸವದ ಪ್ರಯುಕ್ತ ನಗರದ ಸರಕಾರಿ ಪದವಿ ಪೂರ್ವ ಕಾಲೇಜು ಆವರಣದಿಂದ ಹೊರಟ ಆಕರ್ಷಕ ಮೆರವಣಿಗೆಗೆ ಸ್ಥಳೀಯ ಶಾಸಕ ದರ್ಶನ್ ಧ್ರುವನಾರಾಯಣ ಚಾಲನೆ ನೀಡಿದರು.

ಮೆರವಣಿಗೆಯಲ್ಲಿ ವಿವಿಧ ಜಾನಪದ ಕಲಾ ತಂಡಗಳವರು ಮುಂಚೂಣಿಯಲ್ಲಿ ಸಾಗಿದರೆ ವಿವಿಧ ಸ್ತಬ್ಧ ಚಿತ್ರಗಳು, ಸತ್ತಿಗೆ ಹಾಗೂ ಸೂರಿಪಾನಿ ಹೊತ್ತ ಜನರು ಗಮನ ಸೆಳೆದರು. ಮೆರವಣಿಗೆಯ ಕೊನೆಯಲ್ಲಿ ಉಪ್ಪಾರ ಪೀಠದ ಶ್ರೀ ಪುರುಷೋತ್ತಮಾನಂದ ಪುರಿ ಸ್ವಾಮೀಜಿಯವರನ್ನು ಅಲಂಕೃತ ಸಾರೋಟಿನ ವಾಹನದಲ್ಲಿ ಕರೆದೊಯ್ಯಲಾಯಿತು. ಇನ್ನು ಉಪ್ಪಾರ ಸಮುದಾಯದ ನೂರಾರು ಮಂದಿ ಯುವಕರು ಉತ್ಸಾಹದಿಂದ ಭಾಗಿಯಾಗಿದ್ದರು. ನಗರದ ರಾಷ್ಟ್ರಪತಿ ರಸ್ತೆಯಲ್ಲಿ ಸಾಗಿ ಶ್ರೀಕಂಠೇಶ್ವರ ಸ್ವಾಮಿಯವರ ದೇವಾಲಯದ ಮುಂಭಾಗದಲ್ಲಿ ಅಂತ್ಯಗೊಂಡಿತು.



ನಂಜನಗೂಡಿನಲ್ಲಿ ಮಹರ್ಷಿ ಭಗೀರಥ ಜಯಂತಿ ಮಹೋತ್ಸವದ ಮೆರವಣಿಗೆಯನ್ನು ಉದ್ಘಾಟಿಸಿದ ಶ್ರೀಗಳು, ಗಣ್ಯರು.

ಸಮುದಾಯ ಭವನಕ್ಕೆ ಶಂಕುಸ್ಥಾಪನೆ: ಇದೇ ಸಂದರ್ಭ ನಗರದ ಬೈಪಾಸ್ ರಸ್ತೆಯಲ್ಲಿ ನೂತನವಾಗಿ 2.25ಕೋಟಿ ಅಂದಾಜು ವೆಚ್ಚದಲ್ಲಿ ನೂತನವಾಗಿ ನಿರ್ಮಾಣಗೊಳ್ಳಲಿರುವ ಭಗೀರಥ ಭವನಕ್ಕೆ ಶಾಸಕ ದರ್ಶನ್ ಧ್ರುವನಾರಾಯಣ ಭೂಮಿ ಪೂಜೆ ನೆರವೇರಿಸಿದರು. ಈ ಸಂದರ್ಭ ಶಾಸಕರುಗಳಾದ ಪುಟ್ಟರಂಗಶೆಟ್ಟಿ, ಡಾ.ಯತೀಂದ್ರ ಸಿದ್ದರಾಮಯ್ಯ, ಡಿ.ರವಿಶಂಕರ್, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ನಗರಸಭಾ ಅಧ್ಯಕ್ಷ ಶ್ರೀಕಂಠಸ್ವಾಮಿ, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲತಾ ಸಿದ್ದಶೆಟ್ಟಿ, ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ ಶಂಕರ್, ಉಪ್ಪಾರ ಸಂಘದ ಜಿಲ್ಲಾಧ್ಯಕ್ಷ ಕರಳಪುರ ನಾಗರಾಜ್, ಕೆಬಿಸ್ವಾಮಿ ಉಪಸ್ಥಿತರಿದ್ದರು.

ಸರಗೂರಲ್ಲೂ ಸುನೀಲ್ ಬೋಸ್ ಹುಟ್ಟುಹಬ್ಬ ಆಚರಣೆ

ಸರಗೂರು: ಸಂಸದ ಸುನೀಲ್ ಬೋಸ್ ಅವರ ಅಭಿಮಾನಿಗಳು ಮತ್ತು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಸಮಾಜಮುಖಿ ಸೇವಾ ಕಾರ್ಯಕ್ರಮಗಳ ಮೂಲಕ ಸಂಸದ ಸುನೀಲ್ ಬೋಸ್ ಅವರ ಹುಟ್ಟುಹಬ್ಬವನ್ನು ಆಚರಿಸಿದರು,

ಇದೇ ಸಂದರ್ಭದಲ್ಲಿ ಎಪಿಎಂಸಿ ಮಾಜಿ ಅಧ್ಯಕ್ಷ ದೇವಲಾಪುರ ಸಿದ್ದರಾಜು ಮಾತನಾಡಿ, ತಂದೆ ಹೆಚ್.ಸಿ.ಮಹದೇವಪ್ಪ ಅವರಂತೆ ಅವರ ಮಕ್ಕಳಾದ ಸಂಸದರಾದ ಸುನೀಲ್ ಬೋಸ್ ಸರಳ ಸಜ್ಜನಿಕೆಗೆ ಹೆಸರು ವಾಸಿಯಾದವರು. ಗ್ರಾಮೀಣ ಭಾಗದಲ್ಲಿ ಅಭಿವೃದ್ಧಿಗಾಗಿ ತಮ್ಮನ್ನೆ ತೊಡಗಿಸಿಕೊಂಡಿದ್ದಾರೆ, ಮುಂದಿನ ದಿನಗಳಲ್ಲಿ ಇವರ ಹುಟ್ಟುಹಬ್ಬದ ಅಂಗವಾಗಿ ಆರೋಗ್ಯ ಶಿಬಿರವನ್ನು ನಡೆಸಲಾಗುವುದು ಎಂದು ತಿಳಿಸಿದರು.

ಹುಟ್ಟುಹಬ್ಬದ ಅಂಗವಾಗಿ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ರೋಗಿಗಳಿಗೆ ಹಣ್ಣು ಹಂಪಲು ನೀಡಲಾಯಿತು, ನಂತರ ಮಕ್ಕಳಿಗೆ ಕೇಕ್ ಕಟ್ ಮಾಡಿ



ಸಂಸದರಾದ ಸುನೀಲ್ ಬೋಸ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ರೋಗಿಗಳಿಗೆ ಹಣ್ಣು ಹಂಪಲು ನೀಡಲಾಯಿತು.

ನೀಡಲಾಯಿತು, ಎಲ್ಲರಿಗೂ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು, ಹುಟ್ಟುಹಬ್ಬ ಸಂದರ್ಭದಲ್ಲಿ ಆದಿಕರ್ನಾಟಕ ಮಹಾಸಭಾ ಗೌರವಾಧ್ಯಕ್ಷರಾದ ಹುಣಸಹಳ್ಳಿ ಬಸವರಾಜು ಅವರನ್ನು ಸನ್ಮಾನಿಸಲಾಯಿತು, ಗ್ಯಾರಂಟಿ ಅನುಸ್ಠಾನ ಸಮಿತಿ ತಾಲೂಕು ಅಧ್ಯಕ್ಷ ಚನ್ನಿಪುರ ಚಲುವರಾಜು, ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಚಿನ್ನಣ್ಣ, ಸಹಕಾರ ಸಂಘದ ಉಪಾಧ್ಯಕ್ಷ ನಾಗರಾಜು, ಮುಖಂಡರಾದ ಹೆಗ್ಗೊಳ್ಳು ಸೋಮಣ್ಣ, ತುಂಬಸೋಗೆ ನಾಗಣ್ಣ, ಮಾದಾಪ್ಪ ಬಿಲ್ಲಯ್ಯ, ಕಾಳಸ್ವಾಮಿ, ಡಿ.ಎನ್.ಪ್ರಭಾಕರ್, ಕುಂದೂರು ಮೂರ್ತಿ, ದಡದಹಳ್ಳಿ ಶಿವರಾಜು, ಸೋಮಶೇಖರ್, ವಿಷಕಂಠ, ಮೂರ್ತಿ, ಬಾನು ಪ್ರಸಾದ್, ಲಂಕೆ ಈಶ್ವರ, ಸೋಮು, ಮಹದೇವಕುಮಾರ್, ಮಣಿಕಂಠ, ನವೀನ್, ವಿಷ್ಣು ಅಭಿಮಾನಿ ಬಳಗದ ಉಪಾಧ್ಯಕ್ಷ ಶಂಕರ್ ಶಂಭು ಹಾಗೂ ಇತರರು ಭಾಗವಹಿಸಿದ್ದರು,

ಧರ್ಮಸ್ಥಳದ ಜೆಡಿಎಸ್ ಸತ್ಯಯಾತ್ರೆಗೆ ಕೋಟೆಯಿಂದ ಸಾವಿರಾರು ಮಂದಿ

ಹೆಚ್.ಡಿ.ಕೋಟೆ: ಹಿಂದೂ ಸಂಪ್ರದಾಯದ ಭಾರತ ದೇಶದಲ್ಲಿ ಯಾರೇ ಷಡ್ಯಂತರ, ಅಪಪ್ರಚಾರ ನಡೆಸಿದರೂ ಸತ್ಯಕ್ಕೆ ಗೆಲುವು ಇದೆ ಎಂಬುದಕ್ಕೆ ಧರ್ಮಸ್ಥಳ ಕ್ಷೇತ್ರದ ಪ್ರಕರಣ ಸಾಕ್ಷಿಯಾಗಿದೆ ಎಂದು ಜಾ.ದಳದ ಮುಖಂಡ ಕೆ.ಎಂ. ಕೃಷ್ಣನಾಯಕ ತಿಳಿಸಿದರು.

ಧರ್ಮಸ್ಥಳದಲ್ಲಿ ನಡೆಯುವ ಜೆಡಿಎಸ್ ಪಕ್ಷದ ಸತ್ಯಯಾತ್ರೆ ರಾಜ್ಯ ಮಟ್ಟದ ಕಾರ್ಯಕ್ರಮಕ್ಕೆ ತಾಲೂಕಿನಿಂದ ಐವತ್ತು ಬಸ್ ಮತ್ತು ಕಾರುಗಳ ಮೂಲಕ ಸಾವಿರಾರು ಸಂಖ್ಯೆಯಲ್ಲಿ ಕಾರ್ಯಕರ್ತರು, ಮುಖಂಡರು, ಹೊರಟ ರ್‍ಯಾಲಿಗೆ ಪಟ್ಟಣದ ಜೆಎಸ್‌ಎಸ್ ಕಲ್ಯಾಣ ಮಂಟಪದ ಮುಂಭಾಗ ಚಾಲನೆ ನೀಡಿ ಮಾತನಾಡಿದ ಅವರು, ಕಳೆದ ಒಂದು ತಿಂಗಳಿಂದ ಧರ್ಮಸ್ಥಳ ಕ್ಷೇತ್ರದ ಬಗ್ಗೆ ಅಪಪ್ರಚಾರ ನಡೆಸುತ್ತಿರುವುದು ಸರಿಯಲ್ಲ. ಇದರಿಂದ ಕ್ಷೇತ್ರಕ್ಕೆ ಮತ್ತು ಪರಮಪೂಜ್ಯ ಶ್ರೀ ವೀರೇಂದ್ರ ಹೆಗಡೆಯವರು ನೋವು ಅನುಭವಿಸಿದ್ದಾರೆ. ಧರ್ಮಸ್ಥಳ ಮತ್ತು ವೀರೇಂದ್ರ ಹೆಗಡೆಯವರ ಬಗ್ಗೆ ಮಾತನಾಡಿದವರ ಮೇಲೆ ರಾಜ್ಯ ಸರ್ಕಾರ ಸುಮೋಟೋ ಕೇಸು ದಾಖಲಿಸಿಕೊಂಡು ಕ್ರಮ ಕೈಗೊಳ್ಳದೆ ಇರುವುದು ಸರಿಯಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ದೇಶಾದ್ಯಂತ ಇರುವ ಭಕ್ತಾದಿಗಳ ಭಾವನೆಗೆ ಧಕ್ಕೆ ಉಂಟು ಮಾಡಿದ್ದಾರೆ. ವೀರೇಂದ್ರ ಹೆಗಡೆಯವರು ಸಮಾಜಕ್ಕೆ ನೀಡಿರುವ ಕೊಡುಗೆ ಅಪಾರವಾಗಿದೆ. ಗ್ರಾಮೀಣ ಅಭಿವೃದ್ಧಿ ಮೂಲಕ ಮಹಿಳೆಯರ ಆರ್ಥಿಕ ಸಬಲೀಕರಣ ಮಾಡಿದ್ದಾರೆ. ನಮ್ಮ ಊರು ನಮ್ಮ ಕೆರೆ ಯೋಜನೆಯಲ್ಲಿ ಸಾವಿರಾರು ಕೆರೆಗಳ ಅಭಿವೃದ್ಧಿ, ಮದ್ಯ ವ್ಯಸನಕ್ಕೆ ಒಳಗಾದ ಸಾವಿರಾರು ಕುಟುಂಬ ಪುನರ್ಜೀವನ ನೀಡಿದ್ದಾರೆ ಎಂದರು.

ರಾಜ್ಯದ ಜಾ.ದಳ ಪಕ್ಷವು ಧರ್ಮಸ್ಥಳ ಸತ್ಯಯಾತ್ರೆಯನ್ನು, ಕಾರ್ಯಕ್ರಮವನ್ನು ಧರ್ಮಸ್ಥಳದಲ್ಲಿ ನಡೆಸುವ ಮೂಲಕ ಸತ್ಯಕ್ಕೆ ಜಯ ಎಂಬ ನಿಟ್ಟಿನಲ್ಲಿ ಮಾಜಿ ಪ್ರಧಾನಿ

ಸತ್ಯಕ್ಕೆ ಗೆಲುವು ಇದೆ ಎನ್ನುವುದಕ್ಕೆ ಧರ್ಮಸ್ಥಳ ಪ್ರಕರಣವೇ ಸಾಕ್ಷಿ



ಧರ್ಮಸ್ಥಳದಲ್ಲಿ ನಡೆದ ಜಾ.ದಳ ಪಕ್ಷದ ಸತ್ಯ ಯಾತ್ರೆಯಲ್ಲಿ ಪಾಲ್ಗೊಳ್ಳಲು ಬಸ್ಸಿನಲ್ಲಿ ಸಾವಿರಾರು ಮಂದಿ ತೆರಳಿದ ಪ್ರಯಾಣಕ್ಕೆ ಜಾ.ದಳದ ಮುಖಂಡ ಕೆ.ಎಂ. ಕೃಷ್ಣನಾಯಕ ಚಾಲನೆ ನೀಡಿದರು.

ಎಚ್.ಡಿ.ದೇವೇಗೌಡ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಪಕ್ಷದ ಮುಖಂಡರಾದ ನಿಖಿಲ್ ಕುಮಾರಸ್ವಾಮಿ ಸೇರಿದಂತೆ ಕಾರ್ಯಕರ್ತರು ಮುಖಂಡರು ಶಾಸಕರು, ಮಾಜಿ ಶಾಸಕರ ಸಮ್ಮುಖದಲ್ಲಿ ಲಕ್ಷಾಂತರ ಕಾರ್ಯಕರ್ತ ಮುಖಂಡರು ನಡೆಸುತ್ತಿರುವ ಈ ಕಾರ್ಯಕ್ರಮಕ್ಕೆ ತಾಲೂಕಿನಿಂದ ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದೇವೆ ಎಂದರು.

ಜೆಡಿಎಸ್ ಅಧ್ಯಕ್ಷ ಗೋಪಾಲಸ್ವಾಮಿ, ಸಿಂಡಿನಹಳ್ಳಿ ಯತೀಶ್ ಕುಮಾರ್, ಲೇಖನ ಕುಮಾರ್, ವಕೀಲರಾದ ಪ್ರಶಾಂತ್, ಪ್ರಸನ್ನ, ಶಿವರಾಮೇಗೌಡ ಯೋಗೇಶ್ ಕುಮಾರ್, ನರಸಿಂಹರಾಜು, ಯೋಗ ಮಹೇಶ್, ಪುರದ ಕಟ್ಟೆಬೆಟ್ಟ ನಾಯಕ, ವಾಲ್ಮೀಕಿ ಸಿದ್ದರಾಜು, ಚಿಕ್ಕ ತಿಮ್ಮನಾಯಕ, ಶಿವಯ್ಯ ಪ್ರಕಾಶ್ ನಾಯ್ಕ, ರಾಮರಾಜು, ರಾಮೇಗೌಡ, ಜಯಣ್ಣ ಕಣಿನುಂಡಿ, ಶಿವಶಂಕರ್, ಮಾದೇವ ಶೆಟ್ಟಿ, ರವಿಕುಮಾರ್, ವೆಂಕಟೇಶ್ ಆಲನಹಳ್ಳಿ, ಸುರೇಶ್ ಮನಹಳ್ಳಿ, ಬಾಲು, ರಾಜೇಶ್, ಶಂಕರ್ ಜಿನ್ನಳ್ಳಿ ಸೀನಾ ನಾಯಕ, ನಾಗನಾಯಕ ಬಾಚೇಗೌಡನಹಳ್ಳಿ, ನಂದಕುಮಾರ್ ಅಡ್ಡಳ್ಳಿ,, ಹೈರಿಗೆ ಸಿರಿ, ಜಯಣ್ಣ, ಗಂಗಾಧರ್ ಬಡಗಲಿಪುರ, ಗಂಗಡವಸಳ್ಳಿ ನವೀನ, ದಿನೇಶ, ಕ್ಯಾತ್ನಳ್ಳಿ ಕೃಷ್ಣೇಗೌಡ, ಕುಮಾರಸ್ವಾಮಿ ಬಳಗದ ಅಧ್ಯಕ್ಷರಾದ ರವಿ ಬದನಕುಪ್ಪೆ. ಕಾರ್ಯದರ್ಶಿ ಕೃಷ್ಣಾಪುರ ಶಿವಕುಮಾರ್. ಹೆಬ್ಬಾಳ ನಾಗೇಗೌಡ. ರಾಜಣ್ಣ ಕೋಟೆ. ಚೆಲುವೇಗೌಡ. ದೇವರಾಜು ಎಡತೊರೆ. ರಾಜಣ್ಣ ಸೋನಳ್ಳಿ ಜಯರಾಮ, ಪ್ರೇಮ್ ಕುಮಾರ್. ಕರಿಗೌಡ್ರು, ಶಿವರಾಮೇಗೌಡ್ರು, ಸೋಲಾರ್ ಪ್ರದೀಪ್, ಪುಟ್ಟೇಗೌಡರುಮ, ಕಾಳಿಹುಂಡಿ ಕರಿಗೌಡ, ಜೆಸಿಬಿ ಕೇಸವೇಗೌಡ. ಯೋಗ ಮಹೇಶ್. ಮನು, ಪ್ರದೀಪ ಸೋಲಾರ್, ಪ್ರಕಾಶ್ ಹರೀಶ್ ಮಹಾದೇವಸ್ವಾಮಿ ಬಸವರಾಜು ರವಿಕುಮಾರ್ ನಿಂಗಪ್ಪ ಹರೀಶ್. ಯೋಗಿಗೌಡ, ವೆಂಕಟೇಶ್, ಯೋಗೇಶ್, ನಂಜಪ್ಪ, ಎರಳ್ಳಿ ಆನಂದ, ಮಹದೇವ್ ಗೌಡ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಮೈಸೂರಲ್ಲಿ ಅರಣ್ಯ ಸಿಬ್ಬಂದಿ ಕ್ರೀಡಾಕೂಟಕ್ಕೆ ಚಾಲನೆ

ಮೈಸೂರು, ಆ.31(ಎಂಟಿವೈ)– ವನ್ಯಜೀವಿ ಮತ್ತು ಅರಣ್ಯ ಸಂಪತ್ತಿನ ಸಂರಕ್ಷಣೆಯಲ್ಲಿ ಸದಾ ನಿರತರಾಗಿರುತ್ತಿದ್ದ ಅರಣ್ಯ ಸಿಬ್ಬಂದಿಗಳು ಭಾನುವಾರ ವಿವಿಧ ಕ್ರೀಡಾ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ಮೂಲಕ ಕ್ರೀಡಾ ಸ್ಫೂರ್ತಿ ಪ್ರದರ್ಶಿಸಿದರು.

ಮೈಸೂರಿನ ನಜರ್‌ಬಾದ್‌ನಲ್ಲಿರುವ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಭಾನುವಾರ ಬೆಳಗ್ಗೆ ನಡೆದ ಮೈಸೂರು ಮತ್ತು ಕೊಡಗು ವೃತ್ತ ಮಟ್ಟದ ಅರಣ್ಯ ಕ್ರೀಡಾಕೂಟದಲ್ಲಿ 2 ವಿಭಾಗದ 375 ಸಿಬ್ಬಂದಿಗಳು 28 ವಿವಿಧ ಬಗೆಯ ಕ್ರೀಡಾ ಚಟುವಟಿಕೆಯಲ್ಲಿ ಪಾಲ್ಗೊಂಡು ಗಮನ ಸೆಳೆದರು.

ಮೈಸೂರು ವೃತ್ತದ ಸಿಎಫ್ ಡಾ. ಎಸ್.ಎಸ್.ರವಿಶಂಕರ್ ಬೆಳಗ್ಗೆ ಅರಣ್ಯ ಇಲಾಖೆಯ ವೃತ್ತ ಮಟ್ಟದ ಕ್ರೀಡಾಕೂಟಕ್ಕೆ ಬಲೂನು ಹಾರಿ ಬಿಡುವ ಮೂಲಕ ಚಾಲನೆ ನೀಡಿ, ಪಥ ಸಂಚಲನದಲ್ಲಿ ಗೌರವ ಸ್ವೀಕರಿಸಿ ಕ್ರೀಡಾಪಟುಗಳಿಗೆ ಶುಭ ಕೋರಿದರು. ಈ ಕ್ರೀಡಾಕೂಟದಲ್ಲಿ ಮೈಸೂರು ಮತ್ತು ಕೊಡಗು ವೃತ್ತದ ಮೈಸೂರು, ಕೊಡಗು ಹಾಗೂ ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಅರಣ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ವಾಚರ್, ಗಾರ್ಡ್, ಡಿಆರ್‌ಎಫ್‌ಓ, ಆರ್‌ಎಫ್‌ಓ, ಎಸಿಎಫ್, ಡಿಸಿಎಫ್, ಸಿಎಫ್‌ವರೆಗಿನ ಎಲ್ಲಾ ವರ್ಗದ ಅಧಿಕಾರಿ ಮತ್ತು ಸಿಬ್ಬಂದಿಗಳು ಕ್ರೀಡೆಯಲ್ಲಿ ಪಾಲ್ಗೊಂಡು ತಮ್ಮಲ್ಲಿನ ಕ್ರೀಡಾ ಸಾಮರ್ಥ್ಯವನ್ನು ಪ್ರದರ್ಶಿಸಿದರು.



ಮೈಸೂರಿನ ನಜರ್‌ಬಾದ್‌ನಲ್ಲಿರುವ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಭಾನುವಾರ ಆರಂಭವಾದ 2 ದಿನಗಳ ಅರಣ್ಯ ಇಲಾಖೆಯ ಮೈಸೂರು ಮತ್ತು ಕೊಡಗು ವೃತ್ತ ಮಟ್ಟದ ಕ್ರೀಡಾಕೂಟಕ್ಕೆ ಮೈಸೂರು ವೃತ್ತದ ಸಿಎಫ್ ಡಾ. ಎಸ್.ಎಸ್.ರವಿಶಂಕರ್ ಚಾಲನೆ ನೀಡಿದರು.

ಕ್ರೀಡಾಕೂಟದಲ್ಲಿ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಅಥ್ಲೆಟಿಕ್ಸ್ ಮತ್ತು ವಾಲಿಬಾಲ್, ಕಬಡ್ಡಿ ಪಂದ್ಯ ಜರುಗಿದರೆ, ಪೊಲೀಸ್ ಅಕಾಡೆಮಿಯಲ್ಲಿ ಇಂಡೋರ್ ಕ್ರೀಡೆಗಳಾದ ಷಟಲ್ ಬ್ಯಾಡ್ಮಿಂಟನ್, ಕೇರಂ, ಚೆಸ್, ಟೇಬಲ್ ಟೆನ್ನಿಸ್ ಪಂದ್ಯಗಳು ಜರುಗಿದವು. ಸೆಂಟ್ ಫಿಲೋಮಿನಾ ಕಾಲೇಜು ಮೈದಾನದಲ್ಲಿ ಕ್ರಿಕೆಟ್ ಪಂದ್ಯಾವಳಿ ನಡೆಯಿತು.

ಅರಣ್ಯ ಇಲಾಖೆಯ ಎರಡು ದಿನಗಳ ಈ ಕ್ರೀಡಾಕೂಟದಲ್ಲಿ 18 ರಿಂದ 45 ವರ್ಷ, 45–53 ವರ್ಷ, 53–61 ವರ್ಷ ಹಾಗೂ ಮುಕ್ತ ವಿಭಾಗದಲ್ಲಿ ಪಂದ್ಯಗಳು ನೆರವೇರಿದವು. ಸೋಮವಾರವೂ ವಿವಿಧ ಕ್ರೀಡಾ ಚಟುವಟಿಕೆಗಳು ನಡೆಯಲಿದ್ದು, ಇಲಾಖೆ ಸಿಬ್ಬಂದಿಗಳು ವಿವಿಧ ಹಂತದ ಸ್ಪರ್ಧೆಗಳಲ್ಲಿ ಭಾಗವಹಿಸಲಿದ್ದಾರೆ.

ಪಥ ಸಂಚಲನ: ಕ್ರೀಡಾಕೂಟದ ಆರಂಭಕ್ಕೂ ಮುನ್ನ ಆಕರ್ಷಕ ಪಥ ಸಂಚಲನ ಜರುಗಿತು. ಎರಡೂ ವೃತ್ತದ ಡಿಸಿಎಫ್ ಹಾಗೂ ಮೇಲಾಧಿಕಾರಿಗಳು ಪಥ ಸಂಚಲನದ ಗೌರವ ಸ್ವೀಕರಿಸಿದರು. ಪಥ ಸಂಚಲನದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಸಲಗ ತಂಡಕ್ಕೆ ಪ್ರಥಮ, ವ್ಯಾಘ್ರ ತಂಡಕ್ಕೆ ದ್ವಿತೀಯ, ಕಾಳಿಂಗ ತಂಡಕ್ಕೆ ತೃತೀಯ, ಗರುಡ ತಂಡಕ್ಕೆ ನಾಲ್ಕನೇ ಬಹುಮಾನ ದೊರೆಯಿತು.

ಈ ಸಂದರ್ಭದಲ್ಲಿ ಕೊಡಗು ವೃತ್ತದ ಸಿಎಫ್ ಸೋನಲ್ ವೃಷ್ಟಿ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಎಸ್.ಪ್ರಭಾಕರನ್, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರಾದ ಪಿ.ಎ.ಸೀಮಾ, ಮೈಸೂರು ಡಿಸಿಎಫ್ ಕೆ.ಪರಮೇಶ್, ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್ ಡಾ. ಐ.ಬಿ.ಪ್ರಭುಗೌಡ, ಹುಣಸೂರು ಡಿಸಿಎಫ್ ಫಯಾಜ್, ನವೀನ್‌ಕುಮಾರ್, ಮಂಡ್ಯ ಡಿಸಿಎಫ್ ರಘು, ಸುಮಂತ್, ಮೈಸೂರು ಡಿಸಿಎಫ್ ಶಂಕರೇಗೌಡ, ತಸೀನಾ ಬಾನು, ಮೈಸೂರು ಎಸಿಎಫ್ ಜಿ.ರವೀಂದ್ರ, ಹೆಚ್.ಡಿ.ಕೋಟೆ ಎಸಿಎಫ್ ಎ.ಸುಮಿತ್ರಾ, ಗಂಧದ ಕೋಠಿ ಎಸಿಎಫ್ ಜೆ.ವಿನೀತ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಕೂಲಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಅಂದೊಂದಿತ್ತು ಕಾಲ(ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಕೂಲಿ (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಉಸಿರು (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೂಲಿ (ಕ)	4 ಪ್ರದರ್ಶನಗಳು
ರಾಜಕಮಲ್	
ರಿಪ್ಪನ್ ಸ್ವಾಮಿ (ಕ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ವಿಷ್ಣುವರ್ಧನ(ಕ) + ಸಿಂಹರೂಪಿಣಿ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಉಸಿರು (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕೂಲಿ (ತ): ಬೆ.7ಕ್ಕೆ, ಮ.3ಕ್ಕೆ, ರಾ.10.15ಕ್ಕೆ, ವಾರ್ –2 (ಹಿಂ): ಬೆ.10.45ಕ್ಕೆ, ಸಂ.6.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.7ಕ್ಕೆ, ಸು ಫ್ರಂ ಸೋ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ವಾರ್ –2 (ಹಿಂ): ರಾ.9.50ಕ್ಕೆ.
ಸ್ಕ್ರೀನ್ 3	ಕೂಲಿ (ತ): ಬೆ.7.05ಕ್ಕೆ, ರಾ.8.15ಕ್ಕೆ, ಕೂಲಿ (ಕ): ಬೆ.10.30ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಮ.1.50ಕ್ಕೆ, ವಾರ್ –2 (ಹಿಂ): ಸಂ.4.35ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಬೆ.11.55ಕ್ಕೆ, ಮ.3.25ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಸು ಫ್ರಂ ಸೋ (ಕ): ಬೆ.10ಕ್ಕೆ, ಮ.3.55ಕ್ಕೆ, ವಾರ್–2 (ಹಿಂ): ಮ.12.40ಕ್ಕೆ, ಕೂಲಿ (ಕ): ಸಂ.6.35ಕ್ಕೆ, ಕೂಲಿ (ತ): ರಾ.9.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.6.45ಕ್ಕೆ, ಬೆ.10ಕ್ಕೆ, ಸಂ.4.35ಕ್ಕೆ, ರಾ.7.50ಕ್ಕೆ, ವಾರ್–2 (ಹಿಂ): ಮ.1.15ಕ್ಕೆ.
ಸ್ಕ್ರೀನ್ 3	ವಾರ್–2 (ಹಿಂ): ಬೆ.10.05ಕ್ಕೆ, ಸು ಫ್ರಂ ಸೋ (ಕ): ಮ.1.20ಕ್ಕೆ, ರಾ.7.10ಕ್ಕೆ, ಕೂಲಿ (ಕ): ಸಂ.4ಕ್ಕೆ, ಕೂಲಿ (ತ): ರಾ.9.50ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಬೆ.10.15ಕ್ಕೆ, ಸಂ.4ಕ್ಕೆ, ಕೂಲಿ (ಕ): ಮ.12.45ಕ್ಕೆ, ವಾರ್–2 (ಹಿಂ): ಸಂ.6.35ಕ್ಕೆ, ರಾ.9.55ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ವಸ್ತುಪ್ರದರ್ಶನ ಪ್ರಾಧಿಕಾರದ ಕಚೇರಿಗೆ ಸಿಎಂ ಭೇಟಿ

ಕಚೇರಿ, ಕಾಮಗಾರಿಗಳನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದ ಸಿದ್ದರಾಮಯ್ಯ



ಮೈಸೂರಿನ ವಸ್ತುಪ್ರದರ್ಶನ ಪ್ರಾಧಿಕಾರದ ಮುಖ್ಯ ಕಚೇರಿಗೆ ಭಾನುವಾರ ಭೇಟಿ ನೀಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಸನ್ಮಾನಿಸಿದರು.

ಮೈಸೂರು, ಆ.31(ಜಿಎ)–ಮೈಸೂರಿನ ವಸ್ತು ಪ್ರದರ್ಶನ ಪ್ರಾಧಿಕಾರದ ಮುಖ್ಯ ಕಚೇರಿಗೆ ಭಾನುವಾರ ಭೇಟಿ ನೀಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನವೀಕೃತ ಕಚೇರಿ ಮತ್ತು ಪ್ರಾಧಿಕಾರದ ಆವರಣದಲ್ಲಿ ನಡೆಯುತ್ತಿರುವ ಕಾಮಗಾರಿಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ದಸರಾ ವಸ್ತುಪ್ರದರ್ಶನ ಪ್ರಾಧಿಕಾರ ಮೈದಾನದಲ್ಲಿ ಆಯೋಜಿಸಿದ್ದ ಸಂದೇಶ್ ನಾಗರಾಜ್ ಅವರ ಹುಟ್ಟುಹಬ್ಬ ಕಾರ್ಯಕ್ರಮಕ್ಕೆ ಆಗಮಿಸಿದ ಮುಖ್ಯಮಂತ್ರಿಗಳು ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಆಹ್ವಾನದ ಮೇರೆಗೆ ಕಚೇರಿಗೆ ಭೇಟಿ ನೀಡಿದ್ದರು.

ನವೀಕೃತಗೊಂಡಿರುವ ಇಡೀ ಕಚೇರಿಯನ್ನು ವೀಕ್ಷಿಸಿದರು. ನಂತರ ಆವರಣದಲ್ಲಿ ನಡೆಯುತ್ತಿರುವ ಬೇಲೂರು, ಹಳೇಬೀಡು ಶೈಲಿಯಲ್ಲಿ ನಿರ್ಮಾಣಗೊಳ್ಳುತ್ತಿರುವ ಎ ಬ್ಲಾಕ್ ವಾಣಿಜ್ಯ ಮಳಿಗೆ, ಸಂಗೀತ ಕಾರಂಜಿ, ಡ್ರಾಗನ್ ಕೊಳ ಸೇರಿದಂತೆ ವಿವಿಧ ಕಾಮಗಾರಿ ಬಗ್ಗೆ ಮಾಹಿತಿ ಪಡೆದ ಅವರಿಗೆ ಮೀಟಿಂಗ್ ರೂಂನಲ್ಲಿ ಪ್ರತ್ಯೇಕವಾಗಿ ಕಾಮಗಾರಿಗಳ ಪ್ರತಿರೂಪ ತ್ರಿಡಿ ಚಿತ್ರವನ್ನು ತೋರಿಸಿದರು. ಎಲ್ಲವನ್ನೂ ವೀಕ್ಷಿಸಿದ ಮುಖ್ಯಮಂತ್ರಿಗಳು ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಅವರೊಂದಿಗೆ ಸಾಕಷ್ಟು ವಿಚಾರಗಳ ಬಗ್ಗೆ ಚರ್ಚಿಸಿ, ಎಲ್ಲವೂ ಅದ್ಭುತವಾಗಿ ಮೂಡಿ ಬರುತ್ತಿದೆ ಎಂದು ಶ್ಲಾಘಿಸಿದರು.

ಈ ವೇಳೆ ಮುಖ್ಯಮಂತ್ರಿಗಳನ್ನು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್ ಸನ್ಮಾನಿಸಿದರು. ನಂತರ ಮುಖ್ಯಮಂತ್ರಿಗಳು ಹಾಗೂ ಸಚಿವರನ್ನು ಎಲೆಕ್ಟ್ರಿಕಲ್ ವಿಂಟೇಜ್ ಕಾರಿನಲ್ಲಿ ಕೂರಿಸಿಕೊಂಡು ಮೈದಾನದಲ್ಲಿ ನಡೆಯುತ್ತಿದ್ದ ಸಂದೇಶ್ ನಾಗರಾಜ್ ಅವರ ಕಾರ್ಯಕ್ರಮಕ್ಕೆ ಕರೆತಂದರು.

ಈ ವೇಳೆ ಸಚಿವರಾದ ಭೈರತಿ ಸುರೇಶ್, ಕೆ.ವೆಂಕಟೇಶ್, ಜಮೀರ್ ಅಹ್ಮದ್ ಖಾನ್, ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್ ಗೌಡ, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಉಪಾಧ್ಯಕ್ಷೆ ಡಾ.ಪುಷ್ಪ ಅಮರ್‌ನಾಥ್, ಪ್ರಾಧಿಕಾರದ ಸಿಇಓ ರುದ್ರೇಶ್ ಉಪಸ್ಥಿತರಿದ್ದರು.

ಅಭಿನಂದನೆ



ಸಂಸದ ಸುನಿಲ್ ಬೋಸ್ ಹುಟ್ಟುಹಬ್ಬದ ಅಂಗವಾಗಿ ಮೈಸೂರು ಜಿಲ್ಲಾ ಕಾಂಗ್ರೆಸ್ ವತಿಯಿಂದ ಅಭಿನಂದನೆ ಸಲ್ಲಿಸಲಾಯಿತು. ಈ ವೇಳೆ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ. ಬಿಜೆ. ವಿಜಯಕುಮಾರ್, ಚಾಮರಾಜನಗರ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಯೋಗೇಂದ್ರ, ಮೈಸೂರು ಡಿಸಿಸಿ ಪದಾಧಿಕಾರಿಗಳಾದ ಮಳಿಯೂರ್ ಸಂತೋಷ್, ರಾಹುಲ್, ಮನೋಜ್, ರಾಜ್ಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶಿವಶಂಕರ್ ಹಾಗೂ ಗಾರ್ಡನ್ ಮಹೇಶ್, ಗಿರೀಶ್ ಇನ್ನಿತರರಿದ್ದರು.

ವಿಲೇವಾರಿ ಘಟಕ ಇದ್ದರೂ ಕಸದ ತಾಣವಾಗುತ್ತಿರುವ ಉದ್ಬೂರು ಗ್ರಾಮ

ನೀರು, ಚರಂಡಿ ವ್ಯವಸ್ಥೆ, ರಸ್ತೆಗಳಿಲ್ಲ, ಸಿಬ್ಬಂದಿಗಳ ಕೊರತೆ...

ಮೈಸೂರು, ಆ.31– ಮೈಸೂರು ನಗರ ಸ್ವಚ್ಛ ನಗರಿ ಎಂದು ಗುರುತಿಸಿಕೊಂಡರೆ, ಮೈಸೂರು ತಾಲೂಕಿನ ಬಹುತೇಕ ಗ್ರಾಮಗಳು ಕಸದ ತಾಣವಾಗಿ ಮಾರ್ಪಟ್ಟಿದ್ದು, ರೋಗ–ರುಜಿನಗಳ ತಾಣವಾಗುತ್ತಿದೆ. ಈ ಸಾಲಿಗೆ ಸೇರಿರುವುದು ಮೈಸೂರು ತಾಲೂಕಿನ ಉದ್ಬೂರು ಗ್ರಾಮ.

ಮೈಸೂರಿನಿಂದ ಕೆಲವೇ ಕಿಲೋ ಮೀಟರ್ ದೂರದಲ್ಲಿರುವ ಈ ಗ್ರಾಮದಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕ ಹೊಂದಿದ್ದರೂ ಕಾರ್ಯ ನಿರ್ವಹಿಸದೆ ನಿಷ್ಕ್ರಿಯಗೊಂಡಿರುವುದೇ ಇದಕ್ಕೆ ಕಾರಣವಾಗಿದೆ. ಇಲ್ಲಿ ವೈಜ್ಞಾನಿಕ ರೀತಿಯಲ್ಲಿ ಕಸ ವಿಲೇವಾರಿ ಮಾಡದೆ ಸ್ಥಗಿತಗೊಳಿಸಲಾಗಿದೆ ಎನ್ನಲಾಗಿದೆ.



ಇದರೊಂದಿಗೆ ಗ್ರಾಮದಲ್ಲಿ ಕುಡಿಯುವ ನೀರು, ಚರಂಡಿ ವ್ಯವಸ್ಥೆ, ರಸ್ತೆ ಸೇರಿದಂತೆ ಮೂಲಸೌಕರ್ಯಗಳಿಂದ ವಂಚಿತವಾಗಿದೆ. ಗ್ರಾಮಕ್ಕೆ ಬರುವ ಮುಖ್ಯ ರಸ್ತೆ ಸೇರಿದಂತೆ ಎಲ್ಲಾ ರಸ್ತೆಗಳು ಹಳ್ಳ ಕೊಳ್ಳಗಳಿಂದ ಕೂಡಿವೆ.

ಉದ್ಬೂರು ಗ್ರಾಮದಲ್ಲಿ ಕಸ ಸಂಗ್ರಹದ ವಾಹನಗಳ ಮೂಲಕ ಮನೆ ಮನೆಗೆ ತೆರಳಿ ಕಸವನ್ನು ಸಂಗ್ರಹಿಸಲಾಗುತ್ತಿದೆಯಾದರೂ, ಹಸೀ ಕಸ ಮತ್ತು ಒಣ ಕಸವೆಂದು ವಿಂಗಡಿಸಿ ವಿಲೇವಾರಿ ಮಾಡಲು ಪೌರಕಾರ್ಮಿಕರು ಇಲ್ಲದ ಕಾರಣ ಸಂಗ್ರಹಿಸಿದ ಕಸವನ್ನು ಕಸವಿಲೇವಾರಿ ಘಟಕದ ಸಮೀಪ ಸುರಿಯಲಾಗುತ್ತಿದ್ದು ಅದು ಭಾರಿ ಪ್ರಮಾಣದಲ್ಲಿ ಸಂಗ್ರಹಗೊಂಡು ಕೊಳೆತು ನಾರುತ್ತಿದೆ.

ಇದೀಗ ಮಳೆ ಸುರಿಯುತ್ತಿರುವ ಕಾರಣ ಕಸ ಇನ್ನಷ್ಟು ಕೊಳೆತು ಊರಿನ ತುಂಬಾ ದುರ್ವಾಸನೆ ಹರಡಿ ಗ್ರಾಮಸ್ಥರು ವಾಸಿಸಲು ಪಾಡು ಪಡುವಂತಾಗಿದೆ. ಗ್ರಾಮದಲ್ಲೆ ಇರುವ ಗ್ರಾಮ ಪಂಚಾಯತಿ ಅಧಿಕಾರಿಗಳು ಇದರತ್ತ ಗಮನ ಹರಿಸುವಲ್ಲಿ ವಿಫಲವಾಗಿದ್ದಾರೆ. ಇಲ್ಲಿನ ಗ್ರಾಪಂ ಕಚೇರಿಗೆ ಈ ಬಗ್ಗೆ ದೂರು ನೀಡಲು ಹೋದರೆ ಅಲ್ಲಿ ಯಾರೂ ಇರುವುದಿಲ್ಲ. ಕಚೇರಿ ಸದಾ ಬಿಕೋ ಎನ್ನುತ್ತಿರುತ್ತದೆ ಎನ್ನಲಾಗಿದೆ.

ಉದ್ಬೂರು ಗ್ರಾಮದಲ್ಲಿ ಇಬ್ಬರು ಮಹಿಳಾ ಪೌರಕಾರ್ಮಿಕರು ಮಾತ್ರ ಕಾರ್ಯ ನಿರ್ವಹಿಸುತ್ತಿದ್ದು, ಅವರುಗಳು ಊರಿನ ಪ್ರಮುಖ ರಸ್ತೆ ಸೇರಿದಂತೆ ಇತರ ಕೆಲಸ ಮಾಡುವುದರಲ್ಲೆ ಒದ್ದಾಡುತ್ತಿದ್ದಾರೆ. ಹೆಚ್ಚುವರಿ ಸಿಬ್ಬಂದಿ, ಪೌರಕಾರ್ಮಿಕರನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳುವ ಅವಕಾಶವಿದೆಯಾದರೂ, ಇಲ್ಲಿರುವ ಅಧಿಕಾರಿ ಮಾತ್ರ ಕ್ಯಾರೇ ಎನ್ನದೆ ಮೌನ ತಾಳಿದ್ದಾರೆ.

ಸಿಬ್ಬಂದಿ ಕೊರತೆ ಮತ್ತು ಕಸ ವಿಲೇವಾರಿ ಘಟಕ ಸ್ಥಗಿತಗೊಂಡಿರುವ ಬಗ್ಗೆ ಕ್ರಮಕ್ಕೆ ಮನವಿ ಮಾಡಿ ಮೈಸೂರು ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಈಗಿರುವ ಅಧ್ಯಕ್ಷರು ಪತ್ರ ಬರೆದು ತಿಂಗಳುಗಳೇ ಕಳೆದರೂ ಅಲ್ಲಿಂದಲೂ ಯಾವುದೇ ಉತ್ತರ ಬಂದಿಲ್ಲವಾದ್ದರಿಂದ ಇಲ್ಲಿನ ಜನಪ್ರತಿನಿಧಿಗಳು ಕೂಡ ಕೆಲಸ ಮಾಡಲಾಗದಂತಹ ಪರಿಸ್ಥಿತಿ ಇದೆ ಎನ್ನಲಾಗಿದೆ.

ಕಾಡುಪ್ರಾಣಿಗಳ ಹಾವಳಿ: ಈ ಪ್ರದೇಶದಲ್ಲಿ ಕೋಳಿ ತ್ಯಾಜ್ಯ, ಹೋಟೆಲ್, ಬೇಕರಿಗಳ ತ್ಯಾಜ್ಯವನ್ನ ತಂದು ಸುರಿಯುತ್ತಿದ್ದು, ಚಿರತೆ ಸೇರಿದಂತೆ ಕಾಡುಪ್ರಾಣಿಗಳು ಅಲ್ಲಿ ಬಿದ್ದಿರುವ ಕೋಳಿ ತ್ಯಾಜ್ಯವನ್ನು ತಿಂದು ಅಡ್ಡಾಡುತ್ತಿವೆ. ಆಗಾಗ ಗ್ರಾಮಸ್ಥರಿಗೆ ಕಾಣಿಸಿಕೊಂಡು ಭಯದ ವಾತಾವರಣ ಮೂಡಿಸಿದೆ.

ಇದರಿಂದ ಉದ್ಬೂರು ಗ್ರಾಮವು ಕಸದ ರಾಶಿ ಸೇರಿದಂತೆ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ ಪರಿತಪಿಸುವಂತಾಗಿದೆ. ಇನ್ನಾದರೂ ಸಂಬಂಧಪಟ್ಟವರು ಗಮನಹರಿಸಬೇಕಾಗಿದೆ.

ಅಂತರಾಳದ ಭಾವನೆಗಳನ್ನು ಹೊರಹಾಕುವ ಮಾಧ್ಯಮವೇ ಸಿನಿಮಾ

ಸಿನಿಮಾ ಸಂಕಲನಕಾರ ಎಂ.ಎನ್. ಸ್ವಾಮಿ ಅಭಿಮತ

ಮೈಸೂರು, ಆ.31– ಮನುಷ್ಯನ ಅಂತರಾಳದ ಭಾವನೆಗಳನ್ನು ಹೊರ ಹಾಕುವ ಮಾಧ್ಯಮವಾಗಿ ಸಿನಿಮಾಗಳು ರೂಪುಗೊಳ್ಳುತ್ತಿವೆ ಎಂದು ಅಂತರ ರಾಷ್ಟ್ರೀಯ ಮನ್ನಣೆ ಪಡೆದ ಸಂಕಲನಕಾರ ಎಂ.ಎನ್.ಸ್ವಾಮಿ ಅಭಿಪ್ರಾಯಪಟ್ಟರು.

ಮನುಜಮತ ಸಿನಿಯಾನದ 'ಮೈಸೂರು ಸಿನಿಮಾ ಹಬ್ಬ'ವನ್ನು ಗೋಕುಲಂನಲ್ಲಿರುವ ಇಂಟರ್‌ನ್ಯಾಷನಲ್ ಯೂತ್ ಹಾಸ್ಟೆಲ್‌ನಲ್ಲಿ ಉದ್ಘಾಟಿಸಿ ಮಾತನಾಡಿದ ಅವರು, ಮನುಷ್ಯ ಜೀವನದ ವ್ಯಾಪಾರಗಳನ್ನು ಮರುಸೃಷ್ಟಿಸುವ ಕೆಲಸ ಸಿನಿಮಾಗಳಿಂದ ನಡೆಯುತ್ತಿದೆ. ಸಾಮಾಜಿಕ ಅನ್ಯಾಯ ಹಾಗೂ ನಾಗರಿಕ ಸಮಾಜಗಳನ್ನು ಪ್ರತಿಸೃಷ್ಟಿಸಿ, ಭಾವನೆಗಳ ತಾಕಲಾಟಗಳನ್ನು ವಿಶ್ಲೇಷಣೆ ಮಾಡುವ ಕ್ರಿಯೆ ಸಿನಿಮಾಗಳಿಂದ ಆಗುವುದರಿಂದ ಸಿನಿಮಾಗಳನ್ನು ಸರಿಯಾದ ರೀತಿಯಲ್ಲಿ ಅರ್ಥೈಸಲು ಸಿನಿಮಾ ಹಬ್ಬಗಳು ಸಹಕಾರಿಯಾಗಿದೆ ಎಂದರು.


ಮನುಜಮತ ಸಿನಿಯಾನದ ಸಂಚಾಲಕ ಐವಾನ್ ಡಿ ಸಿಲ್ವಾ ಮಾತನಾಡುತ್ತಾ, ಸಾಮಾಜಿಕ ರಾಜಕೀಯ ವಿಚಾರಗಳನ್ನು ಗಮನಿಸುತ್ತಾ ಸಂವಾದಿಸುವ ಚರ್ಚಿಸುವ ಬೌದ್ಧಿಕ ಚಳುವಳಿಯಾಗಿ ರಾಜ್ಯದ ವಿವಿಧ ಕಡೆಗಳಲ್ಲಿ ಸ್ಥಳೀಯ ಸಂಘಟಕರೊಂದಿಗೆ ಸಿನಿಮಾ ಹಬ್ಬಗಳನ್ನು ಸಂಘಟಿಸಲಾಗುತ್ತಿದೆ, ವಿಷಯ ವಸ್ತುಗಳನ್ನು, ನಿರ್ದಿಷ್ಟ ಸಮಸ್ಯೆಗಳನ್ನು ಇಟ್ಟುಕೊಂಡು ಸಿನಿಮಾ ಹಬ್ಬಗಳನ್ನು ರೂಪಿಸಲಾಗುತ್ತಿದೆ ಎಂದರು.

ಸಿನಿಮಾ ವಿಮರ್ಶಕ ಕೆ. ಫನಿರಾಜ್, ಮೈಸೂರಿನ ಮನುಜಮತ ಸಿನಿಯಾನದ ಸಂಚಾಲಕರಾದ ಯಶುನಂದನ್ ಕಿಲಾರ, ಫಿಲಂ ಕ್ಲಬ್ ಮನು, ಗೌರೀಶ್ ಕಪನಿ, ಮಳವಳ್ಳಿ ಆದರ್ಶ ಲೋಕೇಶ್ ಮೊಸಳೆ, ಮುಂತಾದವರು ಮೈಸೂರಿನ ಸಿನೆ ಹಬ್ಬದ ನೇತೃತ್ವ ವಹಿಸಿದ್ದರು.

ಜಿಎಸ್‌ಟಿ ಎರಡು ಸ್ಲ್ಯಾಬ್ ಮಾಡುವುದರಿಂದ ಪ್ರತಿ ವರ್ಷ ರಾಜ್ಯಕ್ಕೆ 15 ಸಾವಿರ ಕೋಟಿ ನಷ್ಟ

ಪದೇ ಪದೆ ರಾಜ್ಯಕ್ಕೆ ಅನ್ಯಾಯವಾದರೂ ಸೊಲ್ಲೆತ್ತದ ಬಿಜೆಪಿ ಸಂಸದರು; ಸಿಎಂ ಸಿದ್ದರಾಮಯ್ಯ ಕಿಡಿ

ಮೈಸೂರು,ಆ.31(ಎಂಟಿವೈ)– ಕೇಂದ್ರ ಸರ್ಕಾರ ಜಿಎಸ್‌ಟಿ ಎರಡು ಸ್ಲ್ಯಾಬ್ ಮಾಡುವುದರಿಂದ ಪ್ರತಿ ವರ್ಷ ರಾಜ್ಯಕ್ಕೆ 15 ಸಾವಿರ ಕೋಟಿ ನಷ್ಟವಾಗಬಹುದೆಂದು ಅಂದಾಜಿಸಲಾಗಿದ್ದು, ರಾಜ್ಯಕ್ಕೆ ಪದೇ ಪದೆ ಅನ್ಯಾಯವಾಗುತ್ತಿದ್ದರೂ ಬಿಜೆಪಿ ಸಂಸದರು ರಾಜ್ಯದ ಪರ ಸೊಲ್ಲೆತ್ತುತ್ತಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿಕಾರಿದ್ದಾರೆ.



ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಜಿಎಸ್‌ಟಿ ಎರಡು ಸ್ಲ್ಯಾಬ್ ಮಾಡಿರುವುದರಿಂದ ಪ್ರತಿವರ್ಷ ರಾಜ್ಯಕ್ಕೆ 15 ಸಾವಿರ ಕೋಟಿ ನಷ್ಟವಾಗುತ್ತಿತ್ತು. ಇದೀಗ ಜಿಎಸ್‌ಟಿ ಪದ್ಧತಿಯನ್ನು ತರ್ಕಬದ್ಧಗೊಳಿಸಲು ಮುಂದಾಗಿರುವುದನ್ನು ಸ್ವಾಗತಿಸುತ್ತೇವೆ. ಆದರೆ ಹಣಕಾಸಿನ(ರೆವಿನ್ಯೂ ಪ್ರೊಟೆಕ್ಷನ್) ರಕ್ಷಣೆಯಾಗಬೇಕೆನ್ನುವುದು ನಮ್ಮ ಉದ್ದೇಶ. ಅದಕ್ಕಾಗಿ ಎಂಟು ರಾಜ್ಯಗಳ ಬಗ್ಗೆ ದೆಹಲಿಯಲ್ಲಿ ಚರ್ಚೆ ಮಾಡಲಾಗಿದೆ. ರಾಜ್ಯದಿಂದ 2.50 ಲಕ್ಷ ಕೋಟಿ ರೂ. ಸಂಗ್ರಹವಾಗುತ್ತಿದ್ದರೂ, 15 ಸಾವಿರ ಕೋಟಿ ನಷ್ಟವಾಗುತ್ತಿದೆ ಎಂದರು.

ಸಿನ್ ಗೂಡ್ಸ್ ಮೇಲೆ ಸೆಸ್ ಹಾಕಿ ಪರಿಹಾರ ಒದಗಿಸಲು ಜಿಎಸ್‌ಟಿ ಮಂಡಳಿಗೆ ಸಲಹೆ: 2017ರಲ್ಲಿ ಜಿಎಸ್‌ಟಿ ಜಾರಿಯಾದಾಗ 5 ವರ್ಷ ಮಾತ್ರ ಪರಿಹಾರ ನೀಡುವುದಾಗಿ ಹೇಳಿದ್ದರು. ಈಗ ಸುಮಾರು ಶೇ.12ರಷ್ಟು ತೆರಿಗೆ ಬೆಳವಣಿಗೆಯಾಗಿದೆ. ಲಕ್ಷುರಿ(ಸಿನ್ ಗೂಡ್ಸ್) ವಸ್ತುಗಳಾದ ಸಿಗರೇಟ್, ಗುಟ್ಕಾ, ಪಾನ್ ಮಸಾಲಾ ಬೆಂಜ್ ಕಾರುಗಳಲ್ಲಿ ಓಡಾಡುವವರ ಮೇಲೆ ಸೆಸ್ ಹಾಕಿ ನಮಗೆ ಪರಿಹಾರ ಕೊಡಿ ಎಂದು ಸಲಹೆ ನೀಡಿದ್ದೇವೆ. ಸಚಿವ ಕೃಷ್ಣಭೈರೇಗೌಡ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಅವರೇ ಈಗ ಎಂಟು ರಾಜ್ಯಗಳ ಆರ್ಥಿಕ ಸಚಿವರೊಂದಿಗೆ ಸಭೆ ನಡೆಸಿದ್ದಾರೆ. ಸೆ.3 ಮತ್ತು 4ರಂದು ನಡೆಯಲಿರುವ ಸಭೆಯಲ್ಲಿ ಇದನ್ನು ಪ್ರಸ್ತಾಪ ಮಾಡಲಿದ್ದಾರೆ ಎಂದರು.

ರಾಜ್ಯದ ಪರ ಬಿಜೆಪಿ ಯಾವಾಗ ಧ್ವನಿ ಎತ್ತಿದೆ: ಜಿಎಸ್‌ಟಿ ವಿಚಾರವಾಗಿ ರಾಜ್ಯದ ಸಚಿವರು ಹಾಗೂ ಬಿಜೆಪಿ ಸಂಸದರು ರಾಜ್ಯದ ಪರವಾಗಿ ಎಂದಿಗೂ ಮಾತನಾಡಿಲ್ಲ. ಕರ್ನಾಟಕಕ್ಕೆ 11,950 ಕೋಟಿ ರೂ. ನಷ್ಟವಾಯಿತು. ಬಿಜೆಪಿ ಸಂಸದರು ಈ ಬಗ್ಗೆ ಮಾತನಾಡಿಯೇ ಇಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.


ದಕ್ಷಿಣ ಭಾರತದ ಇತರೆ ರಾಜ್ಯಗಳಿಗೆ ಸಮನಾಗಿ ಆಸ್ತಿ ನೋಂದಣಿ ಹೆಚ್ಚಳ: ಆಸ್ತಿ ನೋಂದಣಿ ಶುಲ್ಕ ಹೆಚ್ಚಳವಾಗಿರುವ ಬಗ್ಗೆ ಪ್ರತಿಕ್ರಿಯೆ ನೀಡಿ ದಕ್ಷಿಣ ಭಾರತದ ಇತರೆ ರಾಜ್ಯಗಳಿಗೆ ಸಮಾನವಾಗಿ ಶೇ.1ರಷ್ಟನ್ನು ಹೆಚ್ಚಿಸಲಾಗಿದೆ ಎಂದರು.

ಹನೂರು ಚೆನ್ನಪ್ಪನವರ 'ಕಬ್ಬಿಣದ ಕುದುರೆಗಳು' ಕಾದಂಬರಿ ಬಿಡುಗಡೆ

ಸಾಮಾಜಿಕ ಮಾಧ್ಯಮಗಳು ಸಮಾಜವನ್ನು ಆವರಿಸಿ ಬಿಟ್ಟಿದೆ

ಮೈಸೂರು, ಆ.31(ಜಿಎ)–ಮೈಸೂರಿನ ಮಾನಸಗಂಗೋತ್ರಿಯ ರಾಣಿ ಬಹದ್ದೂರು ಸಭಾಂಗಣದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘ, ನೆಲೆ ಹಿನ್ನೆಲೆ, ಜೋಳಿಗೆ ಪ್ರಕಾಶನ ಚಾಮರಾಜನಗರ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲೇಖಕ ಹನೂರು ಚೆನ್ನಪ್ಪ ವಿರಚಿತ 'ಕಬ್ಬಿಣದ ಕುದುರೆಗಳು' ಕಾದಂಬರಿಯನ್ನು ಕರ್ನಾಟಕ ಕವಯಿತ್ರಿ ಸಂಘದ ಅಧ್ಯಕ್ಷೆ ಕವಯಿತ್ರಿ ಡಾ. ಹೆಚ್.ಎಲ್.ಪುಷ್ಪ ಬಿಡುಗಡೆ ಮಾಡಿದರು.

ನಂತರ ಮಾತನಾಡಿದ ಅವರು, ಪ್ರಸ್ತುತ ಎಲ್ಲಾ ಕಡೆಗಳಲ್ಲಿ ಕೃತಿ ಬಿಡುಗಡೆ ಕಾರ್ಯಕ್ರಮಗಳು ಒಂದು ರೀತಿಯ ಔಪಚಾರಿಕ ಅನ್ನುವ ರೀತಿಯಲ್ಲಾಗುತ್ತಿವೆ. ಅದಲ್ಲದೇ ಜನರನ್ನು ಹೇಗೆ ತಲುಪುವ ರೀತಿಯ ಸಾಧ್ಯತೆಗಳಿವೆಯೋ ಎಂಬುದು ಮುಖ್ಯವಾಗಿದೆ. ಮಾಧ್ಯಮಗಳ ಕಾಲಘಟ್ಟದಲ್ಲಿ ಕೃತಿಗಳು ಕೇವಲ ಸೃಜನಶೀಲತೆಯಿಂದ ತಲುಪಬೇಕು ಎಂಬುದನ್ನು ದಾಟಿದ್ದೇವೆ. ಸಾಮಾಜಿಕ ಮಾಧ್ಯಮಗಳು ಸಹ ಸಮಾಜವನ್ನು ಆವರಿಸಿಬಿಟ್ಟಿವೆ. ಇದರ ಜತೆಗೆ ಕೃತಿಗಳ ಬಿಡುಗಡೆಯಲ್ಲಿ ವರ್ಗ, ವರ್ಣ, ಲಿಂಗಗಳ ಹಿನ್ನೆಲೆಗಳನ್ನು ಕಾಣಬಹುದಾಗಿದೆ ಎಂದರು.



ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲೇಖಕ ಹನೂರು ಚೆನ್ನಪ್ಪ ವಿರಚಿತ 'ಕಬ್ಬಿಣದ ಕುದುರೆಗಳು' ಕಾದಂಬರಿಯನ್ನು ಕರ್ನಾಟಕ ಕವಯಿತ್ರಿ ಸಂಘದ ಅಧ್ಯಕ್ಷೆ ಕವಯಿತ್ರಿ ಡಾ. ಹೆಚ್.ಎಲ್.ಪುಷ್ಪ ಬಿಡುಗಡೆಗೊಳಿಸಿದರು.

ಇಂದು ಬರೆಯುವವರ ಸಂಖ್ಯೆ ಹೆಚ್ಚಾಗಿದೆ. ಅದರಲ್ಲೂ ವಿಶೇಷವಾಗಿ ಮಹಿಳೆಯರು ಒಪ್ಪಿತವಾಗಿ ಬರೆಯುವ ಕಾಲಘಟ್ಟದಲ್ಲಿದ್ದೇವೆ. ಕಾದಂಬರಿ ಒಂದು ಒಟ್ಟು ಜನರ ಚಿತ್ರಣ, ಜೀವನ, ಪರಂಪರೆಯನ್ನು ತಲೆಮಾರುಗಳ ಚಿತ್ರಣವನ್ನು ಕಟ್ಟಿಕೊಡುವ ಪ್ರಕಾರ. ಇಂತಹದನ್ನು ಕಬ್ಬಿಣದ ಕುದುರೆ ಕಾದಂಬರಿ 80ರ ಕಾಲಘಟ್ಟದ ಜೀವನವನ್ನು ಕಟ್ಟಿಕೊಡಲಿದೆ ಎಂದು ತಿಳಿಸಿದರು.

ಬಸವಣ್ಣನ ಕಾಲಘಟ್ಟದಲ್ಲಿ ನಡೆದಂತಹ ಅಂತರ್ಜಾತಿ ವಿವಾಹ ಕಲ್ಯಾಣದ ಕ್ರಾಂತಿ, ವರ್ಣ ಸಂಕಲಗಳು, ಇವತ್ತಿನ ಅಂತರ್ಜಾತಿ ವಿವಾಹ ಪ್ರಸಂಗಗಳನ್ನು ಗಮನಿಸಿದಾಗ ಕಾಲದ ಬದಲಾವಣೆ, ಜನರ ಆಲೋಚನೆಗಳು ಬದಲಾಗಿವೆಯೇ ಅನ್ನುವುದನ್ನು ಗಮನಿಸಬೇಕಾಗಿದೆ. ಇವತ್ತು ಸಂವಿಧಾನದ ಆಲೋಚನೆಗಳು ನಡೆಯುತ್ತಿವೆ. ಕಾನೂನುಗಳಿವೆ. ಇವೆಲ್ಲವು ಇದ್ದು ಇಂತಹ ವಿವಾಹಗಳು ಗೆಲ್ಲುವ ಹಾದಿಯಲ್ಲಿವೆಯೇ ಎಂಬ ಹಲವು ಪ್ರಶ್ನೆಗಳನ್ನು ಕಾದಂಬರಿ ಹುಟ್ಟಾಕುತ್ತದೆ ಎಂದರು.

ಇಂದು ಆಧುನಿಕವಾಗಿ ಸಮಾಜ ಬೆಳೆದಿದೆ. ಜಾತಿಗಳ ಸಂಕೋಲೆಗಳನ್ನು ಕಳಚಿ ಹೊರಬರಬೇಕೆಂಬ ಹಂತದಲ್ಲಿದ್ದೇವೆ. ಇಂತಹ ಸಂದರ್ಭಗಳಲ್ಲಿ ಕೋಮುವಾದಗಳು, ಮರ್ಯಾದೆ ಹತ್ಯೆಗಳು, ಜಾತಿ ಕಂದಕಗಳು ಹೆಚ್ಚುತ್ತಿವೆ. ಸಂವಿಧಾನವನ್ನು ಬೀದಿಗೆ ತಂದು ನಿಲ್ಲಿಸಿ, ಸಂವಿಧಾನದ ಮೊರೆಹೊಕ್ಕು, ಮುನ್ನೆಲೆಗೆ ತಂದು ಮಾತನಾಡುವ ವಾದವನ್ನು ನಾವೆಲ್ಲ ಯಾಕೆ ಮಾಡಿದ್ದೇವೆ ಎನ್ನುವುದನ್ನು ಕಾದಂಬರಿಯಲ್ಲಿ ಚಿತ್ರಿಸಲಾಗಿದೆ ಎಂದು ವಿವರಿಸಿದರು.

ಸಾಹಿತಿ ಡಾ.ವಡ್ಡಗೆರೆ ನಾಗರಾಜಯ್ಯ, ಸಂಸ್ಕೃತಿ ಚಿಂತಕ ಡಾ.ನಲ್ಲುಕುಂಟೆ ವೆಂಕಟೇಶಯ್ಯ, ಮಾಜಿ ಮೇಯರ್ ಪುರುಷೋತ್ತಮ್, ಲೇಖಕ ಹನೂರು ಚನ್ನಪ್ಪ, ಪ್ರೊ.ಕೆ.ಎಸ್ ಭಗವಾನ್, ರಂಗಾಯಣ ಮಾಜಿ ನಿರ್ದೇಶಕ ಜನಾರ್ದನ(ಜನ್ನಿ) ಮತ್ತಿತರರು ಉಪಸ್ಥಿತರಿದ್ದರು.

> ಅರಿಶಿನ ಕುಂಕುಮ ಪದ, ಸಾಂಕೇತಿಕವಾಗಿ ಹಿಂದಿನಿಂದಲೂ ಬಳಕೆಯಲ್ಲಿದೆ. ಅದನ್ನು ಧಾರ್ಮಿಕ ಹಿನ್ನೆಲೆಯಲ್ಲಿ ನೋಡುವ ಅಗತ್ಯವಿಲ್ಲ. ಅದೇ ಇವತ್ತು ಚರ್ಚೆಯ ಕಿರುಚಾಟವಾಗಿದೆ. ಬಾನು ಮುಷ್ತಾಕ್ ಪ್ರಗತಿಪರ ಮಹಿಳೆ ಆದ ಕಾರಣ ಇಂತಹ ಪ್ರತಿರೋಧಗಳನ್ನು ಎದುರಿಸುವಂತಾಗಿದೆ. ಇನ್ನು ಈ ಸಮಾಜ ಯಾವ ಕಾಲಘಟ್ಟದಲ್ಲಿದೆ. ಮಹಿಳೆ ದಸರಾ ಉದ್ಘಾಟನೆ ಮಾಡುವುದನ್ನು ಮುಕ್ತವಾಗಿ ಒಪ್ಪಿಕೊಂಡಿಲ್ಲ. ಆರಂಭದಲ್ಲಿ ಎಲ್ಲರೂ ಒಕ್ಕೊರಲಾಗಿ ಸ್ವೀಕರಿಸಿದ್ದರು. ಆದರೆ, ದಸರಾ ಉದ್ಘಾಟನಾ ಸಂದರ್ಭದಲ್ಲಿ ವಿರೋಧಗಳು ವ್ಯಕ್ತವಾಗುತ್ತಿವೆ
> –ಡಾ.ಹೆಚ್.ಎಲ್.ಪುಷ್ಪ,
> ಅಧ್ಯಕ್ಷೆ, ಕರ್ನಾಟಕ ಕವಯಿತ್ರಿ, ಸಂಘ

ಜೆಡಿಎಸ್‌ನಿಂದ 'ಧರ್ಮಸ್ಥಳ ಸತ್ಯಯಾತ್ರೆ'

ಧರ್ಮಸ್ಥಳ ಪ್ರಕರಣ ಎನ್‌ಐಎ ತನಿಖೆಗೆ ನಿಖಿಲ್ ಕುಮಾರಸ್ವಾಮಿ ಆಗ್ರಹ

ಧರ್ಮಸ್ಥಳ, ಆ.31– ಧರ್ಮಸ್ಥಳ ಕ್ಷೇತ್ರದ ವಿರುದ್ಧ ಷಡ್ಯಂತ್ರ ರೂಪಿಸಿರುವ ವ್ಯಕ್ತಿಗಳನ್ನು ಮತ್ತು ವಿದೇಶಿ ಫಂಡಿಂಗ್ ಅನ್ನು ಪತ್ತೆಹಚ್ಚಲು ಪ್ರಕರಣವನ್ನು ಎನ್‌ಐಎ ತನಿಖೆ ನಡೆಸಬೇಕೆಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಆಗ್ರಹಿಸಿದರು.



ಭಾನುವಾರ ತಮ್ಮ ನೇತೃತ್ವದಲ್ಲಿ ಹಾಸನದಿಂದ ಹಮ್ಮಿಕೊಂಡಿದ್ದ 'ಧರ್ಮಸ್ಥಳ ಸತ್ಯಯಾತ್ರೆ'ಯು ಧರ್ಮಸ್ಥಳ ತಲುಪಿದನಂತರ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದ ಅವರು, ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದರು. ಸಹಸ್ರಾರು ಭಜನಾ ಮಂಡಳಿಗಳು, ಸಾವಿರಾರು ದೇವಸ್ಥಾನಗಳ ಜೀರ್ಣೋದ್ಧಾರ, ಲಕ್ಷಾಂತರ ಕುಟುಂಬಗಳಿಗೆ ನೀಡಿರುವ ಆರ್ಥಿಕ ಸಹಾಯ, ಲಕ್ಷಾಂತರ ಜನರಿಗೆ ನೀಡಿರುವ ನ್ಯಾಯ, ಲಕ್ಷಾಂತರ ವಿದ್ಯಾರ್ಥಿಗಳಿಗೆ ನೀಡಿರುವ ವಿದ್ಯಾದಾನ, ಕೋಟ್ಯಾಂತರ ಜನರಿಗೆ ನಡೆಯುವ ಅನ್ನದಾನ ಇವೆಲ್ಲವೂ ನಿತ್ಯವೂ ನಡೆಯಬೇಕು. ಕೋಟ್ಯಾಂತರ ಭಕ್ತರ ಸೇವೆ ಮಾಡುತ್ತಿರುವ ವೀರೇಂದ್ರ ಹೆಗ್ಗಡೆ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳದೊಂದಿಗೆ ನಾವೆಲ್ಲರೂ ಇದ್ದೇವೆ ಎಂದರು.

ಧರ್ಮಸ್ಥಳ ಕ್ಷೇತ್ರದ ಮೇಲೆ ನಡೆಯುತ್ತಿರುವ ಷಡ್ಯಂತ್ರ, ಅಪಪ್ರಚಾರಗಳ ಹಿಂದಿರುವ ಕಾಣದ ಕೈಗಳನ್ನು ಹಾಗೂ ದುಷ್ಟಶಕ್ತಿಗಳನ್ನು ಬಯಲಿಗೆಳೆಯುವ ನಿಟ್ಟಿನಲ್ಲಿ ಧರ್ಮಸ್ಥಳ ಪ್ರಕರಣವನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ)ಗೆ ವಹಿಸುವಂತೆ ಆಗ್ರಹಿಸಿದರು.

ಧರ್ಮಸ್ಥಳ ವಿಷಯದಲ್ಲಿ ರಾಜಕೀಯ ಮಾಡುವ ಪ್ರಶ್ನೆಯೇ ಇಲ್ಲ. ನಾವೆಲ್ಲರೂ ಧರ್ಮದ ಪರವಾಗಿ ನಿಲ್ಲಬೇಕು ಮತ್ತು ಸತ್ಯ ಗೆಲ್ಲಬೇಕು. ಕೆಲವು ಸಮಾಜ ವಿರೋಧಿ ಶಕ್ತಿಗಳು ಪಿತೂರಿ ನಡೆಸಿವೆ. ಧರ್ಮಸ್ಥಳದ ಭಕ್ತರಾಗಿ, ಸತ್ಯವು ಜನರ ಮುಂದೆ ಬರಬೇಕೆಂದು ನಾವು ಬಯಸುತ್ತೇವೆ ಎಂದು ಅವರು ಹೇಳಿದರು.

ಕೆಲವು ಅಂತರರಾಷ್ಟ್ರೀಯ ಮಾಧ್ಯಮ ಸಂಸ್ಥೆಗಳು ಮತ್ತು ಯೂಟ್ಯೂಬ್ ಚಾನೆಲ್‌ಗಳನ್ನು ಒಂದು ಗುಂಪು ವ್ಯವಸ್ಥಿತವಾಗಿ ಧರ್ಮಸ್ಥಳದ ವಿರುದ್ಧ ಷಡ್ಯಂತ್ರಕ್ಕೆ ಬಳಸಿಕೊಳ್ಳುತ್ತಿವೆ. ಈ ಪಿತೂರಿಗೆ ಅಂತರರಾಷ್ಟ್ರೀಯ ಹಣಕಾಸು ನೆರವು ಇರಬಹುದು. ಆದ್ದರಿಂದ ನಾವು ಜೆಡಿಎಸ್ ಪರವಾಗಿ ಮತ್ತು ಧರ್ಮಸ್ಥಳದ ಭಕ್ತರಾಗಿ ತನಿಖೆಯನ್ನು ಎನ್‌ಐಎ ವಹಿಸಿಕೊಳ್ಳಬೇಕೆಂದು ಒತ್ತಾಯಿಸುತ್ತಿದ್ದೇವೆ ಎಂದರು.

ಧರ್ಮಸ್ಥಳದ ವಿರುದ್ಧ ಪಿತೂರಿ ನಡೆದಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿಧಾನಸಭೆಯಲ್ಲಿ ಆರೋಪಿಸಿರುವುದನ್ನು ಪ್ರಸ್ತಾಪಿಸಿದ ನಿಖಿಲ್ ಕುಮಾರಸ್ವಾಮಿ, ಕೇಂದ್ರ ಸಚಿವ ಹೆಚ್‌ಡಿ ಕುಮಾರಸ್ವಾಮಿ ಮುಂದಿನ ದಿನಗಳಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿ ಪ್ರಕರಣದ ಎನ್‌ಐಎ ತನಿಖೆಯ ಬಗ್ಗೆ ಚರ್ಚಿಸಲಿದ್ದಾರೆ ಎಂದು ಹೇಳಿದರು.

ಪ್ರಕರಣದ ತನಿಖೆಗಾಗಿ ಸರ್ಕಾರ ಎಸ್‌ಐಟಿ ರಚಿಸಿರುವುದರ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಕೆಲವು ವ್ಯಕ್ತಿಗಳ ಪಾತ್ರದ ಬಗ್ಗೆ ವಿಶ್ವಾಸಾರ್ಹ ಮೂಲಗಳಿಂದ ಸಂಗ್ರಹಿಸಿದ ಕೆಲವು ಮಾಹಿತಿಯನ್ನು ಹಂಚಿಕೊಳ್ಳಲು ಕುಮಾರಸ್ವಾಮಿ ದೆಹಲಿಯಲ್ಲಿ ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ ಎಂದು ಅವರು ಹೇಳಿದರು.

ಎಸ್‌ಐಟಿ ತನಿಖೆಯಿಂದ ಇನ್ನೂ ಯಾವುದೇ ಸತ್ಯ ಹೊರಬಂದಿಲ್ಲ. ಬದಲಾಗಿ ಧರ್ಮಸ್ಥಳಕ್ಕೆ ಅವಮಾನವಾಗಿದೆ. ಚಿನ್ನಯ್ಯ ತಲೆಬುರುಡೆ ಮತ್ತು ಕೆಲವು ಅಸ್ಥಿಪಂಜರದ ಅವಶೇಷಗಳೊಂದಿಗೆ ದೂರು ನೀಡಲು ಬಂದಾಗ ಅವರ ಹಿನ್ನೆಲೆ, ಉದ್ದೇಶ ಮತ್ತು ಅವರ ಬಗ್ಗೆ ಎಸ್‌ಐಟಿ ಪ್ರಾಥಮಿಕ ತನಿಖೆ ನಡೆಸಬೇಕಿತ್ತು. ಮೊದಲು ಅವರ (ಚಿನ್ನಯ್ಯ) ಬಗ್ಗೆ ವಿಚಾರಿಸುವ ಬದಲು, ಉಳಿದೆಲ್ಲವೂ ಮುಗಿದಿತ್ತು ಎಂದರು.

ಸೆ.6ಕ್ಕೆ ರೈಲ್ವೇ ಕೋ–ಆಪರೇಟಿವ್ ಬ್ಯಾಂಕ್‌ನ ಶತಮಾನೋತ್ಸವ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ದಿ ರೈಲ್ವೇ ಕೋ–ಆಪರೇಟಿವ್ ಬ್ಯಾಂಕ್‌ನ ಶತಮಾನೋತ್ಸವ ಹಾಗೂ 105ನೇ ವರ್ಷದ ಸಂಭ್ರಮ 'ಶತ ಪಯಣ' ಕಾರ್ಯಕ್ರಮದ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಮೈಸೂರು, ಆ.31(ಜಿಎ)–ದಿ ರೈಲ್ವೇ ಕೋ–ಆಪರೇಟಿವ್ ಬ್ಯಾಂಕ್‌ನ ಶತಮಾನೋತ್ಸವ ಹಾಗೂ 105ನೇ ವರ್ಷದ ಸಂಭ್ರಮ 'ಶತ ಪಯಣ' ಕಾರ್ಯಕ್ರಮವನ್ನು ಸೆ.6ರಂದು ಬೆಳಿಗ್ಗೆ 10.30ಕ್ಕೆ ಜೆ.ಕೆ. ಮೈದಾನದಲ್ಲಿರುವ ಎಂಎಂಸಿಆರ್‌ಐ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಬ್ಯಾಂಕ್ ಅಧ್ಯಕ್ಷ ಎಂ.ಬಿ. ಮಂಚೇಗೌಡ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮೀಜಿ, ಕಾಗಿನೆಲೆ ಮಠದ ಡಾ.ಶಿವಾನಂದಪುರಿ ಸ್ವಾಮೀಜಿ, ಆದಿಚುಂಚನಗಿರಿ ಮಠದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಉರಿಲಿಂಗಿ ಪೆದ್ದಿ ಮಠದ ಜ್ಞಾನ ಪ್ರಕಾಶ ಸ್ವಾಮೀಜಿ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ, ವಿ.ಸೋಮಣ್ಣ, ಸೌತ್ ವೆಸ್ಟರ್ನ್ ರೈಲ್ವೇ ಜನರಲ್ ಮ್ಯಾನೇಜರ್ ಮುಕುಲ್ ಸರನ್ ಮಾಥುರ್, ಸಚಿವರಾದ ಹೆಚ್.ಕೆ. ಪಾಟೀಲ್, ದಿನೇಶ್ ಗುಂಡೂರಾವ್, ಕೆ.ವೆಂಕಟೇಶ್, ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ ಟಿ.ಎಸ್.ಶ್ರೀವತ್ಸ ತನ್ವೀರ್ ಸೇಠ್, ಜಿ.ಡಿ.ಹರೀಶ್‌ಗೌಡ ಎಂ.ಕೃಷ್ಣಪ್ಪ ರವಿ ಗಣಿಗ, ವಿಧಾನ ಪರಿಷತ್ ಸದಸ್ಯರಾದ ಯತೀಂದ್ರ ಸಿದ್ದರಾಮಯ್ಯ, ಸಿ.ಎನ್.ಮಂಜೇಗೌಡ, ಮಾಜಿ ಶಾಸಕರಾದ ಎಂ.ಕೆ. ಸೋಮಶೇಖರ್, ಎಲ್.ನಾಗೇಂದ್ರ, ಮಾಜಿ ಸಂಸದ ಪ್ರತಾಪ್ ಸಿಂಹ ಮತ್ತಿತರರು ಭಾಗವಹಿಸಲಿದ್ದಾರೆ ಎಂದರು.

ವಿಶೇಷ ಆಹ್ವಾನಿತರಾಗಿ ವಿಭಾಗೀಯ ರೈಲ್ವೇ ಮ್ಯಾನೇಜರ್‌ಗಳಾದ ಬೇಲಾ ಮೀನಾ, ಮುದಿತ್ ಮಿತ್ತಲ್, ಅಶುತೋಷ್ ಕುಮಾರ್ ಸಿಂಗ್, ಚೀಫ್ ವರ್ಕ್ಸ್ ಮ್ಯಾನೇಜರ್ ವಿಜಯ ಸಿಂಗ್ ಯಾದವ್, ವಿ.ಕೆ. ಚಡ್ಡಾ, ಸಹಕಾರ ಸಂಘಗಳ ನಿಬಂಧಕ ಟಿ.ಹೆಚ್.ಎಂ.ಕುಮಾರ್, ಪಟ್ಟಣ ಬ್ಯಾಂಕ್‌ಗಳ ಜಂಟಿ ನಿಬಂಧಕ ಎನ್.ವೆಂಕಟೇಶ್, ಆರ್‌ಬಿಐ ಅರ್ಬನ್ ಬ್ಯಾಂಕ್ ಸೆಲ್ ಜನರಲ್ ಮ್ಯಾನೇಜರ್ ಪ್ರಿಯಾ ಸಿ.ಅಪ್ಪುಕುಟ್ಟನ್, ಮೈಸೂರು ಪ್ರಾಂತದ ಜಂಟಿ ನಿಬಂಧಕರಾದ ಸಿ.ಪ್ರಸಾದ್ ರೆಡ್ಡಿ ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಶತಮಾನೋತ್ಸವ ಸಮಾರಂಭದಲ್ಲಿ ಬ್ಯಾಂಕ್ ಸ್ಥಾಪನೆಗೆ ಕೊಡುಗೆ ನೀಡಿದ ಹಿರಿಯ ಸದಸ್ಯರು ಹಾಗೂ ಪ್ರಮುಖ ವ್ಯಕ್ತಿಗಳನ್ನು ಸನ್ಮಾನಿಸಲಾಗುವುದು. ಬ್ಯಾಂಕ್ ಸದಸ್ಯರ ಮಕ್ಕಳು ಎಸ್‌ಎಸ್‌ಎಲ್‌ಸಿ ಹಾಗೂ ಉನ್ನತ ಪರೀಕ್ಷೆಗಳಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಗಳಿಸಿದವರಿಗೆ 'ಪ್ರತಿಭಾ ಪ್ರಶಸ್ತಿ' ಪ್ರದಾನ ಮಾಡಲಾಗುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬ್ಯಾಂಕ್ ಉಪಾಧ್ಯಕ್ಷ ಎಸ್.ಆನಂದ್, ಸಿಇಒ ನಾರಾಯಣ್, ನಿರ್ದೇಶಕರಾದ ಸಿ.ಶಿವಶಂಕರ, ಶ್ವೇತಾ, ಉತ್ತೇಜ್, ಚಂದ್ರಶೇಖರ್, ನಿರ್ಮಲಾ, ಪ್ರಧಾನ ವ್ಯವಸ್ಥಾಪಕರು ಸತ್ಯ ನಾರಾಯಣ ಮತ್ತು ಲಕ್ಷ್ಮೀಪ್ರಸಾದ್ ಉಪಸ್ಥಿತರಿದ್ದರು.

ಬುಡಕಟ್ಟು ಸಮುದಾಯ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲು ಮುಂದಾಗಬೇಕು

ಕಾರ್ಮಿಕ ಸಚಿವ ಸಂತೋಷ್ ಲಾಡ್ ಸಲಹೆ



ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತದ ವತಿಯಿಂದ ಆಯೋಜಿಸಿದ್ದ ನುಲಿಯ ಚಂದಯ್ಯ ಜಯಂತಿ ಕಾರ್ಯಕ್ರಮವನ್ನು ಕಾರ್ಮಿಕ ಸಚಿವ ಸಂತೋಷ್ ಲಾಡ್ ಉದ್ಘಾಟಿಸಿದರು.

ಮೈಸೂರು,ಆ.31(ಎಂಟಿವೈ)– ಭಿನ್ನಾಭಿಪ್ರಾಯ ಬದಿಗೊತ್ತಿ ಎಲ್ಲಾ ಬುಡಕಟ್ಟು ಸಮುದಾಯಗಳು ಒಗ್ಗಟ್ಟು ಪ್ರದರ್ಶಿಸಿ ಏಳಿಗೆ ಸಾಧಿಸುವತ್ತ ಗಮನ ಹರಿಸಬೇಕು ಬೇಕು ಎಂದು ಕಾರ್ಮಿಕ ಸಚಿವ ಸಂತೋಷ್. ಎಸ್.ಲಾಡ್ ಸಲಹೆ ನೀಡಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಮಹಾನಗರ ಪಾಲಿಕೆ, ನುಲಿಯ ಚಂದಯ್ಯ ಜಯಂತ್ಯೋತ್ಸವ ಸಮಿತಿ ಸಹಯೋಗದೊಂದಿಗೆ ಆಯೋಜಿಸಿದ್ದ ನುಲಿಯ ಚಂದಯ್ಯ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲಾ ಸಮುದಾಯವರು ಒಗ್ಗಟ್ಟಿನಿಂದ ಇರಬೇಕು. ಇದರಿಂದ ಮುಂದಿನ ದಿನಗಳಲ್ಲಿ ರಾಜಕೀಯ ಶಕ್ತಿ ದೊರೆಯಲು ಸಾಧ್ಯವಾಗುತ್ತದೆ. ಎಲ್ಲಾ ಬುಡಕಟ್ಟು ಸಮುದಾಯ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲು ಮುಂದಾಗಬೇಕು ಎಂದು ತಿಳಿಸಿದರು.

ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಕಾರ್ಮಿಕ ಇಲಾಖೆಯಲ್ಲಿ ಮೊದಲು 26 ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಿಕೊಳ್ಳುತ್ತಿದ್ದರು. ಆದರೆ ಈಗ ಹಿಂದುಳಿದ ವರ್ಗ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಎಲ್ಲಾ ಅಸಂಘಟಿತ ಕಾರ್ಮಿಕರಿಗೆ 91 ವರ್ಗ ಗುರುತಿಸಿ ಅವರೆಲ್ಲರನ್ನೂ ನೋಂದಾಯಿಸಿಕೊಂಡು ಸ್ಮಾರ್ಟ್ ಕಾರ್ಡ್ ಕೊಡುತ್ತಿದ್ದಾರೆ ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡಿ, ಕಾಯಕ ನಿಷ್ಠೆ ಹಾಗೂ ದಾಸೋಹದ ಮೂಲಕ ಸಮಾಜ ಪರಿವರ್ತನೆಗೆ ಶ್ರಮಿಸಿದವರು ಕಾಯಕಯೋಗಿ, ವಚನಕಾರ ನುಲಿಯ ಚಂದಯ್ಯರು ಅವರ ಕಾಯಕ ನಿಷ್ಠೆಯನ್ನು ಜೀವನದಲ್ಲಿ ಅಳವಡಿಸಿಕೊಂಡು ಪಾಲನೆ ಮಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ಎಡಿಸಿ ಡಾ.ಪಿ. ಶಿವರಾಜು, ಸಂಶೋಧಕ ವಿ.ಕಿರಣ್ ಕುಮಾರ್ ಕೊತ್ತಗೆರೆ, ಮೈಸೂರಿನ ಮುಡಿಗುಂಡ ಹಾಗೂ ಪಂಚಗವಿ ಮಠ ವಿರಕ್ತ ಮಠದ ಶ್ರೀಕಂಠ ಸ್ವಾಮೀಜಿ, ಶಾಸಕ ಅನಿಲ್ ಚಿಕ್ಕಮಾದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಜಯಂತೋತ್ಸವ ಸಮಿತಿಯ ಡಿ.ಎನ್.ಮುತ್ತುರಾಜು, ನಾಗರಾಜ್.ಪಿ, ವೇದಾವತಿ.ಟಿ, ನಾಗರಾಜು.ಪಿ, ಕೆ.ಹೆಚ್.ಸತ್ಯನಾರಾಯಣ, ಪುಟ್ಟಸ್ವಾಮಿ, ಶಿವಕುಮಾರ್, ಮಹದೇವ, ಟಿ.ಪುರುಷೋತ್ತಮ, ಮಹದೇವ, ಸಿ.ರಾಜು, ನಾರಾಯಣ ಸ್ವಾಮಿ, ರಮೇಶ್, ಮೋಹನ ಬಿ.ಜೆ, ರವಿ ಕುಮಾರ್.ಎನ್, ಸತೀಶ ಬಿ.ಎನ್, ಪ್ರಸನ್ನ ಕುಮಾರ ಇನ್ನಿತರರು ಉಪಸ್ಥಿತರಿದ್ದರು.

ಮೂರನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 3 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ

ದುಃಖತಪ್ತರು: ಶ್ರೀಮತಿ.ಕೆ. ಲೋಹಿತಾಶ್ವಿನಿ ನಾಯ್ಡು, ಅಕ್ಕಂದಿರು, ಭಾವಂದಿರು, ಅಣ್ಣ ಅತ್ತಿಗೆ ಹಾಗೂ ಕುಟುಂಬವರ್ಗದವರು

ಶ್ರೀ ಟಿ.ಪಿ.ರಮೇಶ್ (ನ್ಯಾಲ್ಲೂರ್)

ಬಿಜೆಪಿ ಮುಖಂಡರು

ಎಂಟನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ ಎಂಟು ವರ್ಷಗಳು ಕಳೆದರೂ ಸದಾ ನಿಮ್ಮ ಗುಣಗಾನದಲ್ಲಿರುವ

ದುಃಖತಪ್ತರು: ನಿಮ್ಮ ಸಹೋದರ ಚುಂಚಯ್ಯ ಮತ್ತು ಕುಟುಂಬವರ್ಗ ಹಾಗೂ ನಿಮ್ಮ ಹೆಣ್ಣು ಮಕ್ಕಳು, ಅಳಿಯಂದಿರು ಮೊಮ್ಮಕ್ಕಳು ಹಾಗೂ ಹಿತೈಷಿಗಳು

ಶ್ರೀ ಕುನ್ನಯ್ಯ

ನಿಧನ: 01–09–2017

SITE FOR SALE

30x50 @ WEST FACING

Suvarna nagar.

Per Sqft Rs. 2500/- only

Call : 89043 19072



ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು



